# THE SECOND EPISTLE OF PAUL THE APOSTLE TO THE CORINTHIANS.

---

## ಅಪೊಸ್ತಲನಾದ ಪೌಲನು
## ಕೊರಿಂಥ್ಯರಿಗೆ ಬರೆದ ಎರಡನೇ ಪತ್ರಿಕೆಯ ಪೀಠಿಕೆ.

---

ಅಪೊಸ್ತಲನಾದ ಪೌಲನು ಎಫೆಸ ಪಟ್ಟಣದಿಂದ ತನ್ನ ಮೊದಲನೇ ಪತ್ರಿಕೆಯನ್ನು ಬರೆದು ಕೊರಿಂಥದ ಸಭೆಯವರಿಗೆ ಕಳುಹಿಸಿದ ತರುವಾಯ, ಅದರಲ್ಲಿ ಬುದ್ಧಿ ಬೋಧನೆಗಳನ್ನು ಅವರಿಗೆ ಚನ್ನಾಗಿ ತಿಳಿಸಲೂ, ಅದರಿಂದುಂಟಾಗುವ ಮೇಲುಗಳನ್ನು ಯೋಚಿಸಲೂ ತಕ್ಕದ್ದಾಗಿ ತೀತನನ್ನು ಅಲ್ಲಿಗೆ ಕಳುಹಿಸಿ ಇದ್ದದರಿಂದ, (೨ಕೊರಿ. ೨. ೧೩; ೭. ೬, ೧೩; ೮. ೬.) ಅವನ ಬರುವಿಕೆಗಾಗಿ ಆಶೆಯಿಂದ ನಿರೀಕ್ಷಿಸುತ್ತಾ ಇದ್ದನು. ಹೀಗಿರುವಾಗ ಎಫೆಸ ಪಟ್ಟಣದಲ್ಲಿ ದೆಮೇತ್ರಿಯನಿಂದ ಕಲಹ ಸಂಭವಿಸಿದ್ದರಿಂದ (೧ಕೊರಿ. ೧೬. ೮. ಅಪೊ. ಕ್ರಿ. ೧೯. ೨೨—೨೦. ೧. ವರಿಗೂ.) ಅವನು ತ್ರೋಯಕ್ಕೆ ಹೋಗಿ ತೀತನನ್ನು ನೋಡ ಬೇಕೆಂಬ ಕೋರಿಕೆಯಿಂದ ಅಲ್ಲಿ ಕಾದುಕೊಂಡಿದ್ದನು. ಅವನು ತ್ರೋಯದಲ್ಲಿರುವಾಗ ಕ್ರಿಸ್ತಮಾರ್ಗದ ಅಭಿವೃದ್ಧಿಗೆ ಅನುಕೂಲವಾದ ಸಾಧನೆಗಳನ್ನು ಸರ್ವ ಜಾಗ್ರತೆಯಿಂದ ಮಾಡುತ್ತಾ ಇದ್ದನು. ಕೊರಿಂಥದ ಸಭೆಯನ್ನು ಕುರಿತು ಅವನಿಗೆ ಬಹಳ ಚಿಂತೆಯುಂಟಾಗಿದ್ದದರಿಂದ, ತ್ರೋಯದಲ್ಲಿ ಬಹಳ ಕಾಲ ಇರುವದಕ್ಕೆ ಮನಸ್ಸಿಲ್ಲದೆ, ಮಕೆದೋನ್ಯಕ್ಕೆ ಹೋದನು. ಅಲ್ಲಿ ಮನೋಕ್ಲೇಷವುಳ್ಳವನಾಗಿ ಸ್ವಲ್ಪ ಕಾಲವಿರುವಾಗ, ಕೊರಿಂಥದ ಸಭೆಯನ್ನು ಕುರಿತು ಅವನು ಬಹಳವಾಗಿ ಎದುರು ನೋಡುತ್ತಿದ್ದ ಸಮಾಚಾರವು ಅವನಿಗೆ ಬಂದು ಮುಟ್ಟಿತು. (೨. ೧೨, ೧೩; ೭. ೬.)

ತೀತನು ಬಂದು ಹೇಳಿದ ಸಮಾಚಾರವು ಕೂಡುವಷ್ಟು ಸಂತೋಷವನ್ನೂ ಆದರಣೆಯನ್ನೂ ಕೊಡ ತಕ್ಕದ್ದಾಗಿತ್ತು. ಸಭೆಯಲ್ಲಿ ಅನೇಕರು ತಮ್ಮ ತಪ್ಪುಗಳನ್ನು ತಿಳಿದು ದುಃಖ ಪಟ್ಟು, ಪೌಲನ ಕಟ್ಟಳೆಗಳಿಗೆ ಒಳ ಪಟ್ಟು, ಅವನ ಮೇಲೆ ತಮಗೆ ಉಂಟಾಗಿರುವ ಅಪೇಕ್ಷೆಯನ್ನು ತಿಳಿಯ ಪಡಿಸಿ, ಅವನನ್ನು ನೋಡ ಬೇಕೆಂಬ ತಮ್ಮ ಕೋರಿಕೆಯನ್ನು ಸಹ ತಿಳಿಸಿದರು. (೭. ೯—೧೬; ೮. ೭.) ಪೌಲನಿಗೆ ಉಂಟಾಗಿದ್ದ ಇಂಥಾ ಸಂತೋಷದ ಸಂಗಡ ಸ್ವಲ್ಪ ದುಃಖವೂ ಕೂಡಿತ್ತು. ಕೊರಿಂಥದ ಸಭೆಯಲ್ಲಿ ಕೆಲವು ಕಳ್ಳ ಬೋಧಕರು ಎದ್ದು, ತಾವು ಸ್ವಚ್ಛವಾದ ಇಬ್ರಿಯ ಜಾತಿಯವರೆಂದೂ, (೧೧. ೨೨.) ಕ್ರಿಸ್ತನಿಗೆ ನಾವು ಮುಖ್ಯ ಸಮ್ಮಂಧಿಕರೆಂದೂ, (೫. ೧೬; ೧೦. ೭.) ಯೆರೂಸಲೇಮಿನಲ್ಲಿರುವ ಹಿರಿಯರಿಂದ ಉಪಚಾರಪತ್ರಿಕೆಗಳನ್ನು ಹೊಂದಿದವರೆಂದೂ, (೩. ೧; ೫. ೧೨; ೧೦. ೧೨.) ಅಪೊಸ್ತಲ ಅಧಿಕಾರ ಉಳ್ಳವರೆಂದೂ, (೧೧. ೧೩, ೨೩.) ತಮಗೆ ಸೇರಿದ ಕಕ್ಷಿಯವರನ್ನು ನಡಿಸ ತಕ್ಕವರೆಂದೂ, (೧೧. ೨೦.) ಹೆಚ್ಚಳ ಪಟ್ಟರು. ಮತ್ತು ಈ ಕಳ್ಳ ಬೋಧಕರು (೨. ೧೭; ೧೧. ೪, ೧೨—೧೫.) ಪೌಲನು ಯಥಾರ್ಥವೂ ಮನೋಸ್ಥಿರವೂ ಉಳ್ಳವನಲ್ಲವೆಂದೂ, ಮಾತಿನಲ್ಲಿ ಬಲಿಷ್ಠನೂ, ಕ್ರಿಯೆಯಲ್ಲಿ ಬಲಹೀನನೂ, ಹೇಳಿದ್ದನ್ನು ಪೂರೈಸ ಶಕ್ತಿ ಇಲ್ಲದವನೂ ಎಂದೂ, ಅಂತಸ್ತಿನಲ್ಲಿಯೂ ಅಧಿಕಾರದಲ್ಲಿಯೂ ತಮಗೆ ಸಮಾನನಲ್ಲವೆಂದೂ ಬಹಳವಾಗಿ ಹೇಳಿಕೊಂಡರು. (೧. ೧೭; ೭. ೨; ೧೦. ೧, ೨, ೯, ೧೦; ೧೧. ೬; ೧೨. ೧೧, ೧೬, ೧೭; ೧೩. ೩, ೬.) ಇದಲ್ಲದೆ ಆ ಸಭೆಯಲ್ಲಿ ಅಜ್ಞಾನವೂ ದುರ್ಮಾರ್ಗವೂ ಎಂಬ ಅಂಧಕಾರವು ಇನ್ನೂ ಪೂರ್ಣವಾಗಿ ನಿವರ್ತಿಯಾಗಲಿಲ್ಲ. (೬. ೧೪—೧೮; ೧೨. ೨೦, ೨೧.)

ಹೀಗೆ ಪೌಲನು ಕೇಳಿದ ಸಮಾಚಾರದಿಂದ ಅವನ ಮನಸ್ಸಿಗೆ ಸಂತೋಷವೂ ದುಃಖವೂ ಉಂಟಾಗಿದ್ದ ಕಾಲದಲ್ಲಿ ಅವನು ಈ ಪತ್ರಿಕೆಯನ್ನು ಬರೆದದರಿಂದ, ಕೆಲವು ಕಡೆ ಅವರನ್ನು ಹೊಗಳಿ ಸಂತೋಷವಾಗಿಯೂ, ಕೆಲವು ಕಡೆ ಅವರ ಮೇಲೆ ತಪ್ಪು ಹೊರಿಸಿ ದುಃಖವಾಗಿಯೂ ಬರೆಯುತ್ತಾನೆ. ಸಭೆಯಲ್ಲಿ ಉತ್ತಮರಾಗಿದ್ದವರನ್ನು ಉತ್ಸಾಹ ಪಡಿಸಿ, ಅವರು ಸತ್ಕಾರ್ಯಗಳಲ್ಲಿ ಸಂಪೂರ್ಣರಾಗುವ ಹಾಗೆ ಅವರನ್ನು ಬೋಧಿಸಿ, ಕಳ್ಳ ಬೋಧಕರಿಗೆ ತೊಲಗುವ ಹಾಗೆ ಎಚ್ಚರಿಸುವದೇ ಈ ಪತ್ರಿಕೆಯ ಮುಖ್ಯ ಗುರಿಯು.

ಮೊದಲನೇ ಪತ್ರಿಕೆಯು ಬರೆಯಲ್ಪಟ್ಟ ಕೆಲವು ತಿಂಗಳ ತರುವಾಯ, ಈ ಪತ್ರಿಕೆಯು ಮಕೆದೋನ್ಯ ದೇಶದಲ್ಲಿ, ಒಂದು ವೇಳೆ ಥೆಸ್ಸಲೊನೀಕ ಪಟ್ಟಣದಲ್ಲಿ ೫೭ನೇ ವರುಷದಲ್ಲಿ ಬರೆಯಲ್ಪಟ್ಟಿತೆಂದು ತೋರುತ್ತದೆ. (೮. ೧—೬.) ಇದು ತೀತನ ವಶವಾಗಿಯೂ, ಯೆರೂಸಲೇಮಿನ ಬಡ ಕ್ರೈಸ್ತರಿಗೆ ಮಾಡಲ್ಪಟ್ಟ ಧರ್ಮವಿಷಯದಲ್ಲಿ ಅವನಿಗೆ ಸಹಾಯಕರಾಗಿ ಅವನ ಸಂಗಡ ಹೋದ ಇಬ್ಬರು ಸಹೋದರರ ವಶವಾಗಿಯೂ ಕಳುಹಿಸಲ್ಪಟ್ಟಿತು. (೮. ೬, ೧೬—೨೪.)

ಈ ಪತ್ರಿಕೆಯನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು.

I. ಕರುಣಾಸಮುದ್ರನಾದ ದೇವರ ಆಶೀರ್ವಾದಗಳ ನಿಮಿತ್ತ ಆತನನ್ನು ಸ್ತುತಿಸಿದ್ದು. (೧. ೧—೧೧.) ಪೌಲನು ತನ್ನ ನಿಜವನ್ನೂ ಯಥಾರ್ಥತ್ವವನ್ನೂ ಹೇಳಿ ತೋರಿಸಿದ್ದು. (೧೨. ವ. ೨. ೪. ವಚನದ ವರಿಗೂ.) ಜಾರತ್ವವೆಂಬ ತನ್ನ ಪಾಪವನ್ನು ತಿಳಿದು ದುಃಖ ಪಟ್ಟ ಮನುಷ್ಯನನ್ನು ನಡಿಸ ತಕ್ಕ ವಿಧವು. (೫—೧೩. ವ.) ಅಪೊಸ್ತಲೋದ್ಯೋಗದ ಶ್ರೇಷ್ಠತ್ವ. (೧೪. ವ., ೪. ೬. ವಚನದ ವರಿಗೂ.) ಆ ಉದ್ಯೋಗವನ್ನು ಮಾಡುವದಕ್ಕೆ ತಕ್ಕ ಕಾರಣಗಳು. ಅದನ್ನು ಮಾಡುವದರಲ್ಲಿ ಉಂಟಾಗುವ ಆನಂದವು ಇವುಗಳನ್ನು ಕುರಿತದ್ದು. (೭. ವ. ೫. ೧೦. ವಚನದ ವರಿಗೂ.) ಕೊರಿಂಥದ ಸಭೆಯವರನ್ನು ಸುವಾರ್ತೆಯ ಕಟ್ಟಳೆಗಳಿಗೆ ವಿಧೇಯರಾಗಿ ನಡಿಯ ಪ್ರೇರೇಪಿಸಿದ್ದು. (೧೧. ವ., ೭. ೧೬. ವಚನದ ವರಿಗೂ.)

II. ಯೆಹೂದ್ಯ ದೇಶದ ಕ್ರೈಸ್ತರಿಗೆ ಮಕೆದೋನ್ಯದ ಸಭೆಯವರು ಮಾಡಿದ ಪ್ರಕಾರ, ಉದಾರವಾಗಿ ಧರ್ಮ ಸಹಾಯ ಮಾಡುವ ಹಾಗೆ ಪ್ರೇರೇಪಿಸಿದ್ದು. (೮ನೇ ೯ನೇ ಸಂಧಿ.)

III. ಗ್ರಂಥಕರ್ತನಾದ ಪೌಲನು ಕಳ್ಳಬೋಧಕರು ಹೊರಿಸಿದ ಅಪರಾಧವನ್ನು ನಿರಾಕರಿಸಿ, ತಾನು ಸರಿಯಾದ ಅಪೊಸ್ತಲ ಅಧಿಕಾರವುಳ್ಳವನೆಂದೂ, ಎದುರಾಳಿಗಳು ಹೆಚ್ಚಳವಾಗಿ ಹೇಳಿದವುಗಳೆಲ್ಲಾ ವ್ಯರ್ಥವೆಂದೂ, ತನ್ನ ಪ್ರಯಾಸವೂ, ತನಗೆ ಉಂಟಾದ ಸಹಾಯಗಳೂ, ಇವೇ ತನ್ನ ಅಪೊಸ್ತಲ ಅಧಿಕಾರಕ್ಕೆ ತಕ್ಕ ದೃಷ್ಟಾಂತವೆಂದೂ ತೋರಿಸಿ, ಕಳ್ಳಬೋಧಕರ ಸುಳ್ಳು ಬೋಧನೆಗಳಿಗೆ ತೊಲಗುವ ಹಾಗೆ ಅವರನ್ನು ಎಚ್ಚರಿಸಿ, ಕೊರಿಂಥಕ್ಕೆ ಬರ ಬೇಕೆಂಬ ತನ್ನ ಕೋರಿಕೆಯನ್ನು ತಿಳಿಯ ಪಡಿಸಿ, ವಂದನೆಗಳಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೧೦—೧೩. ಸಂಧಿಯ ವರಿಗೂ.)

---

# THE SECOND EPISTLE OF PAUL THE APOSTLE TO THE CORINTHIANS.

## ಅಪೊಸ್ತಲನಾದ ಪೌಲನು

# ಕೊರಿಂಥ್ಯರಿಗೆ ಬರೆದ ಎರಡನೇ ಪತ್ರಿಕೆ.

ವಂದನೆ; ದೇವರ ಕಟಾಕ್ಷಕ್ಕಾಗಿ ಆತನನ್ನು ಸ್ತುತಿಸಿದ್ದು.

1. [1]ದೇವರ [2]ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನೂ, ಸಹೋದರನಾದ [3]ತಿಮೊಥೆಯನೂ,
೨ ಕೊರಿಂಥದಲ್ಲಿರುವ ದೇವರ ಸಭೆಗೂ, [4]ಸಮಸ್ತ ಅಕಾಯದಲ್ಲಿರುವ ಪರಿಶುದ್ಧರೆಲ್ಲರಿಗೂ— ನಮ್ಮ ತಂದೆ
ಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.
೩ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇವರಿಗೆ ಸ್ತೋತ್ರವು; ಅವನು [5]ಕನಿಕರಗಳ ತಂದೆ
೪ ಯೂ ಎಲ್ಲಾ ಆದರಣೆಯ ದೇವರೂ ಆಗಿದ್ದು, ನಾವೇ ದೇವರಿಂದ ಆದರಿಸಲ್ಪಡುವ ಆದರಣೆಯ ಮೂಲ
ವಾಗಿ ಎಲ್ಲಾ ಉಪದ್ರದಲ್ಲಿ ಇರುವವರನ್ನು ಆದರಿಸ ಶಕ್ತರಾಗುವ ಹಾಗೆ, [6]ನಮ್ಮನ್ನು ನಮ್ಮ ಎಲ್ಲಾ ಉಪ
೫ ದ್ರದಲ್ಲಿ ಆದರಿಸುತ್ತಾನೆ. ಯಾಕಂದರೆ ಕ್ರಿಸ್ತನ ಶ್ರಮೆಗಳು ನಮ್ಮಲ್ಲಿ ಹೆಚ್ಚುವ ಪ್ರಕಾರವೇ, [7]ನಮ್ಮ ಆದರ
೬ ಣೆಯು ಕ್ರಿಸ್ತನ ಮುಖಾಂತರ ಹೆಚ್ಚುತ್ತದೆ. ಆದರೆ ನಾವು ಉಪದ್ರ ಪಟ್ಟರೆ, ನಾವು ಪಡುವ ಅದೇ ಶ್ರಮೆ

1. ಪೌಲನು ಸಭೆಯನ್ನು ವಂದಿಸಿದ ತರುವಾಯ (೧, ೨. ವ.) ಮತ್ತೊಬ್ಬರನ್ನು ಆದರಿಸುವ ಉದ್ದಿಶ್ಯ, ಕರುಣೆಯುಳ್ಳ ದೇವರು ತಮಗೆ ಆದರಣೆ ಕೊಟ್ಟನೆಂದೂ, (೩—೭. ವ.) ದೊಡ್ಡ ಆಪತ್ತಿನಿಂದ ತಮ್ಮನ್ನು ರಕ್ಷಿಸಿದ್ದಕ್ಕಾಗಿಯೂ ಆತನನ್ನು ಸ್ತುತಿಸುತ್ತಾನೆ. (೮—೧೧. ವ.)

2. ರೋಮಾ. ೧. ೧. ೧ ಕೊರಿ. ೧. ೧. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

3. ತಿಮೊಥೆಯನು ಮುಂಚೆ ಮಕೆದೋನ್ಯಕ್ಕೆ ಹೋಗಲೂ, ಕೂಡುವದಾದರೆ ಅಲ್ಲಿಂದ ಕೊರಿಂಥಕ್ಕೆ ಹೋಗಲೂ ನೆನಸಿ ಪ್ರಯಾಣ ಮಾಡಿದನೆಂದು ತೋರುತ್ತದೆ. (೧ಕೊರಿ. ೧೬. ೧೦.) ಈಗ ಅವನು ಪೌಲನ ಸಂಗಡ ಇರುವದನ್ನು ಯೋಚಿಸುವಾಗ ಕೊರಿಂಥಕ್ಕೆ ಹೋಗಲಿಲ್ಲವೆಂದು ನೆನಸ ಬೇಕು.

4. ಅಕಾಯ ಎಂಬುವದು ಗ್ರೇಕ ದೇಶಕ್ಕೆ ದಕ್ಷಿಣ ಕಡೆ ರೋಮಾಯರ ಅಧಿಕಾರಕ್ಕೊಳ ಪಟ್ಟ ದೇಶವಾಗಿತ್ತು. ಕೊರಿಂಥ ಅದಕ್ಕೆ ಮುಖ್ಯ ಪಟ್ಣವಾಗಿತ್ತು. ಕೊರಿಂಥದಲ್ಲಿಯೂ ಕೆಂಕ್ರೆಯದಲ್ಲಿಯೂ ಸಭೆಗಳಿದ್ದ ಪ್ರಕಾರ (ರೋಮಾ. ೧೬. ೧.) ಆ ದೇಶಕ್ಕೆ ಶೇರಿದ ಇನ್ನೂ ಕೆಲ ಊರುಗಳಲ್ಲಿಯೂ ಸಭೆಗಳು ಉಂಟಾಗಿದ್ದವು. ಆ ಸಭೆಗಳೆಲ್ಲೆಲ್ಲಾ ಈ ಪತ್ರಿಕೆಯನ್ನು ಓದ ಬೇಕೆಂಬುವದು ಪೌಲನ ಅಪೇಕ್ಷೆಯಾಗಿತ್ತು.

5. ಕನಿಕರಗಳ ತಂದೆ ಎಂಬುವದು ಇಬ್ರೀಯ ಭಾಷೆಯ ರೀತಿಯ ಪ್ರಕಾರ ಸಂಪೂರ್ಣವಾದ ಕನಿಕರಗಳುಳ್ಳವನಾಗಿಯೂ ಅವುಗಳನ್ನು ಅನುಗ್ರಹಿಸುವವನಾಗಿಯೂ ಇರುವ ದೇವರನ್ನು ಕುರಿತದ್ದು. ಆತನು ಯೇಸು ಕ್ರಿಸ್ತನ ತಂದೆಯಾಗಿರುವದರಿಂದ ಆತನ ಕೃಪೆಯ ಒಡಂಬಡಿಕೆಗೆ ಒಳ ಪಟ್ಟು ಅದರ ಮಿರಾಶಿಗಳನ್ನು ಹೊಂದಿದವರೆಲ್ಲರಿಗೂ ಕನಿಕರಗಳನ್ನು ಅನುಗ್ರಹಿಸುವ ದೇವರಾಗಿದ್ದಾನೆ.

6. ಪೌಲನು ಕೆಲ ಸಮಯಗಳಲ್ಲಿ ಬಹುವಚನವಾಗಿ ಮಾತಾಡುವದುಂಟು. (೧ಥೆಸ್ಸ. ೨. ೧೮.) ಆದರೆ ಇಲ್ಲಿ ಅವನು ತಿಮೊಥೆಯನನ್ನೂ ಬೇರೆ ಕೆಲವು ಸಹೋದರರನ್ನೂ ಶೇರಿಸಿ ಕೊಂಡು "ನಮ್ಮನ್ನು" ಎಂದು ಬಹುವಚನವಾಗಿ ಹೇಳುತ್ತಾನೆ.

7. ಕ್ರಿಸ್ತನ ಅವಯವಗಳಾಗಿರುವ ನಾವು ಆತನ ನಿಮಿತ್ತ ಬರುವ ಉಪದ್ರಗಳನ್ನು ಆತನ ಹಾಗೆಯೇ ತಾಳ್ಮೆಯಿಂದ ಸಹಿಸಿ ಕೊಳ್ಳುತ್ತೇವೆ. ನಮ್ಮ ಶಿರಸ್ಸಾಗಿರುವ ಆತನು ನಮಗೆ ಸಂಭವಿಸುವ ಉಪದ್ರಗಳಲ್ಲಿ ಬೇಕಾದ ಆದರಣೆಯನ್ನು ಕೊಡುತ್ತಾನೆ. ಇಂಥಾ ಆದರಣೆ ನಮಗೆ ಮಾತ್ರವಲ್ಲ, ಮತ್ತೊಬ್ಬರಿಗೂ ಪ್ರಯೋಜನ ಕೊಡ ತಕ್ಕದ್ದಾಗಿರುತ್ತದೆ. ನಾವು ಸಹಿಸಿ ಕೊಳ್ಳುವದರಿಂದ ದೇವರ ಕೃಪೆ ಹೊಂದಿದವರೆಂದು ನಮ್ಮ ಅನುಭವದಿಂದ ತೋರಿಸುವ ಕಾರಣ, ಉಪದ್ರ ಪಡುವ ಮತ್ತೊಬ್ಬರಿಗೆ ಆದರಣೆ ಮಾಡ ತಕ್ಕವರಾಗಿರುತ್ತೇವೆ, ಅನ್ನುತ್ತಾನೆ. ಕರ್ತನ ದಾಸರು ಪಡುವ ಅಲ್ಪ ಉಪದ್ರಕ್ಕೆ ಆತನಿಂದ ಬರುವ ಆದರಣೆ ಅಧಿಕವಾಗಿದೆ.



ಗಳ ತಾಳ್ಮೆಯಲ್ಲಿ ಬಲವಾಗಿರುವ ನಿಮ್ಮ ಆದರಣೆ ರಕ್ಷಣೆಗಳಿಗೋಸ್ಕರವೇ; ಆದರಣೆ ಪಟ್ಟರೆ, ನಿಮ್ಮ ಆದರಣೆ
೭ ರಕ್ಷಣೆಗಳಿಗೋಸ್ಕರವೇ. ಮತ್ತು ಶ್ರಮೆಗಳಲ್ಲಿ ಹ್ಯಾಗೋ, ಹಾಗೆಯೇ ಆದರಣೆಯಲ್ಲಿಯೂ ಪಾಲುಗಾರ
ರಾಗಿದ್ದೀರೆಂದು ತಿಳಿದಿರುವದರಿಂದ, ನಮ್ಮ ನಿರೀಕ್ಷೆಯು ನಿಮ್ಮ ವಿಷಯವಾಗಿ ದೃಢವಾಗಿದೆ.
೮ ಸಹೋದರರೇ, ಆಸ್ಯದಲ್ಲಿ ನಮಗೆ ಉಂಟಾದ ಉಪದ್ರವನ್ನು ಕುರಿತು ನೀವು ಅರಿಯದಿರ ನಮಗೆ ಮನ
ಸ್ಸಿಲ್ಲ; ಏನಂದರೆ [1]ನಾವು ಪ್ರಾಣ ಸಂದೇಹ ಪಡುವಷ್ಟು, ಅತ್ಯಧಿಕವಾದಂಥ, ಬಲ ಮಿಾರುವಂಥ, ಭಾರ
೯ ಪಟ್ಟೆವು. ಆದರೆ, ನಾವು ನಮ್ಮ ಮೇಲೆ ಅಲ್ಲ, ಸತ್ತವರನ್ನು ಎಬ್ಬಿಸುವ ದೇವರ ಮೇಲೆ ನಂಬಿಕೆ ಇಡುತ್ತಿ
೧೦ ರುವ ಹಾಗೆ, [2]ಮರಣದ ನಿರ್ಣಯವನ್ನು ನಮ್ಮಲ್ಲಿ ಹೊಂದಿದೆವು. ಅವನು ಅಷ್ಟು ದೊಡ್ಡ ಮರಣದಿಂದ
ನಮ್ಮನ್ನು ತಪ್ಪಿಸಿದನು, ಮತ್ತು ತಪ್ಪಿಸುತ್ತಾನೆ; ಇನ್ನೂ ತಪ್ಪಿಸುವನೆಂದು, ಅವನನ್ನು ನಂಬಿದ್ದೇವೆ.
೧೧ ನೀವು ಸಹ, ಅನೇಕರ ಮುಖಾಂತರವಾಗಿ ನಮಗಾದ ಉಪಕಾರಕ್ಕೋಸ್ಕರ ಅನೇಕರಿಂದ ನಮ್ಮ ವಿಷಯ
ಸ್ತೋತ್ರ ಉಂಟಾಗುವ ಹಾಗೆ, ನಮಗೋಸ್ಕರ ಬೇಡಿ ಕೊಂಡು, [3]ಸಹಾಯ ಮಾಡುತ್ತೀರಲ್ಲ?

ಪೌಲನು ಕೊರಿಂಥಕ್ಕೆ ಹೋಗ ತಾಮಸವಾದದ್ದಕ್ಕೆ ಕಾರಣವೂ; ಗುಣ ಪಟ್ಟ ಅಪರಾಧಿಯನ್ನು ಅಂಗೀಕರಿಸ ಆಜ್ಞಾಪಿಸಿದ್ದೂ.

೧೨ [4]ಯಾಕಂದರೆ ದೇವರ ಯಥಾರ್ಥದಲ್ಲಿಯೂ ನಿಷ್ಕಪಟದಲ್ಲಿಯೂ, ಮಾಂಸಜ್ಞಾನದಿಂದಲ್ಲ, ದೇವರ ಕೃಪೆ
ಯಿಂದಲೇ ಲೋಕದಲ್ಲಿ, ಮುಖ್ಯವಾಗಿ ನಿಮ್ಮ ವಿಷಯದಲ್ಲಿ, ನಡೆದು ಕೊಂಡೆವೆಂಬ ನಮ್ಮ ಮನಸ್ಸಾಕ್ಷಿಯ
೧೩ ಸಾಕ್ಷಿಯೇ ನಮ್ಮ [5]ಹೆಚ್ಚಳವಾಗಿದೆ. ಯಾಕಂದರೆ ನೀವು ಓದುವಂಥ, ಇಲ್ಲವೆ ತಿಳಿದು ಕೊಳ್ಳುವಂಥ
ಮಾತುಗಳನ್ನಲ್ಲದೆ, ಬೇರೆಯವುಗಳನ್ನು ನಿಮಗೆ ಬರೆಯೆವು; ಅಂತ್ಯದ ಮಟ್ಟಿಗೂ ಅವುಗಳನ್ನು ತಿಳಿದು ಕೊ
೧೪ ಳ್ಳುವಿರೆಂದು ನಿರೀಕ್ಷಿಸುತ್ತೇನೆ. ಕರ್ತನಾದ ಯೇಸುವಿನ ದಿವಸದಲ್ಲಿ ನೀವು ನಮಗೆ ಹ್ಯಾಗೋ, ಹಾಗೆಯೇ
ನಾವು ನಿಮಗೆ ಹೆಚ್ಚಳವಾಗಿದ್ದೇವೆಂದು, ನಮ್ಮನ್ನು ಪಾಲಾಗಿ ತಿಳಿದು ಕೊಂಡ ಪ್ರಕಾರವೇ.
೧೫ ಮತ್ತು ಈ ನಂಬಿಕೆಯಾಗಿ, ನಿಮಗೆ ಎರಡನೇ ಉಪಕಾರವಾಗುವ ಹಾಗೆ, [6]ಮೊದಲು ನಿಮ್ಮ ಹತ್ತರ

1. ಎಫೆಸದಲ್ಲಿ ದೆಮೇತ್ರಿಯನಿಂದ ಉಂಟಾದ ಕಲಹವನ್ನು ಕುರಿತು ಪೌಲನು ಹೀಗೆ ಹೇಳುತ್ತಾನೆಂದು ಅನೇಕರು ನೆನಸುತ್ತಾರೆ. (ಅಪೊ. ಕ್ರಿ. ೧೯. ೨೩—೩೧.) ಆದರೆ ಆ ಸಮಯದಲ್ಲಿ ಅವನಿಗೆ ಪ್ರಾಣಾಪಾಯ ಉಂಟಾಗಿತ್ತೆಂದು ನಿಶ್ಚಯವಾಗಿ ತೋರಲಿಲ್ಲ. ಅವನಿಗೆ ಒಂದು ಮೋಸಕರವಾದ ವ್ಯಾಧಿ ಸಂಭವಿಸಿತ್ತೆಂದೂ, ಅವನಿಗುಂಟಾಗಿದ್ದ ಉಪದ್ರವೇ ಆ ವ್ಯಾಧಿಗೆ ಕಾರಣವಾಗಿತ್ತೆಂದೂ ನೆನಸ ತಕ್ಕದ್ದು.

2. ಮರಣ ಬರುವದೆಂಬ ನಿಶ್ಚಯವಿದ್ದದರಿಂದ ಆ ಆಪತ್ತಿಗೆ ತಪ್ಪಿದ್ದು ಹೊಸ ಜೀವ ಹೊಂದಿದ ಹಾಗೆ ಇತ್ತು. (೪. ೧೧; ೧೧. ೨೩. ಅಪೊ. ಕ್ರಿ. ೧೪. ೧೯, ೨೦. ೧ಕೊರಿ. ೧೫. ೩೧. ಇಬ್ರೀ. ೧೧. ೧೯.)

3. ಭೂತ ಭವಿಷ್ಯದ್ವರ್ತಮಾನಕಾಲಗಳಲ್ಲಿಯೂ ಸಂಭವಿಸುವ ವಿಘ್ನಗಳಿಂದ ತಪ್ಪಿಸುವ ಸರ್ವಶಕ್ತನಾದ ದೇವರ ದಾಸರು ಮಾಡುವ ವಿಜ್ಞಾಪನೆಯನ್ನು ಕೇಳಿ ಅನುಗ್ರಹಿಸುತ್ತಾನೆ. ಅನೇಕರು ಮಾಡುವ ಪ್ರಾರ್ಥನೆಗಾಗಿ ಅನುಗ್ರಹಿಸುವ ಕೃಪೆಯ ನಿಮಿತ್ತ ಆ ಕೃಪಾಮೂಲ ಕರ್ತನಿಗೆ ಅನೇಕರಿಂದ ಮಹಿಮೆ ಉಂಟಾಗುತ್ತದೆ.

4. ತಾನು ಪ್ರಸಂಗಿಸಿದ ಸುವಾರ್ತೆಯ ಬೋಧನೆಗಳಿಗೆ ಸರಿಯಾಗಿ ಯಾವಾಗಲೂ ಯಥಾರ್ಥವಾಗಿ ನಡೆದ ಪ್ರಕಾರವೇ, ಕೊರಿಂಥದ ಸಭೆಯವರನ್ನು ಕಾಣುವದಕ್ಕೆ ತನ್ನ ಕೋರಿಕೆ ಯಥಾರ್ಥವಾಗಿತ್ತೆಂದು ಪೌಲನು ಹೇಳುತ್ತಾನೆ. (೧೨—೨೨. ವ.) ಆದರೂ ತನ್ನ ಕೋರಿಕೆಯ ಹಾಗೆ ಸಂಗಡಲೇ ಮಾಡದೆ ತಾಮಸವಾಗಿದ್ದದ್ದಕ್ಕೆ, ದುಃಖದಿಂದಲೂ ಮನೋವ್ಯಾಕುಲದಿಂದಲೂ, ಅವರ ಬಳಿಗೆ ಬರ ಇಷ್ಟವಿಲ್ಲದ್ದೇ ಕಾರಣವೆಂದು ಹೇಳುತ್ತಾನೆ. (೨೩. ವ., ೨. ೪. ವರಿಗೂ.) ತನ್ನ ಪಾಪವನ್ನು ತಿಳುಕೊಂಡು ದುಃಖ ಪಟ್ಟದ್ದ ಮನುಷ್ಯನನ್ನು ತಿರಿಗಿ ಸಭೆಯಲ್ಲಿ ಶೇರಿಸಿ ಕೊಳ್ಳ ಬೇಕೆಂದೂ, (೫—೧೧. ವ.) ಕೊರಿಂಥದ ಸಭೆಯನ್ನು ಕುರಿತು ತನಗುಂಟಾಗಿದ್ದ ಚಿಂತೆಯು ತೀತನು ಬಂದದರಿಂದ ಸ್ವಲ್ಪ ನಿವರ್ತಿಯಾಯಿತೆಂದೂ ಹೇಳಿ (೧೨, ೧೩. ವ.) ಸತ್ಯಮಾರ್ಗವು ವೃದ್ಧಿ ಹೊಂದಿದ್ದಕ್ಕಾಗಿ ದೇವರನ್ನು ಸ್ತುತಿಸುತ್ತಾನೆ. (೨. ೧೪. ವಚನದ ವ್ಯಾಖ್ಯಾನ ನೋಡ ಬೇಕು.)

5. ಲೋಕದ ಮುಂದೆಯೂ ಸಭೆಯ ಮುಂದೆಯೂ ಪೌಲನು ನಿಷ್ಕಪಟವಾಗಿಯೂ ಬಹು ಯಥಾರ್ಥವಾಗಿಯೂ ನಡೆದು ಕೊಂಡದ್ದನ್ನು ಅವನ ಮನಸ್ಸಾಕ್ಷಿಪೂರ್ವಕವಾಗಿ ಹೇಳ ತಕ್ಕದ್ದು ಅವನಿಗೆ ಮಹಾ ಹೆಚ್ಚಳವಾದದ್ದೇ. ಅದನ್ನು ಕೊರಿಂಥ್ಯರು ಸಹ ಒಪ್ಪಿಕೊಂಡರು. ಅಂಥ ಹೆಚ್ಚಳವು ತನಗೂ ಅವರಿಗೂ ಎಂದೆಂದಿಗೂ ಇರುವದೆಂದು ಅನ್ನುತ್ತಾನೆ.

6. ಪೌಲನು ಮೊದಲು ಕೊರಿಂಥಕ್ಕೂ ತರುವಾಯ ಮಕೆದೋನ್ಯಕ್ಕೂ ಹೋಗ ಯೋಚನೆಯಾಗಿದ್ದನು. (೧೨. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಅವನು ತನ್ನ ಯೋಚನೆಯ ಹಾಗೆ ಮಾಡಿದ್ದರೆ, ಕೊರಿಂಥಕ್ಕೆ ಹೋಗಲೂ ಬರಲೂ ಎರಡು ಸಾರಿ ಪ್ರಯಾಣ ಮಾಡಿರುವನಾದರೆ, ಎರಡನೇ ಸಾರಿ ಅವರಿಗೆ ಪ್ರಯೋಜನ ಉಂಟಾಗಿರುವದು. (೧೬. ವ.)

೧೬ ಬರಲೂ, ನಿಮ್ಮ ಬಳಿಯಿಂದ ಮಕೆದೋನ್ಯಕ್ಕೆ ಹೋಗಲೂ, ತಿರಿಗಿ ಮಕೆದೋನ್ಯದಿಂದ ನಿಮ್ಮ ಹತ್ತರ
ಬರಲೂ, ನಿಮ್ಮಿಂದ [1]ಯೆಹೂದಕ್ಕೆ ಮುಂಕಳುಹಿಸಲ್ಪಡಲೂ, ಮನಸ್ಸು ಮಾಡಿದೆನು.
೧೭ ಹಾಗಾದರೆ ಇದನ್ನು ಯೋಚಿಸಿ ಹೌರತನ ನಡಿಸಿದೆನೋ? ಇಲ್ಲವೆ ಹೌದು ಹೌದು, ಅಲ್ಲ ಅಲ್ಲ, ಎಂಬು
೧೮ ವದು ನನ್ನಲ್ಲಿ ಇರುವ ಹಾಗೆ, ಯೋಚಿಸುವವುಗಳನ್ನು ಮಾಂಸದ ಪ್ರಕಾರ ಯೋಚಿಸುತ್ತೇನೋ? ಆದರೆ
೧೯ [2]ನಂಬಿಕೆಯುಳ್ಳ ದೇವರ ಆಣೆ, ನಿಮಗೆ ಆದ ನಮ್ಮ ವಾಕ್ಯವು ಹೌದೂ ಅಲ್ಲವೂ ಆಗಲಿಲ್ಲ. ಯಾಕಂದರೆ
ನನ್ನಿಂದಲೂ, [3]ಸಿಲ್ವಾನನಿಂದಲೂ, ತಿಮೊಥೆಯನಿಂದಲೂ, ನಾವು ನಿಮ್ಮಲ್ಲಿ ಸಾರಿದ ದೇವರ ಮಗನಾದಂಥ
೨೦ ಯೇಸು ಕ್ರಿಸ್ತನು ಹೌದೂ ಅಲ್ಲವೂ ಆಗಲಿಲ್ಲ; ಆದರೆ ಅವನಲ್ಲಿ [4]ಹೌದೇ ಆಯಿತು. ಯಾಕಂದರೆ ದೇವರ
ವಾಗ್ದತ್ತಗಳಷ್ಟು ನಮ್ಮ ಮುಖಾಂತರದಿಂದಾಗುವ ದೇವರ ಮಹಿಮೆಗಾಗಿ, ಅವನಲ್ಲಿ ಹೌದು, ಅವನಲ್ಲಿ
[5]ಆಮೆನ್, ಆಗಿವೆ.
೨೧ ಆದರೆ ನಮ್ಮನ್ನು ನಿಮ್ಮ ಸಂಗಡ ಕ್ರಿಸ್ತನಲ್ಲಿ ಸ್ಥಿರ ಪಡಿಸುವವನೂ ನಮ್ಮನ್ನು [6]ಅಭಿಷೇಕಿಸಿದವನೂ ದೇವರೇ;
೨೨ ನಮಗೆ ಮುದ್ರೆ ಹಾಕಿದವನೂ, ಆತ್ಮದ ಮುಂಗಡವನ್ನು ನಮ್ಮ ಹೃದಯಗಳಲ್ಲಿ ಕೊಟ್ಟವನೂ, ಅವನೇ.
೨೩ ನಾನಾದರೆ, [7]ನಿಮ್ಮನ್ನು ಕನಿಕರಿಸಿ ಇನ್ನು ಕೊರಿಂಥಕ್ಕೆ ಬರಲಿಲ್ಲವೆಂದು, ನನ್ನ ಪ್ರಾಣದ ಮೇಲೆ ದೇವರನ್ನು
೨೪ ಸಾಕ್ಷಿಯಾಗಿ ಕರೆಯುತ್ತೇನೆ. ನಿಮ್ಮ ವಿಶ್ವಾಸದ ಮೇಲೆ ಧೊರೆತನ ಮಾಡುತ್ತೇವಂತಲ್ಲ, ನಿಮ್ಮ ಸಂತೋ
ಷಕ್ಕೆ ಸಹಾಯಕರಾಗಿದ್ಧೇವೆ. ಯಾಕಂದರೆ ವಿಶ್ವಾಸದಿಂದಲೇ ನಿಲ್ಲುತ್ತೀರಿ.

**2.** ಆದರೆ ಇದನ್ನು [8]ನನ್ನಲ್ಲಿ ನಿರ್ಣಯಿಸಿ ಕೊಂಡೆನು, ಏನಂದರೆ ದುಃಖದಿಂದ ನಿಮ್ಮ ಬಳಿಗೆ ತಿರಿಗಿ ಬರುವದಿಲ್ಲ.
೨ ಯಾಕಂದರೆ ನಾನು ನಿಮ್ಮನ್ನು ದುಃಖ ಪಡಿಸಿದರೆ, ನನ್ನಿಂದ ದುಃಖ ಪಡುವವನಲ್ಲದೆ, ಮತ್ತ್ಯಾವನು

1. ಯೆಹೂದದ ಬಡ ಕ್ರೈಸ್ತರಿಗೆ ಪೌಲನು ಧರ್ಮಹಣವನ್ನು ತೆಗೆದು ಕೊಂಡು ಹೋಗುವವನಾಗಿದ್ದನು. (೧ಕೊರಿ. ೧೬. ೩, ೪.)

2. ತನ್ನ ಕೋರಿಕೆ ಯಥಾರ್ಥವಾದದ್ದೆಂದು ಸರ್ವಸಾಕ್ಷಿಯಾದ ದೇವರ ಮುಂದೆ ಹೇಳುತ್ತಾನೆ. (೨೩. ವ.) ಅವನ ಪ್ರಸಂಗದಲ್ಲಾದರೂ ನಡತೆಯಲ್ಲಾದರೂ ಯಾವ ಕಪಟವೂ ವಂಚನೆಯೂ ಅವಗುಣವೂ ಕಾಣಲ್ಪಡಲಿಲ್ಲ ಎಂಬುವದಕ್ಕೆ ದೇವರೇ ಸಾಕ್ಷಿ. ಸತ್ಯಪರನಾದ ದೇವರೂ ಯೇಸು ಕರ್ತನೂ ಕೊಟ್ಟ ವಾಗ್ದತ್ತಗಳು ಮಾರ್ಪಡದವುಗಳಾಗಿರುವ ಪ್ರಕಾರ ಪೌಲನ ಪ್ರಸಂಗವೂ ನಡತೆಯೂ ಮಾರ್ಪಡದೆ ಒಂದೇ ಪ್ರಕಾರವಾಗಿದ್ದವು. ದೇವರು ತನ್ನ ಆತ್ಮನನ್ನು ಅನುಗ್ರಹಿಸಿದ್ದರಿಂದ ಪೌಲನ ಪ್ರಸಂಗವೂ ನಡತೆಯೂ ಸತ್ಯವೆಂದು ಮುದ್ರೆ ಹಾಕಿದನು.

3. ಸಿಲ್ವಾನನು ಎಂಬುವದೂ, ಸೀಲನು ಎಂಬುವದೂ ಒಂದೇ ಹೆಸರು. (ಅಪೊ. ಕ್ರಿ. ೧೮. ೫.)

4. ಕ್ರಿಸ್ತನೇ ದೇವರ ಮಗನೆಂಬುವದನ್ನು ಕುರಿತ ಪ್ರಸಂಗವು ಮಾರ್ಪಡದ ಸತ್ಯವೆಂದು, ದೇವರು ತಾನು ಏರ್ಪಡಿಸಿರುವ ಸೇವಕರ ಮೂಲಕವಾಗಿ ಸಾಕ್ಷಿ ಕೊಟ್ಟಿದ್ದಾನೆ.

5. ದೇವರ ವಾಗ್ದತ್ತಗಳು ಅನಂತವಾಗಿದ್ದಾಗ್ಯೂ, ಅವುಗಳೆಲ್ಲಾ ಕ್ರಿಸ್ತನಲ್ಲಿ ಹೌದು ಎಂದೂ ಆಮೆನ್ ಎಂದೂ ಆಗಿವೆ. ಅವುಗಳ ನಿಶ್ಚಯವೂ ಸ್ಥಿರತ್ವವೂ ಆತನನ್ನು ಹೊಂದಿಪ್ಪಾಗಿಯೇ ಇರುತ್ತದೆ. ಕೃಪೆಯ ಒಡಂಬಡಿಕೆ ಆತನಿಗೆ ಶೇರಿದ್ದಾಗಿರುವ ಪ್ರಕಾರ, ಅದನ್ನು ಕುರಿತ ವಾಗ್ದತ್ತಗಳ ನಿಶ್ಚಯವೂ ಆತನಿಗೆ ಶೇರಿದ್ದಾಗಿಯೇ ಇರುತ್ತದೆ. ಆತನ ಹಾಗೆಯೇ ಆತನ ದಾಸರೂ ಇರುವರು. ಆತನ ಮಾತಿನ ಹಾಗೆಯೇ ಅವರ ಮಾತು ಸಹ ಮಾರ್ಪಡದೆ ದೃಢವಾಗಿರುತ್ತದೆ.

6. ಆನಂದತೈಲದಿಂದ ಅಭಿಷೇಕಿಸಲ್ಪಟ್ಟ ಕ್ರಿಸ್ತನ ಹಾಗೆಯೇ ಆತನ ದಾಸರು ಪರಿಶುದ್ಧಾತ್ಮನಿಂದ ಅಭಿಷೇಕ ಹೊಂದಿದವರಾಗಿದ್ದಾರೆ. (ಕೀರ್ತ. ೨. ೨.) ವಿಶ್ವಾಸಿಗಳು ಕ್ರಿಸ್ತನಲ್ಲಿ ಅಭಿಷೇಕ ಹೊಂದಿ ಸ್ಥಿರ ಪಡುವ ಹಾಗೆ ಮಾಡಿದ ದೇವರು ಅದಕ್ಕೆ ಸಂಚಕಾರವಾಗಿಯೂ ಮುದ್ರೆಯಾಗಿಯೂ ತನ್ನ ಆತ್ಮನನ್ನು ಕೊಟ್ಟಿದ್ದಾನೆ. ಇಂಥಾ ಸತ್ಯ ಮಾರ್ಗವನ್ನನುಸರಿಸಿ ಅದನ್ನು ಪ್ರಸಂಗಿಸುವವನ ಮನಸ್ಸೂ ಮಾತೂ ತಪ್ಪುವವೆಂದು ಹೇಳಲಾಗದು. (೧೭. ವ.)

7. ನಿಮ್ಮನ್ನು ದಂಡಿಸುವದಕ್ಕೆ ನನಗಿರುವ ಅಧಿಕಾರವನ್ನು ನಾನು ಸಲ್ಲಿಸದೆ ನಿಮ್ಮನ್ನು ತಪ್ಪಿಸುವದಕ್ಕಾಗಿಯೇ ಹೀಗೆ ಮಾಡಿದೆನು, ಅನ್ನುತ್ತಾನೆ. ಆದಾಗ್ಯೂ ಅವನು ತನ್ನ ಅಧಿಕಾರವನ್ನು ಕ್ರೂರವಾಗಿ ಸಲ್ಲಿಸುವವನೆಂದು ಅವರು ತಪ್ಪಾಗಿ ನೆನಸದ ಹಾಗೆ, ನಿಮ್ಮ ವಿಶ್ವಾಸಕ್ಕೆ ಅಧಿಕಾರಿಗಳಾಗಿರದೆ, ನಿಮ್ಮ ಸಂತೋಷಕ್ಕೆ ಸಹಾಯಕರಾಗಿದ್ಧೇವೆ, ಅನ್ನುತ್ತಾನೆ. ಅವರು ವಿಶ್ವಾಸದಲ್ಲಿ ನೆಲೆಯಾಗಿರುವವರಾದದರಿಂದ ಅದಕ್ಕೆ ಅಪೊಸ್ತಲರು ಅಧಿಕಾರಿಗಳಲ್ಲ. ಆದಾಗ್ಯೂ ಅವರ ಕ್ರಮಹೀನದಿಂದ ಇವರ ಸಂತೋಷ ಕಡಿಮೆಯಾದ ಕಾರಣ, ಅದು ಹೆಚ್ಚುವ ಹಾಗೆ ಸಹಾಯ ಮಾಡಿದವರಾಗಿದ್ದರು.

8. ನನ್ನಲ್ಲಿ ಎಂಬುವದು ನನ್ನ ನಿಮಿತ್ತ ಎಂದು ಅಭಿಪ್ರಾಯವಾಗುವದು. ನಾನು ಎರಡನೇ ಸಾರಿ ನಿಮ್ಮ ಬಳಿಗೆ ಬರುವದರಿಂದ ನನ್ನಿಂದ ನಿಮಗೆ ದುಃಖವೂ (೨. ವ.) ನಿಮ್ಮಿಂದ ನನಗೆ ದುಃಖವೂ (೩. ವ.) ಸಂಭವಿಸದ ಹಾಗೆ ನನ್ನ ನಿಮಿತ್ತ ಹೀಗೆ ನಿರ್ಣಯಿಸಿ ಕೊಂಡೆನು. ನಿಮ್ಮನ್ನು ಕುರಿತು ತರುವಾಯ ಸಂತೋಷ ಪಡುವದಕ್ಕಾಗಿ ನಾನು ಹೀಗೆ ನಿಮ್ಮನ್ನು ದುಃಖ ಪಡಿಸಿದೆನೇ ಹೊರ್ತು ಬೇರೆ ಕಾರಣಕ್ಕಾಗಿ ಅಲ್ಲ. ಇಂಥಾ ಮನಸ್ತಾಪಗಳೆಲ್ಲಾ ಇಲ್ಲದೆ ಹೋಗುವದಕ್ಕಾಗಿ ನಾನು ನಿಮಗೆ ಹೀಗೆ ಬರೆದೆನು, ಅನ್ನುತ್ತಾನೆ.



೩ ನನ್ನನ್ನು ಆನಂದ ಪಡಿಸುವನು? ಮತ್ತು ನಾನು ಬಂದು, ಯಾರಿಂದ ಸಂತೋಷ ಪಡ ಬೇಕಾಗಿದ್ದೆನೋ,
ಅವರಿಂದ ದುಃಖ ಪಡದ ಹಾಗೆ, ನನ್ನ ಸಂತೋಷವು ನಿಮ್ಮೆಲ್ಲರದಾಗಿದೆ ಎಂದು, ನಿಮ್ಮೆಲ್ಲರ ಮೇಲೆ ನಂಬಿಕೆ
೪ ಇಟ್ಟು, [1]ಅದನ್ನೇ ನಿಮಗೆ ಬರೆದಿದ್ಧೇನೆ. ಹ್ಯಾಗಂದರೆ ನೀವು ದುಃಖ ಪಡುವ ಹಾಗಲ್ಲ, ನಾನು ನಿಮಗೆ
ಹೆಚ್ಚಾಗಿ ಮಾಡುವ ಪ್ರೀತಿಯನ್ನು ತಿಳುಕೊಳ್ಳುವ ಹಾಗೆ, ಬಹಳ ಉಪದ್ರದಿಂದಲೂ ಹೃದಯದ ಸಂಕಟದಿಂ
ದಲೂ, ಬಹಳ ಕಣ್ಣೀರು ಹಾಕುತ್ತಾ ನಿಮಗೆ ಬರೆದೆನು.
೫ ಒಬ್ಬನು ದುಃಖ ಪಡಿಸಿದ್ದಾದರೆ, ನಾನು ಹೆಚ್ಚಾದ ಭಾರವಿಡದ ಹಾಗೆ ನನ್ನನ್ನಲ್ಲ, [2]ಪಾಲಾಗಿ ನಿಮ್ಮೆಲ್ಲ
೬, ೭ ರನ್ನು ದುಃಖ ಪಡಿಸಿದ್ಧಾನೆ. ಅಂಥವನಿಗೆ [3]ಬಹು ಜನರಿಂದಾದ ಈ ಶಿಕ್ಷೆಯು ಸಾಕು. ಆದದರಿಂದ
ಅದನ್ನು ಬಿಟ್ಟು, ಅಂಥವನು ಹೆಚ್ಚಾದ ದುಃಖದಿಂದ [4]ನುಂಗಲ್ಪಡದ ಹಾಗೆ, ನೀವು ಮನ್ನಿಸಿ ಆದರಿಸಿದರೆ,
೮ ಒಳ್ಳೇದು. ಆದದರಿಂದ ಅವನಿಗೆ [5]ಪ್ರೀತಿಯನ್ನು ಸ್ಥಿರ ಮಾಡ ಬೇಕೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ.
೯ ಯಾಕಂದರೆ ಎಲ್ಲಾದರಲ್ಲಿ ವಿಧೇಯರಾಗಿದ್ಧೀರೇನೋ, ನಿಮ್ಮ ಪರೀಕ್ಷೆಯನ್ನು ತಿಳಿಯುವ ಬಗ್ಯೆ [6]ಇದಕ್ಕಾ
೧೦ ಗಿಯೇ ಬರೆದೆನು. ಯಾರಿಗೆ ಏನಾದರೂ ಮನ್ನಿಸುತ್ತೀರೋ, ನಾನು ಸಹ ಮನ್ನಿಸುತ್ತೇನೆ. ಯಾಕಂದರೆ
ನಾನು ಏನಾದರೂ ಮನ್ನಿಸಿದ್ದಾದರೆ, ಯಾರಿಗೆ ಮನ್ನಿಸಿದೆನೋ, ನಿಮಗೋಸ್ಕರ ಕ್ರಿಸ್ತನ ಸಮ್ಮುಖದಲ್ಲಿ
೧೧ ಮನ್ನಿಸಿದೆನು; [7]ಸೈತಾನನಿಂದ ನಾವು ವಂಚಿಸಲ್ಪಡದ ಹಾಗೆಯೇ; ಯಾಕಂದರೆ ನಾವು ಅವನ ಯೋಚನೆ
ಗಳನ್ನು ಅರಿಯದವರಲ್ಲ.

ತೀತನನ್ನು ನೋಡುವ ಮಟ್ಟಿಗೂ ಕೊರಿಂಥದ ಸಭೆಯನ್ನು ಕುರಿತು ಪೌಲನಿಗೆ ಇದ್ದ ಚಿಂತೆಯು;
ಸತ್ಯಮಾರ್ಗದ ವೃದ್ಧಿಗೋಸ್ಕರ ದೇವರನ್ನು ಸ್ತುತಿಸಿದ್ದು.

೧೨ ಆದರೆ ಕ್ರಿಸ್ತನ ಸುವಾರ್ತೆಗೋಸ್ಕರ [8]ತ್ರೋಯಕ್ಕೆ ಬಂದಾಗ, ಕರ್ತನಿಂದ ನನಗೆ ಬಾಗಲು ತೆರೆದಿರಲಾಗಿ,

1. ಇದು ವಾವಿ ತಪ್ಪಿದ ಪಾಪವನ್ನು ಮಾಡಿದ ಮನುಷ್ಯನನ್ನು ಕುರಿತು ಪೌಲನು ಮೊದಲನೇ ಪತ್ರಿಕೆಯಲ್ಲಿ ಬರೆದದ್ದನ್ನು ಸೂಚಿಸುತ್ತದೆ. (೬. ವ. ೧ಕೊರಿ. ೫. ಸಂಧಿ.) ಅವನು ಹೇಳಿದ ಬುದ್ಧಿಯಿಂದ ಬಹಳ ಮೇಲು ಉಂಟಾಯಿತು. ಬಹಳ ಚಿಂತೆಯಿಂದಲೂ ಮನೋವ್ಯಸನದಿಂದಲೂ ಕಣ್ಣೀರಿನಿಂದಲೂ ಹೇಳಿದ ಬುದ್ಧಿಮತಿಗಳು ವ್ಯರ್ಥವಾಗಲಾರವು.

2. ಅಪರಾಧ ಮಾಡಿದವನು ತನ್ನನ್ನು ಮಾತ್ರವಲ್ಲ, ಪಾಲಾಗಿ ಕೊರಿಂಥದ ಸಭೆಯವರನ್ನೆಲ್ಲಾ ದುಃಖ ಪಡಿಸಿದನೆಂದು ಪೌಲನು ಹೇಳುತ್ತಾನೆ. ಅವನು ಅವರ ಮೇಲೆ ಬಹಳ ಭಾರ ಹೊರಿಸ ಮನಸ್ಸಿಲ್ಲದವನಾಗಿದ್ದದರಿಂದ ಹೀಗೆ ಹೇಳುತ್ತಾನೆ. ಆ ಪಾಪಿಷ್ಠನನ್ನು ಕುರಿತು ಕೊರಿಂಥದ ಸಭೆಯವರು ನಿಶ್ಚಿಂತೆಯಾಗಿದ್ದರೆಂದು ಪೌಲನು ಅವರ ಮೇಲೆ ಹೊರಿಸಿದ ಅಪರಾಧವನ್ನು (೧ಕೊರಿ. ೫. ೨.) ಒಂದಾವರ್ತಿ ಪರಿಹರಿಸಿ, ಅವರು ಅದರ ವಿಷಯ ದುಃಖಪಟ್ಟು ತಕ್ಕಂಥಾ ಕ್ರಮವನ್ನು ಏರ್ಪಡಿಸಿದರೆಂದು ಹೇಳುತ್ತಾನೆ. (೬. ೧೧.)

3. ಅಪರಾಧಿಯು ಸಭೆಗೆ ಬಹಿಷ್ಕಾರ ಮಾಡಲ್ಪಟ್ಟದ್ದು ಅನೇಕರ ತೀರ್ಮಾನವಾಗಿದ್ದಾಗ್ಯೂ, ಎದುರಿಗಳಲ್ಲಿ ಕೆಲವರು ಅವನ ಕಟ್ಟಳೆಗೆ ವಿಧೇಯವಾಗದೆ ನಡೆದಿರುವರೆಂದು ತೋರುತ್ತದೆ. (೧ಕೊರಿ. ೫. ೧೩.)

4. ಅಪರಾಧಿಯು ಅನೇಕರಿಂದ ಬಹಿಷ್ಕಾರ ಮಾಡಲ್ಪಟ್ಟ ದಂಡನೆ ಹೊಂದಿದ್ದರಿಂದ ತಿಳುವಳಿಕೆ ಹೊಂದಿ ತನ್ನ ಪಾಪವನ್ನು ಬಿಟ್ಟು ಗುಣ ಪಟ್ಟನು. ಅವನನ್ನು ಮನ್ನಿಸಿ ತಿರಿಗಿ ಸಭೆಯಲ್ಲಿ ಶೇರಿಸಿ ಕೊಳ್ಳದೆ ಇದ್ದರೆ, ಅವನು ದುಃಖದಲ್ಲಿ ಮುಣುಗಿ ಕೆಟ್ಟು ಹೋಗ ಹೇತುವೆಯಾಗಿರುವದು. ಆದದರಿಂದ ಅವನನ್ನು ಕರುಣಿಸ ಬೇಕೆಂದು ಪೌಲನು ಹೇಳುತ್ತಾನೆ.

5. ಗುಣ ಪಟ್ಟ ಅಪರಾಧಿಯನ್ನು ಅವರು ತಿರಿಗಿ ಸಭೆಯಲ್ಲಿ ಶೇರಿಸಿ ಕೊಳ್ಳುವದರಿಂದ ಅವರ ಪ್ರೀತಿಯು ಪ್ರಕಟವಾಗ ತಕ್ಕದ್ದಾಗಿತ್ತು.

6. ಅಪರಾಧಿಯನ್ನು ಸಭೆಯಿಂದ ಬಹಿಷ್ಕರಿಸುವ ಹಾಗೆ ಪೌಲನು ಅವರಿಗೆ ಕೊಟ್ಟ ಕಟ್ಟಳೆಯು ಅವರ ವಿಧೇಯತ್ವವನ್ನು ಪರೀಕ್ಷಿಸ ತಕ್ಕದ್ದಾಗಿತ್ತು. ಈ ವಿಷಯದಲ್ಲಿ ಅವರ ವಿಧೇಯತ್ವವು ಚನ್ನಾಗಿ ತೋರ ಬಂದದರಿಂದ, ಈಗ ಅವನನ್ನು ಕರುಣಿಸಿ ಮನ್ನಿಸಿದರೆ, ಕ್ರಿಸ್ತನ ನಿಮಿತ್ತ ತಾನು ಸಹ ಅವನಿಗೆ ಮನ್ನಿಸಿದ್ಧೇನೆಂದು ಹೇಳುತ್ತಾನೆ. ಪಾಪವನ್ನು ಕಟ್ಟಲೂ ಬಿಡಿಸಲೂ ತಕ್ಕ ಅಧಿಕಾರವು ಅಪೊಸ್ತಲರಿಗೆ ಕರ್ತನಿಂದ ಕೊಡಲ್ಪಟ್ಟದ್ದು ಇದೇ. (ಯೋಹಾ. ೨೦. ೨೩.)

7. ಪೌಲನು ಅಪರಾಧಿಯ ವಿಷಯ ಖಂಡಿತವಾದ ಕಟ್ಟಳೆ ಕೊಟ್ಟರೆ, ಸಭೆಯವರು ಅವನನ್ನು ಎಂದಿಗೂ ಮನ್ನಿಸದಿದ್ದರೆ, ಅವನು ದುಃಖದಲ್ಲಿ ಮುಣುಗಿ ಮನಸ್ಸು ಕಠಿಣ ಮಾಡಿ ಕೊಳ್ಳುವ ಹಾಗೆ ಪಿಶಾಚನು ಅವನನ್ನು ಶೋಧಿಸುವನು. ಆದದರಿಂದ ಅವನ ಶೋಧನೆಗಳಿಗೂ ತಂತ್ರಗಳಿಗೂ ತಪ್ಪುವ ಹಾಗೆ ಅಪರಾಧಿಯನ್ನು ಕರುಣಿಸಿ ಮನ್ನಿಸುವದು ಅವಶ್ಯವು.

8. ಪೌಲನು ಎಫೆಸ ಪಟ್ಟಣದಿಂದ ಮಕೆದೋನ್ಯಕ್ಕೆ ಹೋಗುವ ಮಾರ್ಗದಲ್ಲಿ ತ್ರೋಯಕ್ಕೆ ಹೋಗಿರುವನು. ಆದರೆ ಇದನ್ನು ಕುರಿತು ಅಪೊಸ್ತಲರ ಕ್ರಿಯೆಗಳಲ್ಲಿ ಏನೂ ಹೇಳಲಿಲ್ಲ. (ಅಪೊ. ಕ್ರಿ. ೨೦. ೧, ೨.) ಸುವಾರ್ತೆಯ ಪ್ರಬಲಕ್ಕಾಗಿ ಪೌಲನು ಮಾಡುತ್ತಾ

೧೩ ನನ್ನ ಸಹೋದರನಾದ ತೀತನನ್ನು ಕಂಡು ಕೊಳ್ಳದೆ ಇರುವದರಿಂದ, ನನ್ನ ಆತ್ಮದಲ್ಲಿ ವಿಶ್ರಾಂತಿ ಇಲ್ಲದವನಾಗಿ,
ಅವರಿಂದ ಅಪ್ಪಣೆ ತೆಗೆದು ಕೊಂಡು, ಮಕೆದೋನ್ಯಕ್ಕೆ ಹೊರಟೆನು.
೧೪ ಆದರೆ [1]ಕ್ರಿಸ್ತನಲ್ಲಿ ನಮ್ಮನ್ನು ಎಂದಿಗೂ [2]ಜಯೋತ್ಸವ ಮಾಡಿಸಿ, ತನ್ನ ತಿಳುವಿಕೆಯ ವಾಸನೆಯನ್ನು ನಮ್ಮ
೧೫ ಮುಖಾಂತರ ಎಲ್ಲಾ ಸ್ಥಳಗಳಲ್ಲಿ ಪ್ರಸಿದ್ಧಿ ಮಾಡುವ ದೇವರಿಗೆ ಸ್ತುತಿ. ಏನಂದರೆ ರಕ್ಷಿಸಲ್ಪಡುವವರಲ್ಲಿಯೂ
೧೬ ನಾಶವಾಗುವವರಲ್ಲಿಯೂ ದೇವರಿಗೆ ಕ್ರಿಸ್ತನ ಸುವಾಸನೆಯಾಗಿದ್ದೇವೆ; ಇವರಿಗೆ [3]ಮರಣಕ್ಕಾಗಿ ಮರಣದ
೧೭ ವಾಸನೆ, ಅವರಿಗೆ ಜೀವಕ್ಕಾಗಿ ಜೀವದ ವಾಸನೆ. [4]ಇವುಗಳಿಗೆ ಯೋಗ್ಯನು ಯಾರು? ಯಾಕಂದರೆ ದೇ
ವರ ವಾಕ್ಯವನ್ನು ಬೆರಸುವ ಅನೇಕರ ಹಾಗಿರದೆ, ಯಥಾರ್ಥದಿಂದಾದ ಹಾಗೆ, ದೇವರ ಕಡೆಯಿಂದಾದ
ಹಾಗೆ, ದೇವರ ಮುಂದೆ ಕ್ರಿಸ್ತನಲ್ಲಿ ಮಾತಾಡುತ್ತೇವೆ.

ಪೌಲನ ಸೇವೆಯ ಶ್ರೇಷ್ಠತ್ವ; ನ್ಯಾಯಪ್ರಮಾಣಕ್ಕಿಂತ ಸುವಾರ್ತೆ ಮಹಿಮೆಯುಳ್ಳದ್ದು.

**3.** ತಿರಿಗಿ ನಮ್ಮನ್ನು ಪ್ರತಿಷ್ಠೆ ಮಾಡಿ ಕೊಳ್ಳಲಾರಂಭಿಸುತ್ತೇವೋ? ಇಲ್ಲವೆ ನಿಮ್ಮ ಕಡೆಗೆ ಪ್ರತಿಷ್ಠೇ ಪತ್ರಿಕೆಗಳು,
೨ ಅಥವಾ ನಿಮ್ಮಿಂದ ಪ್ರತಿಷ್ಠೇ ಪತ್ರಿಕೆಗಳು [5]ಕೆಲವರ ಹಾಗೆ ನಮಗೆ ಬೇಕೋ? ನೀವೇ ನಮ್ಮ ಹೃದಯಗ

ಬಂದ ಪ್ರಯತ್ನಗಳು ಸಫಲ ಹೊಂದಿದ್ದರಿಂದ ಅವನು ತ್ರೋಯ ಪಟ್ಟಣದಲ್ಲಿ ಇರುವದಕ್ಕೆ ಮನಸ್ಸುಳ್ಳವನಾಗಿದ್ದರೂ, ತೀತನನ್ನು ಕಂಡು ಅವನಿಂದ ಕೊರಿಂಥದ ಸಭೆಯ ಸ್ಥಿತಿಗಳನ್ನು ತಿಳಿದು ಕೊಳ್ಳ ಬಹಳ ಅಪೇಕ್ಷೆಯುಳ್ಳವನಾಗಿದ್ದದರಿಂದ ಅಲ್ಲಿ ಬಹು ದಿವಸ ಆಲಸ್ಯ ಮಾಡದೆ ಮಕೆದೋನ್ಯಕ್ಕೆ ಹೊರಟು ಹೋದನು. (೧೩. ವ.)

1. ಪೌಲನಿಗೆ ಸಂಭವಿಸಿದ ಅನೇಕ ಶೋಧನೆಗಳಲ್ಲಿಯೂ ಚಿಂತೆಗಳಲ್ಲಿಯೂ ಕನಿಕರಗಳ ದೇವರು ಅವನಿಗೆ ಬೇಕಾದ ಸಹಾಯ ಮಾಡಿ, ಅವನ ಮೂಲಕವಾಗಿ ಸತ್ಯ ಮಾರ್ಗವು ವೃದ್ಧಿ ಹೊಂದುವ ಹಾಗೆ ಮಾಡಿದ್ದರಿಂದ ಅವನ ಮನಸ್ಸು ಸಂತೋಷಿಸಿ ದೇವರನ್ನು ಸ್ತುತಿಸುತ್ತಾನೆ. (೧೪—೧೭. ವ.) ತಾನು ಸುವಾರ್ತೆಯನ್ನು ಪ್ರಸಂಗಿಸ ತಕ್ಕ ಕೃಪೆ ಹೊಂದಿದವನೆಂಬುವದಕ್ಕೆ ಸಾಕ್ಷಿಯಾಗಿ ತನ್ನಿಂದ ಗುಣ ಪಟ್ಟವರನ್ನು ದೃಷ್ಟಾಂತವಾಗಿ ತೋರಿಸುತ್ತಾನೆ. (೩. ೧—೬.) ಹೀಗೆ ತಾನು ಪ್ರಸಂಗಿಸಿದ ಸುವಾರ್ತೆಯ ಮಾರ್ಗವು, ಅದನ್ನು ಅನುಸರಿಸಿದವರಿಗೆ ಜೀವವನ್ನು ಕೊಡುವದರಲ್ಲಿಯೂ, (೬—೧೦. ವ.) ನೆಲೆಯಾಗಿರುವದರಲ್ಲಿಯೂ, (೧೧. ವ.) ಸ್ಫಟಿಕದಂತೆ ನಿರ್ಮಲವಾಗಿರುವದರಲ್ಲಿಯೂ, (೧೨. ವ.) ಮೋಶೆಯ ಪ್ರಮಾಣಕ್ಕಿಂತ ಉಚಿತವಾದದ್ದಾಗಿರುವದರಿಂದ, ಅದರ ಸತ್ಯಗಳು ಮರೆಯಾಗದೆ, ಅಜ್ಞಾನಾಂಧಕಾರ ಮನಸ್ಸುಳ್ಳವರು ಜ್ಞಾನದ ಬೆಳಕು ಹೊಂದುವ ಹಾಗೆ ಅವುಗಳನ್ನು ಧೈರ್ಯವಾಗಿ ಸಾರಿದನು. (೧೩—೧೮. ವ.) ಹೀಗೆ ಸುವಾರ್ತೆಯ ಸತ್ಯಗಳು ಕಳಂಕವಿಲ್ಲದಂತೆ ಸಾರಲ್ಪಟ್ಟಿರಲಾಗಿ (೪. ೧, ೨.) ಅವುಗಳನ್ನು ಕೇಳುವವರು ಕೆಟ್ಟು ಹೋದರೆ, ಪರಮ ಗುರುವಾದ ಯೇಸುವಿನ ಮಹಿಮೆಯನ್ನು ನೋಡುವದಿಲ್ಲವೆಂದು ಕಣ್ಣು ಮುಚ್ಚಿಕೊಂಡು ನಡಿಯುವದರಿಂದಲೇ ಹೊರ್ತು ಮತ್ತ್ಯಾವದರಿಂದಲೂ ಅಲ್ಲ. (೩—೬. ವ.)

2. ರೋಮಾಯ ಸೈನ್ಯಾಧಿಪತಿಗಳು ಶತ್ರುಗಳನ್ನು ಜಯಿಸಿ, ಜಯಶೀಲರಾಗಿ, ಬಿರುದುಗಳನ್ನು ಹಿಡಿದು ಕೊಂಡು, ಹೊಗಳಿಸಿಕೊಂಡು, ಮಹಾ ಜಯೋತ್ಸವವಾಗಿ ತಮ್ಮ ದೇಶಕ್ಕೆ ಹಿಂತಿರುಗುವದು ಆ ಕಾಲದಲ್ಲಿ ವಾಡಿಕೆಯಾಗಿತ್ತು; ಅದರ ಉಪಮಾನದಿಂದ ಪೌಲನು ಇದನ್ನು ಹೇಳುತ್ತಾನೆ. ಜಯಶೀಲನಾಗಿ ಪ್ರಕಾಶಿಸುವ ಕ್ರಿಸ್ತನ ಸೈನ್ಯದ ಹಿಂದೆ ನಡಿಯುವ ದಾಸನಾಗಿದ್ದು, ತರುವಾಯ ಆತನ ಅನುಗ್ರಹದಿಂದ, ಆತನ ಜಯದಲ್ಲಿ ತಾನು ಸಹ ಪಾಲುಗಾರನಾಗಿ, ಆತನ ಮಹಿಮೆ ಎಲ್ಲೆಲ್ಲಿಯೂ ಪ್ರಸ್ತಾಪವಾಗುವದಕ್ಕೆ, ಆತನ ದಿವ್ಯ ನಾಮದ ಪರಿಮಳವು, ತಾನು ಹೋದ ಸ್ಥಳಗಳಲ್ಲೆಲ್ಲಾ ಬೀಸುವಂತೆ ಮಾಡಿದ್ದಲ್ಲದೆ, ತಾನೇ ಆ ಪರಿಮಳದ ಹಾಗೆ, ಕೆಲವರಿಗೆ ಜೀವದ ವಾಸನೆಯಾಗಿಯೂ, ಕೆಲವರಿಗೆ ಮರಣದ ವಾಸನೆಯಾಗಿಯೂ ಇದ್ದು, ದೇವರ ನಿರ್ಣಯವನ್ನು ಈಡೇರಿಸಿದೆನೆಂದು ಹೇಳುತ್ತಾನೆ.

3. ಇದನ್ನು ಮರಣದಿಂದ ಮರಣಕ್ಕೆಂದೂ, ಜೀವದಿಂದ ಜೀವಕ್ಕೆಂದೂ ಅರ್ಥ ಮಾಡ ಬಹುದು. (ರೋಮಾ. ೧. ೧೬. ವಚನದ ವ್ಯಾಖ್ಯಾನ ನೋಡ ಬೇಕು.) ಸುವಾರ್ತೆಯಿಂದ ಕೆಲವರಿಗೆ ಜೀವವೂ, ಕೆಲವರಿಗೆ ಮರಣವೂ, ಉಂಟಾಗುತ್ತದೆ. (ಮತ್ತಾ. ೨೧. ೪೪. ಲೂಕ. ೨. ೩೪. ಯೋಹಾ. ೯. ೩೯. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಒಂದೇ ಗಿಡ ಅಥವಾ ಪುಷ್ಪದಿಂದ ಜೇನು ಹುಳವು ಜೇನನ್ನೂ, ಚಿಟ್ಟೇಹುಳವು ವಿಷವನ್ನೂ ಹೀರಿ ಕೊಳ್ಳುವ ಪ್ರಕಾರ, ಸುವಾರ್ತೆ ಎಂಬ ಪುಷ್ಪದಿಂದ ಕೆಲವರು ಜೀವವೆಂಬ ಜೇನನ್ನೂ, ಕೆಲವರು ಮರಣವೆಂಬ ವಿಷವನ್ನೂ ತೆಗೆದು ಕೊಳ್ಳುತ್ತಾರೆ.

4. ಇಷ್ಟು ಮಹಿಮೆಯಾದ ಮಿತಿ ಇಲ್ಲದ ಫಲಗಳನ್ನು ಬೆಳೆಯ ಮಾಡುವ ಸುವಾರ್ತೆಯನ್ನು ಪ್ರಸಂಗಿಸುವದಕ್ಕೆ ತಕ್ಕವನು ಯಾರೆಂದು, ತಾನು ಸಾರಿದ ಸತ್ಯದ ಮಹಿಮೆಯನ್ನು ಪೂರ್ಣವಾಗಿ ಗ್ರಹಿಸಿದ ಪೌಲನು ಕೇಳುತ್ತಾನೆ. ಈ ಪ್ರಶ್ನೆಗೆ ಉತ್ತರವು ೩ನೇ ಸಂಧಿ. ೫, ೬ನೇ ವಚನಗಳಲ್ಲಿ ಉಂಟು. ಹಾಲಿನಲ್ಲಿ ನೀರನ್ನು ಬೆರಸುವ ಪ್ರಕಾರ, ದೇವರ ವಾಕ್ಯವೆಂಬ ಹಾಲಿನಲ್ಲಿ ಅಸತ್ಯವೆಂಬ ವಿಷವನ್ನು ಶೇರಿಸಿ ಬೋಧಿಸುವ ಕಳ್ಳಬೋಧಕರು ಇದಕ್ಕೆ ತಕ್ಕವರಲ್ಲ. ದೇವರ ಕೃಪೆ ಹೊಂದಿ ನಿರ್ಮಲವಾದ ಮನಸ್ಸಿನಿಂದ, ದೇವರ ಚಿತ್ತಾನುಸಾರವಾಗಿ ಸುವಾರ್ತೆಯ ಸತ್ಯಗಳನ್ನು ಯಥಾರ್ಥವಾಗಿ ಬೋಧಿಸುವವನೇ ಅದಕ್ಕೆ ತಕ್ಕವನು. (೧ಅರ[illegible] ೨೨. ೧೦—೧೯.) ಹೀಗೆ ಪ್ರಸಂಗಿಸುವ ಸತ್ಯ ಬೋಧಕರೂ, ಅವುಗಳನ್ನು ಅನುಸರಿಸಿ ನಡಿಯುವ ಉತ್ತಮ ಶಿಷ್ಯರೂ ಭಾಗ್ಯವಂತರು.

5. ಕೆಲವರು ಎಂಬುವದು ಕೊರಿಂಥದ ಸಭೆಯಲ್ಲಿ ಪೌಲನಿಗೆ ಎದುರಿಗಳಾಗಿದ್ದವರನ್ನು ಕುರಿತದ್ದು. ಅವರು ಯೆಹೂದದಿಂದ ಶಿಪಾರಸುಕಾಗದಗಳನ್ನು ತೆಗೆದು ಕೊಂಡು ಬಂದರೆಂದು ತೋರುತ್ತದೆ. ಆದದರಿಂದ ಪೌಲನು ಸಭೆಯವರನ್ನು ನೋಡಿ, ನೀವೇ ಇಂಥಾ ಪತ್ರಿಕೆಯಾಗಿರುವದರಿಂದ ನನಗೆ ಬೇರೆ ಪತ್ರಿಕೆ ಅವಶ್ಯವಿಲ್ಲವೆಂದು ಅನ್ನುತ್ತಾನೆ. (ಅಪೊ. ಕ್ರಿ. ೧೮. ೨೭.)



ಳಲ್ಲಿ ಬರೆಯಲ್ಪಟ್ಟಂಥ, ಎಲ್ಲಾ ಮನುಷ್ಯರಿಂದ ಓದಿ ತಿಳಿಯಲ್ಪಡುವಂಥ, [1]ನಮ್ಮ ಪತ್ರಿಕೆಯಾಗಿದ್ದೀರಿ.
೩ ಮಶಿಯಿಂದಲ್ಲ, ಜೀವವುಳ್ಳ ದೇವರ ಆತ್ಮದಿಂದ, ಕಲ್ಲಿನ ಹಲಿಗೆಗಳಲ್ಲಿ ಅಲ್ಲ, ಹೃದಯವೆಂಬ ಮಾಂಸದ ಹಲಿಗೆ
ಗಳಲ್ಲಿ ಬರೆಯಲ್ಪಟ್ಟಂಥ, ನಮ್ಮಿಂದ ಸೇವಿಸಲ್ಪಟ್ಟಂಥ, ಕ್ರಿಸ್ತನ ಪತ್ರಿಕೆಯಾಗಿದ್ದೀರೆಂದು [2]ಪ್ರತ್ಯಕ್ಷವಲ್ಲವೋ?
೪,೫ ಇಂಥ [3]ನಂಬಿಕೆ ಕ್ರಿಸ್ತನ ಮುಖಾಂತರ ದೇವರಲ್ಲಿ ನಮಗೆ ಉಂಟು; ನಮ್ಮಿಂದಲೇ ಎಂದು ಒಂದಾ
ದರೂ ನೆನಸಿ ಕೊಳ್ಳ ನಮ್ಮಷ್ಟಕ್ಕೆ ನಾವೇ ಯೋಗ್ಯರಂತಲ್ಲ; ನಮ್ಮ ಯೋಗ್ಯತೆಯು ದೇವರಿಂದಲೇ.
೬ ಅಕ್ಷರದ್ದಲ್ಲ, ಆತ್ಮದ್ದಾಗಿರುವ [4]ಹೊಸ ಒಡಂಬಡಿಕೆಯ ಸೇವಕರಾಗುವ ಹಾಗೆ, ಆವನೇ ನಮ್ಮನ್ನು ಯೋಗ್ಯ
ಮಾಡಿದನು; ಯಾಕಂದರೆ ಅಕ್ಷರವು ಕೊಲ್ಲುತ್ತದೆ, ಆತ್ಮವು ಬದುಕಿಸುತ್ತದೆ.
೭ ಆದರೆ ಅಕ್ಷರಗಳಿಂದ ಕಲ್ಲುಗಳ ಮೇಲೆ ಕೆತ್ತಲ್ಪಟ್ಟ ಮರಣದ ಸೇವೆಯು, ಇಸ್ರಾಯೇಲನ ಮಕ್ಕಳು ಮೋಶೆ
ಯ [5]ಮುಖವನ್ನು, ಅವನ ಮುಖದ ಇಲ್ಲದೆ ಹೋಗುವ ಮಹಿಮೆಯ ನಿಮಿತ್ತ, ದೃಷ್ಟಿಸ ಕೂಡದ ಹಾಗೆ
೮,೯ ಮಹಿಮೆಯುಳ್ಳದ್ದಾದರೆ, ಆತ್ಮದ ಸೇವೆಯು ಹೆಚ್ಚಾಗಿ ಮಹಿಮೆ ಇಲ್ಲದೆ ಇರುವದು ಹ್ಯಾಗೆ? ಯಾಕಂದರೆ
ಶಿಕ್ಷೆಯ ನಿರ್ಣಯದ ಸೇವೆ ಮಹಿಮೆಯಾಗಿದ್ದರೆ, ನೀತಿಯ ಸೇವೆ ಬಹು ಅಧಿಕವಾಗಿ ಮಹಿಮೆಯಲ್ಲಿ ಹೆಚ್ಚು
೧೦ ವದು. ಯಾಕಂದರೆ ಈ ಪಕ್ಷದಲ್ಲಿ ಮಹಿಮೆ ಪಟ್ಟದ್ದು ಹೆಚ್ಚಾಗಿರುವ ಮಹಿಮೆಯ ನಿಮಿತ್ತ [6]ಮಹಿಮೆ
೧೧ ಪಟ್ಟದ್ದಲ್ಲ. ಯಾಕಂದರೆ ಇಲ್ಲದೆ ಹೋಗುವಂಥಾದ್ದು ಮಹಿಮೆಯಿಂದಿದ್ದರೆ, ನೆಲೆಯಾದದ್ದು ಬಹು ಹೆಚ್ಚಾಗಿ
ಮಹಿಮೆಯುಳ್ಳದ್ದು.
೧೨,೧೩ ಹಾಗಾದರೆ ಇಂಥ [7]ನಿರೀಕ್ಷೆಯುಳ್ಳವರಾಗಿ ಬಹು ಧೈರ್ಯ ಮಾಡುತ್ತೇವೆ. ಮತ್ತು ಇಸ್ರಾಯೇಲನ
ಮಕ್ಕಳು ಇಲ್ಲದೆ ಹೋಗುವಂಥಾದರ [8]ಅಂತ್ಯವನ್ನು ನೋಡದ ಹಾಗೆ, ಮೋಶೆಯು ತನ್ನ ಮುಖದ ಮೇಲೆ

1. ಕೊರಿಂಥದ ಸಭೆಯವರು ಪೌಲನಿಂದ ಗುಣ ಪಟ್ಟವರಾಗಿದ್ದದರಿಂದ, ಅವನ ದಿವ್ಯ ಊಳಿಗಕ್ಕೆ ಸಾಕ್ಷಿಪತ್ರದ ಹಾಗಿದ್ದರು. ಈ ಪತ್ರಿಕೆಯು ಮನುಷ್ಯರ ಮುದ್ರೆ ಹೊಂದಿದ್ದಾಗಿರದೆ ದೇವರ ಆತ್ಮನ ಮುದ್ರೆ ಹೊಂದಿದ್ದಾಗಿತ್ತು.

2. ಈ ಪತ್ರಿಕೆ ಪರಿಶುದ್ಧಾತ್ಮನ ಸಹಾಯದಿಂದ ಅಪೊಸ್ತಲರ ಮೂಲಕವಾಗಿ ಕ್ರಿಸ್ತನಿಂದ ಬರಿಯಲ್ಪಟ್ಟ ಹಾಗಿದ್ದರೂ, ಹತ್ತು ಕಟ್ಟಳೆಗಳ ಹಾಗೆ ಕಲ್ಲಿನ ಮೇಲೆ ಅಲ್ಲ, (ಹೊರ. ೩೧. ೧೮.) ದೇವರ ವಾಗ್ದತ್ತದ ಪ್ರಕಾರ ಪರಿಶುದ್ಧಾತ್ಮನಿಂದ ಹೃದಯದಲ್ಲಿ ಬರಿಯಲ್ಪಟ್ಟದ್ದಾಗಿತ್ತು. (ಯೆರೆಮಿ. ೩೧. ೩೧—೩೪.) ಆದದರಿಂದ ಇದು ಸಕಲ ಮನುಷ್ಯರಿಂದಲೂ ತಿಳಿದು ಓದಲ್ಪಡ ತಕ್ಕ ಪತ್ರಿಕೆಯೇ.

3. ಪೌಲನಿಗೆ ಇಂಥಾ ನಂಬಿಕೆ ದೇವರ ಕೃಪೆಯಿಂದ ಉಂಟಾಗಿದ್ದ ಕಾರಣ ಅವನು ಅಧಿಕ ನಂಬಿಕೆಯುಳ್ಳವನಾಗಿದ್ದನು. ಆದಾಗ್ಯೂ ಅವನು ತನ್ನಲ್ಲಿಯೇ ಅಧಿಕವಾಗಿ ನಂಬಿಕೆ ಇಡದೆ, ಸತ್ಯವನ್ನು ತಿಳಿದು ಕೊಳ್ಳಲೂ, ಅದನ್ನು ತಕ್ಕ ಪ್ರಕಾರ ಮತ್ತೊಬ್ಬರಿಗೆ ಬೋಧಿಸಲೂ ತಕ್ಕ ಶಕ್ತಿಯನ್ನೂ ದಯವನ್ನೂ ದೇವರಿಂದಲೇ ಹೊಂದಿದೆನೆಂದು ಹೇಳುತ್ತಾನೆ. (೫. ವ.)

4. ಈ ಹೊಸ ಒಡಂಬಡಿಕೆ, ಅಕ್ಷರದ್ದಾಗಿರದೆ, ಆತ್ಮದ್ದಾಗಿರುವ ಶ್ರೇಷ್ಠ ಒಡಂಬಡಿಕೆಯಾಗಿದೆ. ಯೆರೆಮಿ. ೩೧. ೩೧—೩೪. ವರೆಗೂ ಇರುವ ವಚನಗಳಿಗೆ ಅನುಸಾರವಾದದ್ದಾಗಿ, ೩ನೇ ವಚನದ ಅಭಿಪ್ರಾಯವು ಇದರಲ್ಲಿ ಸ್ವಲ್ಪ ವಿವರವಾಗಿ ತೋರಿಸಲ್ಪಟ್ಟದೆ. ಇದರಲ್ಲಿ ಅಕ್ಷರವೆಂದು ಹೇಳಲ್ಪಟ್ಟಿರುವ ಕಲ್ಲಿನ ಹಲಿಗೆಗಳಲ್ಲಿ ಬರಿಯಲ್ಪಟ್ಟ ಹಳೇ ಒಡಂಬಡಿಕೆಯು ಆಜ್ಞೆಗೂ ಮರಣಕ್ಕೂ ಹೇತುವೆಯಾಗಿತ್ತು. (ರೋಮಾ. ೪. ೧೪, ೧೫; ೭. ೯—೧೧.) ಸರ್ವಜೀವದಯಾಪರನಾದ ದೇವರ ಆತ್ಮನಿಂದ ಹೃದಯದಲ್ಲಿ ಬರೆಯಲ್ಪಟ್ಟ ಹೊಸ ಒಡಂಬಡಿಕೆಯಾದರೆ ನೀತಿಗೂ ಜೀವಕ್ಕೂ ಹೇತುವೆಯಾಗಿರುತ್ತದೆ. ಹಳೇ ಒಡಂಬಡಿಕೆಯ ಕರ್ತನಾದ ಮೋಶೆ ಎಂಬವನ ಸೇವೆಯು ಮಹಿಮೆ ಹೊಂದಿದ್ದಾಗಿರುವದಾದರೆ, ಹೊಸ ಒಡಂಬಡಿಕೆಯ ಸೇವೆಯು ಇನ್ನೆಷ್ಟು ಮಹಿಮೆ ಹೊಂದಿದ್ದಾಗಿರ ಬೇಕು? ಆದರೆ ಈ ಮಹಿಮೆ ಕಣ್ಣಿಗೆ ಚುಚ್ಚ ತಕ್ಕ ಹೊರಗಿನ ಮಹಿಮೆಯಾಗಿರದೆ, ಹೃದಯವನ್ನು ಪ್ರಕಾಶ ಮಾಡ ತಕ್ಕ ಆಂತರ್ಯದ ಮಹಿಮೆ ಹೊಂದಿದ್ದಾಗಿದೆ. (೭—೧೧. ವ.)

5. ಪರಂಜ್ಯೋತಿಯಾದ ದೇವರ ಮಹಿಮೆಯನ್ನು ಕಂಡದ್ದರಿಂದ ಮೋಶೆಯ ಮುಖವು ಪರಮ ಪ್ರಕಾಶ ಹೊಂದಿದ್ದರಿಂದ ಇಸ್ರಯೇಲ್ಯರು ಅದನ್ನು ನೋಡ ಭಯ ಪಟ್ಟರು. (ಹೊರ. ೩೪. ೩೦.)

6. ಸಮಾನವಿಲ್ಲದ ಮಹಿಮೆಯನ್ನೂ ಘನವನ್ನೂ ಹೊಂದಿರುವ ಸುವಾರ್ತೆಯ ಮಹಿಮೆಯ ಮುಂದೆ ಹಳೇ ಒಡಂಬಡಿಕೆಯ ಮಹಿಮೆಯು ಸೂರ್ಯಪ್ರಕಾಶದ ಮುಂದೆ ಮಿಣುಕುವ ನಕ್ಷತ್ರದಂತೆ ಕೊರತೆಯುಳ್ಳದ್ದಾಗಿರುವದು.

7. ಕೃಪೆಯ ಒಡಂಬಡಿಕೆಯಾದ ಸುವಾರ್ತೆಯ ಸಮಾನವಿಲ್ಲದ ಮಹಿಮೆಯನ್ನು ನಿರೀಕ್ಷಿಸಿದ ಅಪೊಸ್ತಲರು, ಮೋಶೆಯು ಒಂದು ಮುಸುಕಿನಿಂದ ತನ್ನ ಮುಖವನ್ನು ಮುಚ್ಚಿ ಕೊಂಡ ಪ್ರಕಾರ, ಹೊರಗಿನ ಆಚಾರಗಳಿಂದಲೂ ನೇಮನಿಷ್ಠೆಗಳಿಂದಲೂ ಮರೆ ಮಾಡದೆ, ಸುವಾರ್ತೆಯ ಶ್ರೇಷ್ಠ ಉಪದೇಶಗಳನ್ನು ಬಹಿರಂಗವಾಗಿಯೂ ಧೈರ್ಯವಾಗಿಯೂ ಪ್ರಸಂಗಿಸಿದರು. (ಹೊರ. ೩೪. ೨೯—೩೫.)

8. ಮೋಶೆಯ ಮುಖದ ಮೇಲೆ ಇದ್ದ ಮುಸುಕು, ಇಲ್ಲದೆ ಹೋಗುವಂಥ ಹಳೇ ಒಡಂಬಡಿಕೆಯ ಅಂತ್ಯವು ಇಸ್ರಯೇಲ್ಯರಿಗೆ ತಿಳಿಯದೆ ಮರೆಯಾಗಿದ್ದದಕ್ಕೆ ಒಂದು ಗುರುತಾಗಿತ್ತು. ಕ್ರಿಸ್ತನೇ ನ್ಯಾಯಪ್ರಮಾಣದ ಅಂತ್ಯವೆಂಬುವದನ್ನು ಅರಿಯದೆ ಇದ್ದರು. ಮೋಶೆಯ ಮುಖದಲ್ಲಿ ಮುಸುಕು ಇದ್ದ ಪ್ರಕಾರ, ಅವರ ಹೃದಯದ ಮೇಲೆ ಮುಸುಕು ಇದ್ದದರಿಂದ ಅವರ ಬುದ್ಧಿ ಅಂಧಕಾರವಾಗಿತ್ತು; ಆದದರಿಂದ ಹಳೇ ಒಡಂಬಡಿಕೆಯು ಕ್ರಿಸ್ತನಲ್ಲಿ ಮುಗಿದು ಹೋಗುತ್ತದೆ ಎಂಬುವದನ್ನು ಅರಿಯದೆ ಇದ್ದರು. ದೇವರ ಕೃಪೆಯಿಂದ ಅವರು ಗುಣ ಪಡುವಾಗ ಅವರ ಹೃದಯದ ಮೇಲಿರುವ ಮುಸುಕು ನಿವರ್ತಿಯಾಗುವದು. ಆಗ ಕ್ರಿಸ್ತನ ದಿವ್ಯ ಮಹಿಮೆಯನ್ನು ಕಂಡು ಅರಿತು ಕೊಳ್ಳುವರು.

೧೪ ಮುಸುಕು ಹಾಕಿ ಕೊಂಡ ಪ್ರಕಾರವಲ್ಲ. ಆದರೆ ಅವರ ಬುದ್ಧಿ ಕಠಿಣವಾಯಿತು; ಯಾಕಂದರೆ ಈ ದಿವ
ಸದ ವರೆಗೆ ಹಳೇ ಒಡಂಬಡಿಕೆ ಓದುವದರಲ್ಲಿ ಅದೇ ಮುಸುಕು ತೆಗೆಯಲ್ಪಡದೆ ಇರುತ್ತದೆ; ಕ್ರಿಸ್ತನಲ್ಲಿ ತೆಗೆದು
೧೫ ಹಾಕಲ್ಪಡುತ್ತದೆ. ಆದರೆ ಈ ದಿವಸದ ವರೆಗೆ, ಮೋಶೆಯು ಓದಲ್ಪಡುವ ಸಮಯದಲ್ಲಿ, ಮುಸುಕು ಅವರ
೧೬ ಹೃದಯದ ಮೇಲೆ ಇರುವದು. ಆದರೆ ಕರ್ತನ ಕಡೆಗೆ ತಿರುಗುವ ಸಮಯದಲ್ಲಿ, ಮುಸುಕು ತೆಗೆಯಲ್ಪ
೧೭ ಡುವದು. ಇದಲ್ಲದೆ [1]ಕರ್ತನೇ ಆ ಆತ್ಮವು. ಕರ್ತನ ಆತ್ಮವು ಎಲ್ಲಿಯೋ, ಅಲ್ಲಿ ಬಿಡುಗಡೆಯು.
೧೮ ಆದರೆ ನಾವೆಲ್ಲರು [2]ತೆರೆದ ಮುಖದಿಂದ ಕರ್ತನ ಮಹಿಮೆಯನ್ನು ಕನ್ನಡಿಯಲ್ಲಿ ನೋಡಿ, ಆತ್ಮವಾದ ಕರ್ತ
ನಿಂದಾದ ಹಾಗೆ, ಅದೇ ಹೋಲಿಕೆಯಾಗಿ ಮಹಿಮೆಯಿಂದ ಮಹಿಮೆಗೆ ಮಾರ್ಪಡುತ್ತೇವೆ.

4. ಆದದರಿಂದ ಈ ಸೇವೆಯನ್ನು ಹೊಂದಿ, ಕರುಣೆ ಪಟ್ಟ ಹಾಗೆ ದಣಿಯೆವು; (೨) ಆದರೆ [3]ನಾಚಿಕೆಯ
ರಹಸ್ಯಗಳನ್ನು ಬೇಡೆಂದು ಬಿಟ್ಟು, ತಂತ್ರದಿಂದ ನಡಿಯದೆ, ದೇವರ ವಾಕ್ಯವನ್ನು ಕೆಡಿಸದೆ, ಸತ್ಯದ ಪ್ರಕಟ
ಣೆಯಿಂದ ಎಲ್ಲಾ ಮನುಷ್ಯರ ಮನಸ್ಸಾಕ್ಷಿಗೆ ದೇವರ ಸನ್ನಿಧಿಯಲ್ಲಿ ನಮ್ಮನ್ನು [4]ಪ್ರತಿಷ್ಠೆ ಮಾಡಿ ಕೊಳ್ಳುತ್ತೇವೆ.
೩, ೪ ಆದರೆ ನಮ್ಮ ಸುವಾರ್ತೆಯು ಮರೆಯಾಗಿದ್ದರೆ, ನಾಶವಾಗುವವರಿಗೆ ಮರೆಯಾಗಿದೆ; ದೇವರ ಹೋಲಿ
ಕೆಯಾದ [5]ಕ್ರಿಸ್ತನ ಮಹಿಮೆಯ ಸುವಾರ್ತೆಯ ಕಾಂತಿಯು ಅವರಿಗೆ ಹೊಳೆಯದ ಹಾಗೆ ಅವರಲ್ಲಿ [6]ಈ
೫ ಲೋಕದ ದೇವರು ಅವಿಶ್ವಾಸಿಗಳ ಬುದ್ಧಿಯನ್ನು ಕುರುಡು ಮಾಡಿದ್ದಾನೆ. ಯಾಕಂದರೆ ನಮ್ಮನ್ನು ನಾವೇ
ಅಲ್ಲ, ಕ್ರಿಸ್ತ ಯೇಸುವನ್ನು ಕರ್ತನೆಂದೂ, ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂದೂ, ಸಾರುತ್ತೇವೆ.
೬ ಯಾಕಂದರೆ ಕತ್ತಲೆಯೊಳಗಿಂದ ಬೆಳಕನ್ನು ಪ್ರಕಾಶಿಸ ಹೇಳಿದ ದೇವರು ತಾನೇ, [7]ಯೇಸು ಕ್ರಿಸ್ತನ ಮುಖ
ದಲ್ಲಿರುವ ದೇವರ ಮಹಿಮೆಯ ತಿಳುವಿಕೆಯ ಬೆಳಕು ಆಗುವದಕ್ಕೆ, ನಮ್ಮ ಹೃದಯಗಳಲ್ಲಿ ಪ್ರಕಾಶಿಸಿದ್ದಾನೆ.

1. ಜಜ್ಜಲ್ಪಟ್ಟ ಹೃದಯದಿಂದ ಗುಣ ಪಡುವ ಒಬ್ಬೊಬ್ಬನು ಶರಣು ಹೊಗುವ ಕರ್ತನು ೩ನೇ ವಚನದಲ್ಲಿ ಹೇಳಲ್ಪಟ್ಟ ಪರಿಶುದ್ಧಾತ್ಮನೇ. ಆತನು ನ್ಯಾಯಪ್ರಮಾಣದ ದಾಸತ್ವದಿಂದ ಬಿಡಿಸಿ ಸ್ವಾಧೀನ ಕೊಡುತ್ತಾನೆ. (ರೋಮಾ. ೬. ೧೪; ೮. ೧೫. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಪಾಪದ ಶೆರೆಯಿಂದ ನಿವರ್ತಿಯಾಗಿ ಪರಿಶುದ್ಧ ದೇವರನ್ನು ನಿರ್ಮಲ ಮನಸ್ಸಿನಿಂದ ಆರಾಧಿಸ ತಕ್ಕ ಶ್ಲಾಘ್ಯವನ್ನು ಹೊಂದುವದು ಎಷ್ಟೋ ಭಾಗ್ಯವು!

2. ಪರಿಶುದ್ಧಾತ್ಮನ ಕೃಪೆ ಹೊಂದಿದವರೆಲ್ಲರೂ, ಇಸ್ರಯೇಲರು ಮುಸುಕುಳ್ಳ ಹೃದಯದಿಂದ ನ್ಯಾಯಪ್ರಮಾಣವನ್ನು ಓದಿದ ಪ್ರಕಾರವಲ್ಲ, ಹೊಸ ಒಡಂಬಡಿಕೆಯ ಕಾಂತಿಯಲ್ಲಿ ಪ್ರಜ್ವಲಿಸುವ ದೇವರ ಮಹಿಮೆಯನ್ನು ಪ್ರತ್ಯಕ್ಷವಾಗಿ ಕಂಡು, ಅದೇ ಹೋಲಿಕೆಯಲ್ಲಿ ರೂಪವಾಗಿ ಸದಾಕಾಲ ಮಹಿಮೆಯ ಮೇಲೆ ಮಹಿಮೆಯನ್ನು ಹೊಂದಿ ಪ್ರಜ್ವಲಿಸುತ್ತಿರುವರು.

3. ಇಂಥಾ ಆತ್ಮನ ಮಹಿಮೆಯಾದ ಸೇವೆಯು ನಮಗಿರುವದರಿಂದಲೂ (೩. ೭—೧೧.) ಅದನ್ನು ಮಾಡುವದಕ್ಕೆ ದೈವಾನುಗ್ರಹ ಉಂಟಾಗಿರುವದರಿಂದಲೂ, ಸುವಾರ್ತೆಯ ಸತ್ಯಗಳನ್ನು ನಾಚಿಕೆಯೂ ಆಯಾಸವೂ ಪಡದೆ, ಧೈರ್ಯವಾಗಿ ಪ್ರಸಂಗಿಸುತ್ತೇವೆ, ಅನ್ನುತ್ತಾನೆ.

4. ಕ್ರಿಸ್ತಮಾರ್ಗದ ಸತ್ಯಗಳನ್ನು ಯಾವದೊಂದು ಕಳಂಕವೂ ಬೆರಿಕೆಯೂ ಇಲ್ಲದೆ, ದೇವರ ಸನ್ನಿಧಾನದ ಮುಂದೆಯೂ ಪ್ರತಿ ಮನುಷ್ಯನ ಮನಸ್ಸಾಕ್ಷಿಗೆ ತಕ್ಕ ವಿಧವಾಗಿಯೂ ಧೈರ್ಯದಿಂದ ಪ್ರಸಂಗಿಸುವದೇ ಉತ್ತಮ ಬೋಧಕರ ಲಕ್ಷಣವಾಗಿಯೂ ಪ್ರತಿಷ್ಠೆಯಾಗಿಯೂ ಇರುತ್ತದೆ. ದುಷ್ಟ ಸೈತಾನನಿಂದ ಹೃದಯ ಕುರುಡಾದವರಿಗೇ ಹೊರ್ತು ಮತ್ತೊಬ್ಬರಿಗೆ ಇದರ ಮಹಿಮೆ ತೋರದೆ ಇರಲಾರದು.

5. ಇದು ಕ್ರಿಸ್ತನ ಮಹಿಮೆಯ ಸುವಾರ್ತೆ ಅಂದರೆ, ಇದರಲ್ಲಿ ದೇವರ ಹೋಲಿಕೆಯಾಗಿರುವ ಕ್ರಿಸ್ತನ ಲಕ್ಷಣವಾಗಿರುವ ಮಹಿಮೆಯೂ, ಮನಸ್ಸಿನ ಗಾಢಾಂಧಕಾರವನ್ನು ತೊಲಗಿಸಿ, ಜ್ಞಾನ ಪ್ರಕಾಶವನ್ನು ಉಂಟು ಮಾಡುವ ಆತನ ಪುಣ್ಯಕ್ರಿಯೆಯ ಮಹಿಮೆಯೂ, ಚನ್ನಾಗಿ ತೋರುವದರಿಂದ ಇದು ಕ್ರಿಸ್ತನ ಮಹಿಮೆಯ ಸುವಾರ್ತೆ ಎಂಬುವದಕ್ಕೆ ಸಂದೇಹವಿಲ್ಲ.

6. ಈ ಪ್ರಪಂಚದ ಮರುಳನ್ನು ಕಲ್ಪಿಸಿದ ದುರ್ಮಾರ್ಗರ ಹೃದಯಗಳಲ್ಲಿ ಧೊರೆತನ ಮಾಡುವ ದುಷ್ಟ ಪಿಶಾಚನಿಗೆ ಈ ಲೋಕದ ದೇವರೆಂಬುವ ಹೆಸರುಂಟು. (ಯೋಹಾ. ೧೬. ೧೧.) ಕ್ರಿಸ್ತನ ಸುವಾರ್ತೆಯ ಮಹಿಮೆಯನ್ನು ಮರೆ ಮಾಡುವದೂ, ಅದರ ಕಾಂತಿಯು ಮನುಷ್ಯರ ಹೃದಯದಲ್ಲಿ ಹೊಳೆಯದಂತೆ ತಡೆ ಮಾಡುವದೂ ಇವೇ ಈ ಪ್ರಪಂಚದ ದೇವರಾದ ಪಿಶಾಚನ ಬಿಡದ ಕೆಲಸವಾಗಿದೆ. ಅಜ್ಞಾನದ ಅಂಧಕಾರದಲ್ಲಿ ಮುಣುಗಿರುವ ಆತ್ಮಕೋಟಿಗಳಿಗೆ ಆ ಸುವಾರ್ತೆಯನ್ನು ಪ್ರಕಟಿಸುವದೇ ಉತ್ತಮ ಬೋಧಕರ ಮುಖ್ಯ ಕೆಲಸವು. ಅವರು ತಮ್ಮನ್ನು ಮಹಿಮೆ ಪಡಿಸಿ ಕೊಳ್ಳದೆ, ತಮ್ಮ ಪರಮ ಯಜಮಾನನನ್ನು ಮಹಿಮೆ ಪಡಿಸುವವರಾಗಿಯೂ, ಆತನ ನಿಮಿತ್ತ ತಾವು ಸಭೆಯ ಸೇವಕರೆಂದು ನೆನಸಿ, ತಮ್ಮನ್ನು ತಗ್ಗಿಸಿ ಕೊಳ್ಳುವವರಾಗಿಯೂ ಇರುವರು.

7. ಯೇಸುವಿನ ಮುಖಪ್ರಕಾಶದ ಮಹಿಮೆಯಿಂದ ಹೃದಯ ತುಂಬಿರುವಾಗ ಸ್ವಂತ ಮಹಿಮೆಗೆ ಸ್ಥಳವಿಲ್ಲ. ಕತ್ತಲೆಯೊಳಗಿಂದ ಬೆಳಕನ್ನು ಬರ ಮಾಡಿದ ಸರ್ವಶಕ್ತನಾದ ದೇವರು, ತಿಳುವಳಿಕೆ ಎಂಬ ಬೆಳಕಿನಿಂದ, ಕತ್ತಲೆಯಾಗಿರುವ ಮನಸ್ಸನ್ನು ಪ್ರಕಾಶ ಮಾಡುತ್ತಾನೆ. ಈ ಮಹಾ ಪ್ರಕಾಶವಾದ ಮಹಿಮೆ, ಪರಂಜ್ಯೋತಿಯಾದ ಕ್ರಿಸ್ತನ ಮುಖದಲ್ಲಿಯೇ ತೋರುತ್ತದೆ. ಇದು ಮೋಶೆಯ ಮುಖದ ಮಹಿಮೆಗಿಂತ ಬಹಳ ಶ್ರೇಷ್ಠವಾದದ್ದೂ ನಿತ್ಯವಾದದ್ದೂ ಆಗಿದೆ. (೩. ೧೩.) ಈ ಮಹಿಮೆಯ ಪ್ರಕಾಶವನ್ನು ನಾವು ಹೊಂದುವ ಹಾಗೆ ಯೇಸುವಿನ ಮುಖದರ್ಶನವನ್ನು ಯಾವಾಗಲೂ ಹುಡುಕುವ.



ಅಪೊಸ್ತಲರ ಸೇವೆ ಬಲಹೀನವಾದದ್ದಾಗಿದ್ದರೂ ದೈವಾನುಗ್ರಹದಿಂದ ಪ್ರಯೋಜನವೂ ಮಹಿಮೆಯೂ ಉಳ್ಳದ್ದಾಗಿ ತೋರುವದು.

೭ ಆದರೆ [1]ಬಲದ ಹೆಚ್ಚುವಿಕೆ ನಮ್ಮಿಂದಲ್ಲ, ದೇವರದಾಗಿರುವ ಹಾಗೆ ಈ [2]ನಿಕ್ಷೇಪವು ಮಣ್ಣಿನ ಪಾತ್ರೆಗಳಲ್ಲಿ
೮ ನಮಗೆ ಉಂಟು. ಎಲ್ಲಾದರಲ್ಲಿ ಇರಿಕಿಸಲ್ಪಟ್ಟವರಾಗಿ ಇಕ್ಕಟ್ಟು ಪಡದೆ, ದಿಕ್ಕು ಕಾಣದವರಾಗಿ ದಿಕ್ಕಿಲ್ಲದ
೯, ೧೦ ವರಾಗಿರದೆ, ಹಿಂಸೆ ಪಟ್ಟವರಾಗಿ ಕೈ ಬಿಡಲ್ಪಡದೆ, [3]ಕೆಡವಲ್ಪಟ್ಟವರಾಗಿ ಕೆಡದೆ, ಯೇಸುವಿನ
ಜೀವ ಸಹ ನಮ್ಮ ಶರೀರದಲ್ಲಿ ಪ್ರತ್ಯಕ್ಷವಾಗುವ ಹಾಗೆ, ಎಂದಿಗೂ ಕರ್ತನಾದ ಯೇಸುವಿನ [4]ಸಾಯುವಿಕೆ
೧೧ ಯನ್ನು ಶರೀರದಲ್ಲಿ ಹೊತ್ತು, ತಿರುಗುತ್ತೇವೆ. ಯಾಕಂದರೆ ನಮ್ಮ ಮರ್ತ್ಯ ಮಾಂಸದಲ್ಲಿ ಯೇಸುವಿನ
ಜೀವವೂ ಪ್ರತ್ಯಕ್ಷವಾಗುವ ಹಾಗೆ, ಜೀವಿಸುವ ನಾವು ಎಂದಿಗೂ ಯೇಸುವಿನ ನಿಮಿತ್ತ ಮರಣಕ್ಕೆ ಒಪ್ಪಿಸ
ಲ್ಪಡುತ್ತೇವೆ.
೧೨, ೧೩ ಹೀಗಿರಲಾಗಿ ಮರಣವು ನಮ್ಮಲ್ಲಿ ಬಲವಾಗಿದೆ, ಆದರೆ ನಿಮ್ಮಲ್ಲಿ ಜೀವವು. ಇದಲ್ಲದೆ, ವಿಶ್ವಾಸಿಸಿ
ದೆನು, ಆದದರಿಂದ ಮಾತಾಡಿದೆನು, ಎಂದು (ಕೀರ್ತ. ೧೧೬. ೧೦.) ಬರೆದ ಪ್ರಕಾರ, [5]ಅದೇ ವಿಶ್ವಾಸದ
೧೪ ಆತ್ಮವುಳ್ಳವರಾಗಿ, ನಾವೂ ವಿಶ್ವಾಸಿಸುತ್ತೇವೆ, ಆದದರಿಂದ ಮಾತಾಡುತ್ತೇವೆ. ಹ್ಯಾಗಂದರೆ ಕರ್ತನಾದ
ಯೇಸುವನ್ನು ಎಬ್ಬಿಸಿದವನು ನಮ್ಮನ್ನೂ ಯೇಸುವಿನ ಮುಖಾಂತರ ಎಬ್ಬಿಸಿ, ನಿಮ್ಮ ಸಂಗಡ ಮುಂದೆ ನಿಲ್ಲಿ

1. ದೇವರು ಕೃಪೆಯಿಂದ ತನಗೆ ಕೊಟ್ಟ ಶ್ರೇಷ್ಠವಾದ ಊಳಿಗವನ್ನು ಮಾಡಿದ್ದರಲ್ಲಿ (೨. ೧೪.) ಪೌಲನು ತನ್ನ ಬಲಹೀನತ್ವವನ್ನು ಗ್ರಹಿಸಿ, ಆ ಬಲಹೀನತ್ವದಲ್ಲಿ ಅವನನ್ನು ಆದರಿಸಿ, ಬಲಹೀನತ್ವಗಳನ್ನು ತಿಳಿದವನಾದ ಕ್ರಿಸ್ತನಿಗೆ ಒಪ್ಪಾಗುವ ಹಾಗೆ ಮಾಡಿದ ದೇವರ ತ್ರಾಣವನ್ನು ನೆನಸಿ ಆತನನ್ನು ಸ್ತುತಿಸುತ್ತಾನೆ. (೪. ೭—೧೧.) ಇನ್ನು ಮೇಲೆ ನಿರ್ಲಯವಾದ ವರವನ್ನು ಹೊಂದಿ, ನಿತ್ಯಾನಂದಪದವಿಯಲ್ಲಿ ಬಾಳುವೆನೆಂಬ ನಂಬಿಕೆಯೇ ಅವನ ಬಲಹೀನತ್ವದಲ್ಲಿ ಅವನನ್ನು ಬಲ ಪಡಿಸುವದಾಯಿತು. (೧೨—೧೮. ವ., ೫. ೧—೪.) ಆ ಮೇಲಾದ ಪದವಿಗೆ ದೇವರೇ ಅವನನ್ನು ಪಕ್ವ ಮಾಡಿದನು. (೫—೮. ವ.) ನ್ಯಾಯತೀರ್ವಿಕೆಯ ದಿವಸದಲ್ಲಿ ಸಂಭವಿಸುವ ಮಹತ್ತಾದ ಕಾರ್ಯಗಳನ್ನು ನೆನಸಿ, ಅವನು ತನ್ನ ಊಳಿಗವನ್ನು ಯಥಾರ್ಥವಾಗಿ ಮಾಡಿದನು. (೯—೧೨. ವ.) ಮತ್ತು ಅವನ ಹೃದಯದಲ್ಲಿ ತುಂಬಿ ಇದ್ದ ಯೇಸುವಿನ ಮಹಾ ಪ್ರೀತಿಯನ್ನು ಗ್ರಹಿಸಿ ಬಹು ಜಾಗ್ರತೆಯಿಂದ ಸೇವಿಸಿದನು. (೧೩—೧೬. ವ.) ತನ್ನ ಸೇವೆಯನ್ನೂ, ದೇವರು ತನ್ನ ಸಂಗಡ ಇದ್ದು ಕಡೇರಿಸಿದ ಆತನ ಕೃಪೆಯನ್ನೂ ಗ್ರಹಿಸಿ, ಅನ್ಯೋನ್ಯವಾಗುವಿಕೆ ಎಂಬ ಶ್ರೇಷ್ಠ ಉಪದೇಶವನ್ನು ಉತ್ಸಾಹದಿಂದ ಸಾರಿದನು. (೧೮—೨೧. ವ., ೬. ೧, ೨.) ಅದರ ಸಲವಾಗಿ ತನಗೆ ಬಂದ ಎಲ್ಲಾ ಉಪದ್ರಗಳನ್ನು ಸಹಿಸಿ, ಸದ್ಗುಣಗಳನ್ನು ತೋರಿಸಿ, ಕ್ರಿಸ್ತ ಸರಕ್ಷಣೆಯ ಮಹತ್ವಗಳನ್ನು ಸಾರುತ್ತಾ ಬಂದನು. (೩—೧೦. ವ.)

2. ಮಣ್ಣಿನ ಪಾತ್ರೆಯಲ್ಲಿ ಹೊನ್ನಿನ ನಾಣ್ಯಗಳು ಇರುವ ಪ್ರಕಾರ, ಕ್ರಿಸ್ತನ ಅಪರಿಮಿತ ಐಶ್ವರ್ಯವೆಂಬ ನಿಕ್ಷೇಪವು ಮಣ್ಣಿನ ಪಾತ್ರೆಗಳಾದ ತನ್ನ ಸೇವಕರ ಶರೀರಗಳಲ್ಲಿ ಅಡಗಿದೆ. ಮಣ್ಣಿನಿಂದಾದದ್ದೂ, ಮಣ್ಣಿಗೆ ಮಣ್ಣಾಗಿ ಹೋಗುವದೂ ಆದ ಶರೀರದಲ್ಲಿ ಇಷ್ಟು ಮಹಿಮೆಯಾದ ನಿಕ್ಷೇಪವು ಇರುವದು ಆಶ್ಚರ್ಯವೇ ಸರಿ. ಮೇಲಾದ ಸೃಷ್ಟಿಗಳಾಗಿರುವ ದೇವದೂತರಿಗೆ ಈ ನಿಕ್ಷೇಪವು ಕೊಡಲ್ಪಟ್ಟಿದ್ದರೆ, ದೇವರ ಮಹಿಮೆ ಅಷ್ಟಾಗಿ ತೋರದು. ಮಣ್ಣಿನ ಪಾತ್ರೆಯಲ್ಲಿ ನಿಕ್ಷೇಪವಿರುವದೇ ಮಹಿಮೆ. (೧ ಕೊರಿ. ೧. ೨೬—೩೧.) ಈ ಮಣ್ಣಿನ ಪಾತ್ರೆಯ ಸ್ವಭಾವವನ್ನೂ, ಅದರಲ್ಲಿ ಡಲ್ಪಟ್ಟ ನಿಕ್ಷೇಪಕ್ಕಾಗಿ, ದೇವರು ಅದನ್ನು ಕಾಪಾಡಿದ್ದೂ ಅದ ಅತಿಶಯವನ್ನು ೮—೧೦. ವಚನಗಳಲ್ಲಿ ದಿಟ್ಟವಾಗಿ ಹೇಳಿ ಇದೆ.

3. ದೇವರ ದಾಸರಿಗೆ ಎಲ್ಲಾ ಕಡೆಗಳಲ್ಲಿಯೂ ಇಕ್ಕಟ್ಟೂ ಉಪದ್ರವೂ ಇದ್ದಾಗ್ಯೂ, ಅವರು ಕಳವಳ ಪಡದೆ ನಂಬಿಕೆಯನ್ನು ಬಿಟ್ಟು ಬಿಡದೆ ಇರುವರು; ಕೆಡವಲ್ಪಟ್ಟರೂ, ನಾಶವಾಗಲಾರರು. ಯುದ್ಧರಂಗದಲ್ಲಿ ನಿಲ್ಲುವ ವೀರನು ಕೆಳಗೆ ಬಿದ್ದರೂ ತಿರಿಗಿ ಎದ್ದು ನಿಂತು ಯುದ್ಧ ಮಾಡುವ ಪ್ರಕಾರ, ಜಯಶಾಲಿಯ ಧ್ವಜದ ಕೆಳಗೆ ನಿಂತು ಯುದ್ಧ ಮಾಡುವ ಕ್ರೈಸ್ತ ವೀರನು ತನ್ನ ಬಲಹೀನತ್ವದಿಂದ ಬಿದ್ದರೂ, ಆ ಬಲಹೀನತ್ವದಲ್ಲಿ ತೋರುವ ದೇವರ ತ್ರಾಣದಿಂದ ಎದ್ದು ಶೌರ್ಯವಾಗಿ ಯುದ್ಧ ಮಾಡುವನೇ ಹೊರ್ತು ಮಡಿದು ಹೋಗಲಾರನು.

4. (ರೋಮಾ. ೪. ೧೯.) ಅಪೊಸ್ತಲರಿಗೆ ಸಂಭವಿಸಿದ ಉಪದ್ರವೂ ಹಿಂಸೆಯೂ ಜೀವದಲ್ಲಿ ಪ್ರಕಟವಾದ ಮರಣದ ಹಾಗಿತ್ತು. ಅಂಥಾ ಮರಣದಿಂದ ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ ಕ್ರಿಸ್ತನಿಗೆ ಸಮವಾದರು. ಆತನ ದಿವ್ಯ ಬಲವು ಅವರಲ್ಲಿ ಪೂರ್ಣವಾಗಿ ಪ್ರಕಟವಾದದರಿಂದ ಅವರು ಸಭೆಗೆ ದೊಡ್ಡ ಆಶೀರ್ವಾದವಾಗಿದ್ದರು. ಅವರಿಗೆ ಕಷ್ಟವು, ಸಭೆಗೆ ಹೇಳ ಕೂಡದ ಭಾಗ್ಯವು. (೧೨. ವ.)

5. ಈ ವಾಕ್ಯವಿರುವ ಕೀರ್ತನೆಯನ್ನು ಬರೆದವನಿಗೆ ಇದ್ದ ನಂಬಿಕೆಯ ಆತ್ಮವು ಪೌಲನಿಗೂ ಇದ್ದದರಿಂದ ಅವನು ಹೀಗೆ ಹೇಳುತ್ತಾನೆ. ೧೧೬ನೇ ಕೀರ್ತನೆಯನ್ನು ಓದಿ ನೋಡಿದರೆ, ಅದರಿಂದ ತೆಗೆದ ಈ ವಾಕ್ಯದ ಅರ್ಥವು ಸರಿಯಾಗಿ ತೋರುವದು. ದೇವರನ್ನು ಸ್ತುತಿಸುವದಕ್ಕೆ ವಿಶ್ವಾಸವೂ ನಂಬಿಕೆಯೂ ಆಧಾರವಾಗಿರುವದರಿಂದ, ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ಸರ್ವಶಕ್ತನಾದ ದೇವರು ತನ್ನ ದಾಸರನ್ನು ಸಹ ಎಬ್ಬಿಸಿ, ಮಹಿಮೆಯಲ್ಲಿ ಶೇರಿಸುವನೆಂಬುವದನ್ನು ಗಂಭೀರವಾಗಿ ಹೇಳಿ, ದೇವರನ್ನು ಸ್ತುತಿಸುತ್ತಾನೆ.

೧೫ ಸುವನೆಂದು ಬಲ್ಲೆವು. ಯಾಕಂದರೆ ಅಧಿಕವಾಗುವ ಕೃಪೆಯು ಅನೇಕರ ಸ್ತೋತ್ರದಿಂದ ದೇವರ ಮಹಿಮೆ
ಗಾಗಿ ಹೆಚ್ಚುವ ಹಾಗೆ, ಎಲ್ಲಾ [1]ನಿಮಗೋಸ್ಕರವೇ.
೧೬ ಆದದರಿಂದ ದಣಿಯೆವು; ಆದರೆ ನಮ್ಮ ಹೊರಗಿನ ಮನುಷ್ಯನು ನಾಶವಾದರೂ, [2]ಒಳಗಿನವನು ದಿನ ದಿನ
೧೭ ಕ್ಕೆ ಹೊಸಬನಾಗುತ್ತಾನೆ. ಯಾಕಂದರೆ ಕ್ಷಣ ಮಾತ್ರದ ಹೌರವಾದ ನಮ್ಮ ಉಪದ್ರವು ಹೆಚ್ಚಿಗಿಂತ
೧೮ ಹೆಚ್ಚಾದ ನಿತ್ಯ ಮಹಿಮೆಯ ಭಾರವನ್ನು ನಮಗೆ ಉಂಟು ಮಾಡುತ್ತದೆ; ಕಾಣುವವುಗಳನ್ನಲ್ಲ, ಕಾಣದವು
ಗಳನ್ನೇ ದೃಷ್ಟಿಸುತ್ತೇವಲ್ಲ? ಯಾಕಂದರೆ [3]ಕಾಣುವವುಗಳು ತಾತ್ಕಾಲಿಕವು, ಕಾಣದವುಗಳು ನಿತ್ಯವು.

5. ಯಾಕಂದರೆ [4]ಗುಡಾರವಾಗಿರುವ ನಮ್ಮ ಭೂಭಾವವಾದ ಮನೆಯು ಬಿಚ್ಚಲ್ಪಟ್ಟರೆ, ಕೈಕೆಲಸವಲ್ಲದ
೨ ನಿತ್ಯ ಮನೆಯಾಗಿರುವ [5]ದೇವರಿಂದಾದ ಕಟ್ಟುವಿಕೆಯು ಆಕಾಶಗಳಲ್ಲಿ ನಮಗುಂಟೆಂದು ಬಲ್ಲೆವು. ಹ್ಯಾಗಂ
ದರೆ ಪರಲೋಕದಿಂದಿರುವ ನಮ್ಮ ನಿವಾಸವನ್ನು ಮೇಲೆ ಹೊದ್ದು ಕೊಳ್ಳ ಅಪೇಕ್ಷಿಸಿ, [6]ಇದರಲ್ಲಿ ಮೂಲುಗುತ್ತೇವೆ;
೩,೪ ನಾವು [7]ಹೊದ್ದು ಕೊಂಡು ಬೆತ್ತಲೆಯಲ್ಲದವರಾಗಿ ಕಾಣಿಸಲ್ಪಟ್ಟರೆ, ಸರಿ. ಯಾಕಂದರೆ ಗುಡಾರದಲ್ಲಿ
ರುವ ನಾವು ಭಾರ ಹೊತ್ತು ಮೂಲುಗುತ್ತೇವೆ; ಏನಂದರೆ ವಸ್ತ್ರ ತೆಗೆಯುವದಕ್ಕಲ್ಲ, ಮರ್ತ್ಯವಾದದ್ದು
ಜೀವದಿಂದ ನುಂಗಲ್ಪಡುವ ಹಾಗೆ ಮೇಲೆ ಹೊದ್ದು ಕೊಳ್ಳುವದಕ್ಕೆ ಇಚ್ಛೈಸುತ್ತೇವೆ.

1. ಅಪೊಸ್ತಲರಿಗೆ ಉಂಟಾದಂಥ, ಸಭೆಯ ಮೇಲಿಗೆ ಹೇತುವೆಯಾಗಿದ್ದಂಥ ಉಪದ್ರಗಳು ದೇವರ ಕೃಪೆಯನ್ನು ಹೊಂದಿ, ಅನೇಕರು ಆತನನ್ನು ಸ್ತುತಿಸಲೂ ಆತನ ಹೆಸರನ್ನು ಮಹಿಮೆ ಪಡಿಸಲೂ ತಕ್ಕದ್ದಾಗಿದ್ದದರಿಂದ, ದೇವರ ಮಹಿಮೆ ಪ್ರಕಟವಾಗುವದಕ್ಕೆ ಹೇತುವೆಯಾಗಿ, ಕೃಪೆಯು ಅನೇಕರ ಸ್ತೋತ್ರದಿಂದ ಹೆಚ್ಚಿತು. (೧. ೧೧.) ಕೃತಜ್ಞತೆಯುಳ್ಳಂಥ ಸಭೆಯು ಕೃಪೆಯಿಂದ ಬೆಳೆಯುವ ಸಭೆಯಾಗಿರುತ್ತದೆ. ಅಪೊಸ್ತಲರಿಗೆ ಸಂಭವಿಸಿದ ಕಷ್ಟಗಳಿಂದ ಸಭೆಗೆ ಇಷ್ಟು ಮಹಂತವಾದ ಮೇಲು ಉಂಟಾದದರಿಂದ ಅವರು ದಣಿದು ಹೋಗಲಿಲ್ಲ. (೧೬—೧೮. ವ.)

2. ಹೊರಗಿನ ಭೂಲೋಕಸಮ್ಮಂಧವಾದ ಶರೀರವು ದಿನ ದಿನ ಕಳೆದು ಕ್ಷೀಣವಾಗಿ ಹೋದರೂ, ಮೇಲಾದ ಲೋಕಕ್ಕೆ ಸಮ್ಮಂಧ ಪಟ್ಟ ಆತ್ಮವು ಹೆಚ್ಚೆಚ್ಚಾಗಿ ನೂತನ ಮಾಡಲ್ಪಟ್ಟು ಪರಲೋಕಕ್ಕೆ ಪಕ್ವವಾಗುತ್ತದೆ.

3. ಇಹದಲ್ಲಿರುವ ಉಪದ್ರವನ್ನೂ ಪರದಲ್ಲಾಗುವ ಮಹಿಮೆಯನ್ನೂ ಇದರಲ್ಲಿ ಚನ್ನಾಗಿ ಭೇದಿಸಿ ತೋರಿಸಿ ಇದೆ. ಉಪದ್ರವು ಲೇಸಾದದ್ದು, ಮಹಿಮೆಯು ಅಧಿಕ ಭಾರವಾದದ್ದು. ಉಪದ್ರವು ಶೀಘ್ರದಲ್ಲಿ ಮುಗಿಯುವದು, ಮಹಿಮೆಯು ನಿತ್ಯವಾದದ್ದು. ಇಂಥಾ ನಿತ್ಯ ಮಹಿಮೆಯಲ್ಲಿ ಭಕ್ತರ ಅಲ್ಪ ಉಪದ್ರವು ಮುಗಿದು ಹೋಗುವದು. ಆದದರಿಂದ ನೀರ ಬೊಬ್ಬುಳಿಯಂತೆ ನೆಲೆ ಇಲ್ಲದ ಈ ಪ್ರಪಂಚದ ಬಾಳನ್ನು ಹಿಂದಟ್ಟದೆ, ಶಾಶ್ವತಾನಂದವನ್ನು ವಿಶ್ವಾಸದ ಕಣ್ಣಿನಿಂದ ದೃಷ್ಟಿಸಿ ವಾಂಛೆಯಿಂದ ಅದನ್ನು ಹಿಂದಟ್ಟಿ ನಡೆಯುವ. ಆ ನಿತ್ಯಾನಂದಕ್ಕೆ ಈ ಅಲ್ಪ ಉಪದ್ರವನ್ನು ಹ್ಯಾಗೆ ಸರಿ ಕಟ್ಟ ಬಹುದು? ಆ ನಿತ್ಯ ಮಹಿಮೆಯನ್ನು ಹೊಂದಲಿರುವವರು ಅಲ್ಪ ಕಾಲವಿರುವ ಈ ಲೇಸಾದ ಉಪದ್ರಕ್ಕೆ ಹ್ಯಾಗೆ ಹಿಂಜರಿಯ ಬಹುದು?

4. ೪. ೧೬—೧೮. ವಚನಗಳಲ್ಲಿ ಹೇಳಲ್ಪಟ್ಟ ಭಕ್ತರ ನಂಬಿಕೆಗೆ ಆಧಾರವು ಈ ವಚನದಲ್ಲಿ ತೋರುತ್ತದೆ. ಶರೀರವು ನಾಶವಾದರೂ, ಎಂದಿಗೂ ನಾಶವಾಗದ ಜೀವವುಂಟಾಗುವದೆಂದು ದೃಢವಾಗಿ ವಿಶ್ವಾಸಿಸುವದೇ ಅದಕ್ಕೆ ಆಧಾರವು.

5. ಮನುಷ್ಯದೇಹವು ವಸ್ತ್ರದಿಂದ ಮಾಡಲ್ಪಟ್ಟ ಗುಡಾರದ ಹಾಗೆ ನೆಲೆ ಇಲ್ಲದ್ದಾಗಿಯೂ ಅಸ್ಥಿರವಾಗಿಯೂ ಇರುತ್ತದೆ. (ಯೆಶಾ. ೩೮. ೧೨. ೨ ಪೇತ್ರ. ೧. ೧೩.) ಹಾಕಲ್ಪಟ್ಟಿರುವ ಗುಡಾರವು ಕೆಡವಲ್ಪಡುವ ಪ್ರಕಾರ, ಮಣ್ಣಿನಿಂದ ರೂಪಿಸಲ್ಪಟ್ಟ ಮರ್ತ್ಯ ಶರೀರವು ನಾಶವಾಗುವದು. ಆದರೆ ಅದು ನಾಶವಾಗುವಾಗ ದೇವರಿಂದ ರೂಪಿಸಲ್ಪಟ್ಟ ನಾಶವಾಗದ ದೇಹ ಉಂಟಾಗುವದು. ಈಗಲಿರುವ ಜಡ ಶರೀರವು ದೇವರಿಂದ ಭಯಂಕರವಾಗಿಯೂ ಅದ್ಭುತವಾಗಿಯೂ ಉಂಟು ಮಾಡಲ್ಪಟ್ಟಿದ್ದಾಗ್ಯೂ, (ಕೀರ್ತ. ೧೩೯. ೧೪.) ಪುನರುತ್ಥಾನವಾಗುವ ದಿವಸದಲ್ಲಿ ಉಂಟಾಗುವ ದೇಹವು, ತಂದೆ ತಾಯಿಗಳಿಂದ ಉಂಟಾಗದೆ, ಪಾಪ ಮರಣಗಳೆಂಬ ಕೇಡುಗಳಿಂದ ಭಿನ್ನವಾಗದೆ, ವಿಶೇಷ ವಿಧವಾಗಿ ದೇವರಿಂದ ರೂಪಿಸಲ್ಪಡುವ ವಜ್ರಕಾಯವಾಗಿರುವದು. ಮರಣಕ್ಕೂ ಪುನರುತ್ಥಾನಕ್ಕೂ ಮಧ್ಯದಲ್ಲಿರುವ ಸ್ಥಿತಿಯನ್ನು ಇಲ್ಲಿ ತೋರಿಸಲಿಲ್ಲ.

6. ನೆಲೆ ಇಲ್ಲದ ಗುಡಾರದ ಹಾಗಿರುವ ಮಣ್ಣಿನದಾದ ಶರೀರದಲ್ಲಿ ಉಂಟಾಗುವ ನಾನಾ ಸಂಕಟಗಳನ್ನು ತಾಳಲಾರದೆ ಮೂಲುಗುತ್ತೇವೆ. (ರೋಮಾ. ೮. ೨೩.) ಆದಾಗ್ಯೂ ನೆಲೆಯಾದ ನಿವಾಸವಾಗಿರುವ ಮೋಕ್ಷಮನೆಯ ವಾಂಛೆಯಿಂದ ಈ ಉಪದ್ರಗಳನ್ನೆಲ್ಲಾ ತಾಳ್ಮೆಯಾಗಿ ಸಹಿಸ ಬೇಕು. (೪. ವ.)

7. ಭಕ್ತರಿಗುಂಟಾಗುವ ದಿವ್ಯ ಶರೀರವನ್ನು ಕುರಿತು ಮೇಲಿನ ವಚನಗಳಲ್ಲಿ ಒಂದು ಮನೆಗೂ, ಈ ವಚನಗಳಲ್ಲಿ ಒಂದು ವಸ್ತ್ರಕ್ಕೂ ಉಪಮಾನವಾಗಿ ಹೇಳಿ ಇದೆ. ಈ ಗುಡಾರವು ಬಿದ್ದು ಹೋಗುವಾಗ ನಿರ್ವಾಣಿಗಳಾಗಿರದೆ ದಿವ್ಯ ಶರೀರವಾದ ಅಲಂಕಾರ ವಸ್ತ್ರದಿಂದ ಮುಚ್ಚಲ್ಪಡುವೆವು. ಮರಣವು ಜೀವದಿಂದ ನುಂಗಲ್ಪಡುವದು. ಈ ಮಹಿಮೆಯನ್ನು ಭಕ್ತರೆಲ್ಲರು ವಾಂಛೆಯಿಂದ ನಿರೀಕ್ಷಿಸುತ್ತಾರೆ.



೫ ಇದಲ್ಲದೆ [1]ಇದಕ್ಕಾಗಿಯೇ ನಮ್ಮನ್ನು ಸಿದ್ಧ ಮಾಡಿದವನು, ಆತ್ಮದ ಮುಂಗಡವನ್ನು ನಮಗೆ ಕೊಟ್ಟ ದೇವರೇ.
೬ ಹೀಗಿರಲಾಗಿ ಯಾವಾಗಲೂ ಧೈರ್ಯ ಪಟ್ಟು, ಶರೀರದಲ್ಲಿ ಸ್ವವಾಸವಾಗಿ ಕರ್ತನಿಗೆ ಪರವಾಸವಾಗಿದ್ದೇ
೭,೮ ವೆಂದು ತಿಳಿದು, [2]ದೃಷ್ಟಿಯಿಂದಲ್ಲ, ವಿಶ್ವಾಸದಿಂದಲೇ ನಡೆದು ಕೊಳ್ಳುವವರಾಗಿದ್ದು, ಹ್ಯಾಗಾದರೂ
[3]ಧೈರ್ಯ ಪಟ್ಟು, ಶರೀರಕ್ಕೆ ಪರವಾಸವಾಗಿ ಕರ್ತನ ಬಳಿಯು ಸ್ವವಾಸವಾಗ ಬಹು ಹೆಚ್ಚಾಗಿ ಅಪೇಕ್ಷಿಸುತ್ತೇವೆ.
೯ ಆದದರಿಂದ ಸ್ವವಾಸವಾಗಿದ್ದರೂ, ಪರವಾಸವಾಗಿದ್ದರೂ, ಅವನನ್ನು ಮೆಚ್ಚಿಸುವ ಮಾನವನ್ನು ಆಶಿಸುತ್ತೇವೆ.
೧೦ ಯಾಕಂದರೆ ಒಬ್ಬೊಬ್ಬನು ಶರೀರದಲ್ಲಿ ಆದವುಗಳನ್ನು, ಒಳ್ಳೇದಾಗಲಿ ಕೆಟ್ಟದ್ದಾಗಲಿ, ಮಾಡಿದ ಪ್ರಕಾರ
ಹೊಂದುವ ಹಾಗೆ, ನಾವೆಲ್ಲರು [4]ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿ ಕೊಳ್ಳ ಬೇಕು.

ಸುವಾರ್ತೆಯ ಊಳಿಗದ ಸ್ವಭಾವ; ಅದರ ವಿಷಯ ದಿವ್ಯ ಕಟ್ಟಳೆಗಳು.

೧೧ [5]ಹೀಗಿರುವದರಿಂದ ಕರ್ತನ ಭಯವನ್ನರಿತು, ಮನುಷ್ಯರನ್ನು ಸಮ್ಮತಿ ಪಡಿಸುತ್ತೇವೆ; ಆದರೆ ದೇವರಿಗೆ ಪ್ರತ್ಯ
೧೨ ಕ್ಷವಾಗಿದ್ಧೇವೆ; ಮತ್ತು ನಿಮ್ಮ ಮನಸ್ಸಾಕ್ಷಿಗಳಲ್ಲಿಯೂ ಪ್ರತ್ಯಕ್ಷವಾಗಿದ್ಧೇವೆಂದು ನಂಬುತ್ತೇನೆ. ಯಾಕಂ
ದರೆ ತಿರಿಗಿ ನಮ್ಮನ್ನು ನಿಮಗೆ ಪ್ರತಿಷ್ಠೆ ಮಾಡಿ ಕೊಳ್ಳುವದಿಲ್ಲ; ಆದರೆ ಹೃದಯದಿಂದಲ್ಲ, ಮುಖದಿಂದಲೇ
ಹೆಚ್ಚಳ ಪಡುವವರಿಗೆ ಎದುರಾಗಿ ನಿಮಗೆ ಮಾತು ಇರುವ ಹಾಗೆ, ನಮಗೋಸ್ಕರ ಹೆಚ್ಚಳ ಪಡುವ ಹಾಗೆ
೧೩ ಆಸ್ಪದವನ್ನು ಕೊಡುತ್ತೇವೆ. ಯಾಕಂದರೆ ನಾವು [6]ಪರವಶವಾಗಿದ್ದರೆ, ದೇವರಿಗೆ; ಸ್ವಸ್ಥ ಬುದ್ಧಿಯಿಂದಿದ್ದರೆ,
೧೪ ನಿಮಗೆ. ಯಾಕಂದರೆ ಕ್ರಿಸ್ತನ ಪ್ರೀತಿಯು ನಮ್ಮನ್ನು ಇರಿಕಿಸುತ್ತದೆ; ಯಾಕಂದರೆ [7]ಒಬ್ಬನು ಎಲ್ಲರಿಗೋ

1. ಇದಕ್ಕಾಗಿ ಎಂಬುವದು ೪ನೇ ವಚನದಲ್ಲಿ ಹೇಳಿದ ಜೀವಕ್ಕೆ ಎಂಬ ಅರ್ಥವು. ದೇವರು ಈ ಜೀವವನ್ನು ತನ್ನ ಆತ್ಮನಿಂದ ನಡಿಸುತ್ತಾ ಬರುವ ಅದ್ಭುತ ಕ್ರಿಯೆಯ ಫಲವಾಗಿದೆ. ಭಕ್ತರು ಈ ಜೀವವನ್ನು ಹೊಂದಿ ಬಾಳುವರೆಂಬುವದಕ್ಕೆ ಈಗ ಅವರು ಹೊಂದಿರುವ ಪರಿಶುದ್ಧಾತ್ಮನ ಕೃಪೆಯೇ ಮುಂಗಡವಾಗಿಯೂ ದೃಷ್ಟಾಂತವಾಗಿಯೂ ಇದೆ. (೧. ೨೨.)

2. ಈ ಶರೀರವೆಂಬ ಗೂಡಿನಲ್ಲಿರುವಾಗ, ಅಗೋಚರನಾದ ದೇವರನ್ನು ಈ ಮಾಂಸಕಣ್ಣಿನಿಂದ ದರ್ಶಿಸದೆ, ವಿಶ್ವಾಸವೆಂಬ ಒಳಗಿನ ಕಣ್ಣಿನಿಂದ ದರ್ಶಿಸುತ್ತೇವೆ. ಇನ್ನು ಮೇಲೆ ಮುಖಾಮುಖವಾಗಿ ಮುಖದ ಕಣ್ಣಿನಿಂದಲೂ ದರ್ಶಿಸುವೆವು.

3. ನಾಶವಾಗದ ಜೀವವನ್ನು ಹೊಂದುವೆವೆಂಬ ನಂಬಿಕೆಯಿಂದ ಧೈರ್ಯ ಪಟ್ಟು, ಶರೀರವೆಂಬ ಶೆರೆಯನ್ನು ಬಿಟ್ಟು ಕರ್ತನ ಬಳಿಗೆ ಹೋಗಿ, ಆತನ ಸಂಗಡ ಎಂದೆಂದಿಗೂ ಇರುವ ಹಾಗೆ ಆಶಿಸುತ್ತೇವೆ. (೮. ವ.) ಮೊದಲನೇ ವಚನದಲ್ಲಿ ಹೇಳದ ವಿಶೇಷವನ್ನು ಪೌಲನು ಇಲ್ಲಿ ಹೇಳುತ್ತಾನೆ. ಸತ್ತು ಹೋದ ಪರಿಶುದ್ಧವಂತರು ಪೂರ್ಣ ಸುಖ ಹೊಂದುವದಕ್ಕೆ ಶರೀರವು ಜೀವಿಸ ಬೇಕಾದದ್ದು ಅವಶ್ಯವಾಗಿದ್ದಾಗ್ಯೂ, (ರೋಮಾ. ೮. ೨೩. ೧ ಕೊರಿ. ೧೫. ೫೪—೫೭.) ಸತ್ತಾಗಲೇ ಅವರ ಆತ್ಮವು ಸುಖವುಳ್ಳ ಸ್ಥಳದಲ್ಲಿ ಸೇರುತ್ತದೆ ಎಂದು ಪ್ರಕಟವಾಗಿದೆ. (ಫಿಲಿ. ೧. ೨೩. ಇಬ್ರೀ. ೧೨. ೨೩.) ಇದು ವಿಶ್ರಮಿಸುವ ಸ್ಥಳವು; (ಪ್ರಕಟ. ೧೪. ೧೩.) ಕ್ರಿಸ್ತನ ಸನ್ನಿಧಿಯಲ್ಲಿ ವಾಸ ಮಾಡುವದು; (ಫಿಲಿ. ೧. ೨೩.) ಪರದೈಸಿನ ಸಂತೋಷವನ್ನು ಅನುಭವಿಸುವದು; (ಲೂಕ. ೨೩. ೪೩.) ದೇವದೂತರ ಸಂಗಡ ಅನ್ಯೋನ್ಯ ಐಕ್ಯವಾಗಿರುವದು; (ಪ್ರಕಟ. ೫. ೯—೧೪.) ಹೀಗೆಲ್ಲಾ ಇರಲಾಗಿ ದೇಹವನ್ನು ಬಿಟ್ಟು, ಕರ್ತನ ಬಳಿಯಲ್ಲಿ ವಾಸ ಮಾಡ ಅಪೇಕ್ಷೆ ಪಡುವ.

4. ಇಹದಲ್ಲಿ ಒಬ್ಬೊಬ್ಬನೂ ಶರೀರದಲ್ಲಿ ಮಾಡಿದ ಮೇಲು ಕೇಡುಗಳಿಗೆ ತಕ್ಕ ಸುಖ ದುಃಖಗಳನ್ನು ಹೊಂದುವ ಹಾಗೆ ಕಡೆಯಲ್ಲಿ ಸರ್ವಲೋಕದ ನ್ಯಾಯಾಧಿಪತಿಯಾಗಿರುವ ಕ್ರಿಸ್ತನ ಸನ್ನಿಧಿಯಲ್ಲಿ ಅವಶ್ಯವಾಗಿ ಕಾಣಲ್ಪಡ ಬೇಕು; ಒಬ್ಬನೂ ತಪ್ಪ ಕೂಡದು; ತಾನು ಮಾಡಿದ ಒಂದನ್ನಾದರೂ ಮರೆ ಮಾಡ ಕೂಡದು. ಇದು ಎಷ್ಟೋ ಭಯಂಕರವಾದ ದಿವಸ. ಆ ದಿವಸದಲ್ಲಿ ಬಿಳೀ ಆಸನದ ಮೇಲೆ ಕುಳಿತಿರುವ ರಾಜನಾದ ಕ್ರಿಸ್ತನ ಮೆಚ್ಚಿಕೆಯನ್ನು ಹೊಂದಿದವರು ಎಷ್ಟು ಭಾಗ್ಯವಂತರು! (ಮತ್ತಾ. ೨೫. ೩೪.)

5. ಪೌಲನು ತಂತ್ರದಿಂದ ಜನರನ್ನು ವಶ ಪಡಿಸಿ ಕೊಂಡನೆಂದು ಶತ್ರುಗಳು ಹೊರಿಸಿದ ಅಪರಾಧವನ್ನು, ಸರ್ವಸಾಕ್ಷಿಯಾದ ದೇವರ ಭಯಂಕರಗಳನ್ನು ನೆನಸಿ, ಎಲ್ಲರಿಗೂ ಯಥಾರ್ಥವಾಗಿ ಉಪದೇಶಿಸಿದೆನೆಂಬ ಸಂಗತಿಯಿಂದ ಪರಿಹರಿಸುತ್ತಾನೆ. (೧೧—೧೩. ವ.) ಅವನ ಉತ್ತಮತ್ವವನ್ನು ಅರಿತಿದ್ದ ಕೊರಿಂಥ ಸಭೆಯವರು ಆ ವಿಷಯ ಸಾಕ್ಷಿ ಹೇಳ ತಕ್ಕವರಾಗಿದ್ದರು. ಅವನು ಕ್ರಿಸ್ತನ ಮಹಾ ಪ್ರೀತಿಯನ್ನು ಗ್ರಹಿಸಿದವನಾಗಿ ಎಲ್ಲಾ ಕಾರ್ಯಗಳನ್ನು ನಡಿಸಿದನೇ ಹೊರ್ತು ಬೇರೆ ಪ್ರಕಾರ ನಡಿಸಲಿಲ್ಲ.

6. ಭಯಂಕರವಾದ ನ್ಯಾಯತೀರ್ವಿಕೆಯ ದಿವಸದಲ್ಲಿ ಉತ್ತಮರಾಗಿ ತೋರುವಂತೆ, ದೇವರ ಮುಂದೆಯೂ ಮನುಷ್ಯರ ಮುಂದೆಯೂ ಯೋಗ್ಯವಾಗಿ ನಡಿಯಲಾಶಿಸುವ ನಾವು ನಿಮ್ಮಲ್ಲಿ ಯಾರಿಗಾದರೂ ಹುಚ್ಚರಾಗಿ ಕಾಣಿಸಲ್ಪಟ್ಟರೆ, ಅದು ದೇವರ ಮಹಿಮೆ ಪ್ರಕಟವಾಗುವದಕ್ಕಾಗಿಯೇ. ನಾವು ಸ್ವಸ್ಥ ಬುದ್ಧಿಯುಳ್ಳವರಾಗಿದ್ದರೆ, ನಿಮ್ಮ ಪ್ರಯೋಜನಕ್ಕಾಗಿಯೇ. ನಾವು ಮತ್ತೊಬ್ಬರಿಗೆ ಹ್ಯಾಗೆ ಕಾಣಲ್ಪಟ್ಟರೂ, ಕ್ರಿಸ್ತನ ಪ್ರೀತಿ ನಮ್ಮನ್ನು ಇರಿಕಿಸಿ ಪ್ರೇರೇಪಿಸುವದರಿಂದಲೇ ಹೀಗಾಯಿತೆಂದು, ಹೇಳುತ್ತಾನೆ.

7. ಎಲ್ಲಾ ಮನುಷ್ಯರನ್ನು ರಕ್ಷಿಸುವದಕ್ಕಾಗಿ ಕ್ರಿಸ್ತನು ಸತ್ತದ್ದರಿಂದ ಎಲ್ಲರೂ ಅವನಲ್ಲಿ ಸತ್ತವರಾಗುತ್ತಾರೆ. ಆದದರಿಂದ ಬದುಕುವವರು ಇನ್ನು ತಮಗಾಗಿಯೂ, ತಮ್ಮ ಮಾಂಸದ ಇಚ್ಛೆಗಳನ್ನು ಈಡೇರಿಸುವದಕ್ಕಾಗಿಯೂ ಬದುಕದೆ, ತಮ್ಮನ್ನು ಕೊಂಡು ಕೊಂಡ ಕ್ರಿಸ್ತನ ಮಹಿಮೆ ತೋರುವ ಹಾಗೆ ಬದುಕುತ್ತಾರೆ. (ರೋಮಾ. ೬. ೧—೧೪.) ಕ್ರಿಸ್ತನಲ್ಲಿ ಬದುಕುವ ಭಕ್ತರಲ್ಲಿ ಇಂಥಾ ಶ್ರೇಷ್ಠ ಗುಣವು ಪ್ರಕಟವಾಗುವದರಿಂದ ಅವರು ಕರ್ತನನ್ನಾಗಲಿ

೧೫ ಸ್ಕರ ಸತ್ತವನಾದರೆ, ಎಲ್ಲರು ಸತ್ತರು ಸರಿ; ಮತ್ತು ಬದುಕುವವರು ಇನ್ನೂ ತಮಗಲ್ಲ, ತಮಗೋಸ್ಕರ
ಸತ್ತು ಎಬ್ಬಿಸಲ್ಪಟ್ಟವನಿಗೆ ಬದುಕುವ ಹಾಗೆ, ಅವನು ಎಲ್ಲರಿಗೋಸ್ಕರ ಸತ್ತನು ಎಂದು ನಿರ್ಣಯಿಸುತ್ತೇವೆ.
೧೬ ಹೀಗಿರುವದರಿಂದ ನಾವು ಈಗಿನಿಂದ ಯಾವನನ್ನೂ [1]ಮಾಂಸದ ಪ್ರಕಾರ ಅರಿಯೆವು; ಕ್ರಿಸ್ತನನ್ನು ಸಹ
೧೭ ಮಾಂಸದ ಪ್ರಕಾರ ಅರಿತಿದ್ದರೂ, ಈಗ ಇನ್ನೂ ಅರಿಯೆವು. ಹಾಗಾದರೆ ಒಬ್ಬನು ಕ್ರಿಸ್ತನಲ್ಲಿದ್ದರೆ, ಹೊಸ
೧೮ ಸೃಷ್ಟಿಯೇ; ಹಳೆಯವುಗಳು ಕಳೆದು ಹೋದವು; ಇಗೋ, ಎಲ್ಲಾ ಹೊಸದಾಯಿತು. ಆದರೆ ಎಲ್ಲಾ ನಮ್ಮ
ನ್ನು ಯೇಸು ಕ್ರಿಸ್ತನ ಮುಖಾಂತರ ತನಗೆ ಅನ್ಯೋನ್ಯ ಮಾಡಿ, ಅನ್ಯೋನ್ಯದ ಸೇವೆಯನ್ನು ನಮಗೆ ಕೊಟ್ಟ
೧೯ [2]ದೇವರಿಂದಲೇ. ಏನಂದರೆ ದೇವರು ಕ್ರಿಸ್ತನಲ್ಲಿದ್ದು, ಲೋಕವನ್ನು ತನಗೆ ಅನ್ಯೋನ್ಯ ಮಾಡಿ, ಅವರ ಅಕ್ರ
ಮಗಳನ್ನು ಅವರಿಗೆ ಎಣಿಸದೆ, ಅನ್ಯೋನ್ಯದ ಮಾತನ್ನು ನಮ್ಮಲ್ಲಿ ಇಟ್ಟಿದ್ದಾನೆ.
೨೦ ಹಾಗಾದರೆ ದೇವರು ನಮ್ಮ ಮುಖಾಂತರ ಬುದ್ಧಿ ಹೇಳುವ ಪ್ರಕಾರ, ಕ್ರಿಸ್ತನಿಗೋಸ್ಕರ ರಾಯಭಾರಿಗಳಾಗಿ
೨೧ ದ್ದೇವೆ; ದೇವರಿಗೆ ಅನ್ಯೋನ್ಯವಾಗಿರೆಂದು, ಕ್ರಿಸ್ತನಿಗೆ ಬದಲಾಗಿ [3]ಬೇಡಿ ಕೊಳ್ಳುತ್ತೇವೆ. ಯಾಕಂದರೆ ನಾವು
ಅವನಲ್ಲಿ ದೇವರ ನೀತಿಯಾಗುವ ಹಾಗೆ, ಪಾಪವನ್ನರಿಯದವನನ್ನು ನಮಗೋಸ್ಕರ [4]ಪಾಪವಾಗ ಮಾಡಿದನು.

**6.** [1]ಇದಲ್ಲದೆ ಅವನ [5]ಕೂಡ ಕೆಲಸ ಮಾಡುವವರಾಗಿ, ನೀವು ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂ
೨ ದದ ಹಾಗೆ, ಬುದ್ಧಿ ಹೇಳುತ್ತೇವೆ. ಯಾಕಂದರೆ [6]ತಕ್ಕ ಸಮಯದಲ್ಲಿ ನಿನ್ನನ್ನು ಆಲೈಸಿ, ರಕ್ಷಣೆಯ ದಿನದಲ್ಲಿ

---

ಮನುಷ್ಯರನ್ನಾಗಲಿ ಮಾಂಸದ ಪ್ರಕಾರ ಎಣಿಸದೆ, ಆತ್ಮದ ಪ್ರಕಾರ ಎಣಿಸುವವರಾಗಿರುವರು. ಪ್ರೀತಿಸ್ವರೂಪನಾದ ಕ್ರಿಸ್ತನ ಮಹಾ ಪ್ರೀತಿಯನ್ನು ಗ್ರಹಿಸಿದವರು ಲೋಕದ ಸ್ನೇಹವನ್ನು ಅಲ್ಪವಾಗಿ ಎಣಿಸುವರು.

1. ಪೌಲನ ವಿರೋಧಿಗಳು ತಾವು ಕ್ರಿಸ್ತನಿಗೆ ಶರೀರಸಮ್ಮಂಧವುಳ್ಳವರೆಂದೂ, ಆತನನ್ನು ಮುಖಾಮುಖವಾಗಿ ಕಂಡಿದ್ದೇವೆಂದೂ ಹೆಚ್ಚಳ ಪಟ್ಟರು. (೧೦. ೭. ೧ ಕೊರಿ. ೧. ೧೨.) ಏನೂ ಇಲ್ಲದಿರುವಾಗ ಸಕಲವನ್ನೂ ಕಲ್ಪಿಸಿದ ಪರಿಶುದ್ಧಾತ್ಮನ ಕೃಪೆಯಿಂದ ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿರುವ ದೇವಭಕ್ತರಲ್ಲಿ ಇಂಥಾ ವ್ಯರ್ಥ ಹೆಚ್ಚಳವೂ ಯೋಚನೆಗಳೂ ಇರುವದಿಲ್ಲ.

2. ಎಲ್ಲಾ ಎಂಬುವದು ಮುಂದಿನ ವಾಕ್ಯದಲ್ಲಿ ಹೇಳಲ್ಪಡುವ ಹೊಸವಾದವುಗಳನ್ನು ಕುರಿತದ್ದು. ಇಂಥಾ ಹೊಸ ಗುಣಗಳೂ, ಹೊಸ ಯೋಚನೆಗಳೂ, ಅನ್ಯೋನ್ಯವಾಗುವಿಕೆ ಎಂಬ ಶ್ರೇಷ್ಠ ಸತ್ಯವನ್ನು ತನ್ನ ರಾಯಭಾರಿಗಳಿಗೆ ಒಪ್ಪಿಸಿದ ಸತ್ಯಪರನಾದ ದೇವರಿಂದ ಅನುಗ್ರಹಿಸಲ್ಪಟ್ಟವುಗಳೇ ಹೊರ್ತು ಬೇರೆ ಅಲ್ಲ. ಲೋಕದವರ ಪಾಪಗಳನ್ನು ಎಣಿಸದೆ ಇರುವದಕ್ಕಾಗಿ, ಅವರು ದೇವರ ಸಂಗಡ ಅನ್ಯೋನ್ಯವಾಗುವ ಹಾಗೆ ಬೋಧನೆ ಹೊಂದುವದೇ ಈ ಶ್ರೇಷ್ಠ ಸತ್ಯವು. ನಿರ್ಮಲನಾಗಿಯೂ ನಿರ್ದೋಷಿಯಾಗಿಯೂ ಇರುವ ಯೇಸು ಕ್ರಿಸ್ತನು ನಮಗಾಗಿ ಪಾಪವಾದದರಿಂದಲೇ ನಮಗೆ ಇಂಥ ಶ್ರೇಷ್ಠ ಭಾಗ್ಯವುಂಟಾಯಿತು. (೧ಯೋಹಾ. ೨. ೧.)

3. ದೇವರ ಸಂಗಡ ಅನ್ಯೋನ್ಯವಾಗಿರೆಂದು ಮನುಷ್ಯರೆಲ್ಲರಿಗೂ ವ್ಯತ್ಯಾಸವಿಲ್ಲದೆ ಸಾರಲ್ಪಡುತ್ತದೆ. ತಂದೆಯಾದ ದೇವರು ಪಾಪಿಷ್ಠರನ್ನು ಪ್ರೀತಿ ಮಾಡಿದನು. ಕುಮಾರನು ಅವರಿಗಾಗಿ ಸತ್ತನು. ಪರಿಶುದ್ಧಾತ್ಮನು ಅವರ ಸಂಗಡ ಹೋರಾಡುತ್ತಾನೆ. ತ್ರಿಯೇಕನಾದ ಯೆಹೋವನು, ಮನುಷ್ಯರು ತನಗೆ ಅನ್ಯೋನ್ಯವಾಗುವದಕ್ಕೆ ಬೇಕಾದದ್ದನ್ನೆಲ್ಲಾ ಸಿದ್ಧ ಮಾಡಿ ಇಟ್ಟು ಕೊಂಡು, ತನ್ನ ಸೇವೆಯ ಮೂಲಕವಾಗಿ ಎಲ್ಲರನ್ನೂ ಅನ್ಯೋನ್ಯವಾಗುವದಕ್ಕೆ ಕರೆಯುತ್ತಾನೆ. ಇದು ಎಷ್ಟೋ ಆಶ್ಚರ್ಯವು! ಇದನ್ನು ಸಾರುವ ಸೇವೆಯು ಎಷ್ಟೋ ಮಹಿಮೆಯಾದದ್ದು!

4. ನಿಷ್ಕಳಂಕನೂ ನಿರ್ಮಲನೂ ಆಗಿರುವ ಕ್ರಿಸ್ತನು ನೀಚ ಪಾಪಿಗಳಿಗಾಗಿ ಪಾಪವಾದನು. ಆತನು ಪಾಪಬಲಿಯಾದನೆಂದೂ, ಪಾಪಕ್ಕೆ ಬದಲಾದನೆಂದೂ ನಾನಾ ಅರ್ಥ ಹೇಳುವರು. ದೇವರ ನೀತಿಯಿಂದುಂಟಾಗುವ ಭಾಗ್ಯವನ್ನು ಹೊಂದುವ ಹಾಗೆ ನಾವು ಆ ನೀತಿಯ ಸಂಗಡ ಸಮ್ಮಂಧ ಪಡುವ ಪ್ರಕಾರ (ರೋಮಾ. ೧. ೧೭.) ಪಾಪದ ಶಾಪವು ಕ್ರಿಸ್ತನ ಮೇಲೆ ಇಳಿಯ ತಕ್ಕದ್ದಾಗಿ ಆತನು ಪಾಪಕ್ಕೆ ಬದಲಿನವನಾಗಿ ನಿಂತ ಕಾರಣದಿಂದ ದೇವರು ಆತನನ್ನು ಪಾಪವಾಗ ಮಾಡಿದನು. (ಇಬ್ರಿ. ೯. ೨೮. ಗಲಾ. ೬. ೧೪. ೧ಪೇತ್ರ. ೨. ೨೪.) ಆದಾಗ್ಯೂ ಪಾಪದ ಮೈಲಿಗೆ ಆತನಿಗೆ ಸ್ವಲ್ಪವಾದರೂ ಅಂಟಲಿಲ್ಲವೆಂದು ವೇದಚರಿತ್ರೆಯಿಂದಲೂ, (ಮತ್ತಾ. ೨೭. ೪, ೨೪, ೫೪.) ವೇದೋಪದೇಶದಿಂದಲೂ, (ಇಬ್ರಿ. ೭. ೨೬.) ಪ್ರತ್ಯಕ್ಷವಾಗಿದೆ. ಮನುಷ್ಯನು ಪಾಪ ಮಾಡಿದನು; ದೇವರ ಕುಮಾರನು ಶ್ರಮೆ ಪಟ್ಟು ಪಾಪನಿವಾರಣೆ ಮಾಡಿದನು. ನಿಜವಾದ ವಿಶ್ವಾಸದಿಂದ ಆತನ ಸಂಗಡ ಐಕ್ಯವಾದವರು ದೇವರ ನೀತಿಯನ್ನು ಹೊಂದಿ ಮಹಿಮೆಯಲ್ಲಿ ಪ್ರತ್ಯಕ್ಷವಾಗುವರು.

5. ಕರುಣೆಯುಳ್ಳ ದೇವರೇ ತನ್ನ ದಾಸರ ಮೂಲಕವಾಗಿ ಬುದ್ಧಿ ಹೇಳುತ್ತಾನೆ. (೫. ೨೦.) ಆತನ ಜತೆಕೆಲಸದವರಾದ ದೇವರ ದಾಸರು ಆತನ ಹೆಸರಿನಿಂದ ಬುದ್ಧಿ ಹೇಳುತ್ತಾರೆ. ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂದದೆ ಇರ ಬೇಕೆಂಬುವದೇ ಅವರು ಹೇಳುವ ಬುದ್ಧಿಯು. ಈ ಕೃಪೆಯು ಕ್ರಿಸ್ತನ ಮೂಲಕ ದೇವರು ಅನುಗ್ರಹಿಸಿದ ಅನ್ಯೋನ್ಯವಾಗುವಿಕೆ ಎಂಬುವ ಉಪದೇಶವನ್ನು ಕುರಿತದ್ದು. ೨ನೇ ವಚನದಲ್ಲಿರುವ ಹಳೇ ಒಡಂಬಡಿಕೆಯ ವಚನವು ಸಹ ಅದನ್ನೇ ಸೂಚಿಸಿ ತೋರಿಸುತ್ತದೆ.

6. ಈ ಮಾತುಗಳನ್ನು ಕುಮಾರನಾದ ದೇವರು ಮಧ್ಯಸ್ಥನಾಗಿ, ತನ್ನ ಸಭೆಗಾಗಿ ಬೇಡಿ ಕೊಂಡಾಗ ತಂದೆಯಾದ ದೇವರು ಅನುಗ್ರಹಿಸಿದನು. (ಯೆಶಾ. ೪೯. ೧–೮.) ಆತನು ಲೋಕದಲ್ಲಿ ಅವತರಿಸಿ, ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ, ದೇವರನ್ನೂ ಮನುಷ್ಯರನ್ನೂ ಅನ್ಯೋನ್ಯ ಮಾಡಿದನು. ಮತ್ತು ಅನ್ಯೋನ್ಯವಾಗುವಿಕೆಯ ಸತ್ಯವನ್ನು ಕಲಹಗಾರರಾದ ಲೋಕದವರಿಗೆ ಸಾರುವ



ನಿನ್ನ ಸಹಾಯಕ್ಕೆ ಬಂದೆನೆಂದು (ಯೆಶಾ. ೪೯. ೮.) ಹೇಳುತ್ತಾನೆ. ಇಗೋ, [1]ಈಗಲೇ ಒಳ್ಳೇ ತಕ್ಕ ಸಮಯ
೩ ವು; ಇಗೋ, ಈಗಲೇ ರಕ್ಷಣೆಯ ದಿನವು. ಸೇವೆಯು ನಿಂದೆ ಪಡದ ಹಾಗೆ, ನಾವು ಯಾವದರಲ್ಲಿಯೂ ಆಟಂ
೪ ಕವೇನೂ ಕೊಡದೆ, ಬಹು ತಾಳ್ಮೆಯಲ್ಲಿಯೂ, ಉಪದ್ರಗಳಲ್ಲಿಯೂ, ಸಂಕಟಗಳಲ್ಲಿಯೂ, ಇಕ್ಕಟ್ಟುಗಳ
೫ ಲ್ಲಿಯೂ, ಪೆಟ್ಟುಗಳಲ್ಲಿಯೂ, [2]ಶೆರೆಗಳಲ್ಲಿಯೂ, ಕಲಹಗಳಲ್ಲಿಯೂ, ಕಷ್ಟಗಳಲ್ಲಿಯೂ, ಜಾಗರಗಳಲ್ಲಿಯೂ,
೬ ಉಪವಾಸಗಳಲ್ಲಿಯೂ, ನಿರ್ಮಲತ್ವದಲ್ಲಿಯೂ, ತಿಳುವಿಕೆಯಲ್ಲಿಯೂ, ದೀರ್ಘಶಾಂತಿಯಲ್ಲಿಯೂ, ದಯದ
೭ ಲ್ಲಿಯೂ, [3]ಪರಿಶುದ್ಧಾತ್ಮದಲ್ಲಿಯೂ, ಕಪಟವಿಲ್ಲದ ಪ್ರೀತಿಯಲ್ಲಿಯೂ, ಸತ್ಯದ ವಾಕ್ಯದಲ್ಲಿಯೂ, ದೇವರ
೮ ಬಲದಲ್ಲಿಯೂ, [4]ಎಡ ಬಲ ಕೈಗಳ ನೀತಿಯ ಆಯುಧಗಳಿಂದಲೂ, ಮಾನ ಅಪಮಾನಗಳಿಂದಲೂ, ಕೀರ್ತಿ
೯ ಅಪಕೀರ್ತಿಗಳಿಂದಲೂ, ಮೋಸಗಾರರ ಹಾಗಿದ್ದು, ಸತ್ಯವಂತರಾಗಿಯೂ, ಅಪರಿಚಿತರ ಹಾಗಿದ್ದು ಪರಿಚಿತ
ರಾಗಿಯೂ, [5]ಸಾಯುವವರ ಹಾಗಿದ್ದು, ಇಗೋ, ಬದುಕುತ್ತೇವೆ, ಶಿಕ್ಷೆ ಪಡುವವರ ಹಾಗಿದ್ದು ಕೊಲ್ಲಲ್ಪಡ
೧೦ ದವರಾಗಿಯೂ, ದುಃಖ ಪಡುವವರ ಹಾಗಿದ್ದು, ಎಂದಿಗೂ ಸಂತೋಷ ಪಡುವವರಾಗಿಯೂ, ದರಿದ್ರರ
ಹಾಗಿದ್ದು ಅನೇಕರಿಗೆ ಐಶ್ವರ್ಯ ಕೊಡುವವರಾಗಿಯೂ, ಏನೂ ಇಲ್ಲದವರ ಹಾಗಿದ್ದು ಎಲ್ಲಾ ಉಂಟಾದ
ವರಾಗಿಯೂ, ಎಲ್ಲಾದರಲ್ಲಿ ನಮ್ಮನ್ನು [6]ದೇವರ ಸೇವಕರೆಂದು ಪ್ರತಿಷ್ಠೆ ಮಾಡಿ ಕೊಳ್ಳುತ್ತೇವೆ.

ಮತ್ತೊಬ್ಬರ ಸಂತಾಪಕ್ಕಾಗಿ ಬೇಡಿ ಕೊಳ್ಳುವದು; ಭಕ್ತಿಹೀನರ ಸಂಗಡ ಐಕ್ಯವಾಗಿರ ಬಾರದೆಂಬುವದು.

೧೧ [7]ನಮ್ಮ ಬಾಯಿ ನಿಮ್ಮ ಕಡೆಗೆ [8]ತೆರೆದದೆ, ಕೊರಿಂಥ್ಯರೇ; ನಮ್ಮ ಹೃದಯವು ವಿಸ್ತಾರವಾಯಿತು;

---

ಹಾಗೆ, ಆತನು ತನ್ನ ರಾಯಭಾರಿಗಳನ್ನು ಕಳುಹಿಸಿರುವದರಿಂದ ಈಗಲೇ ದೇವರ ಕೃಪೆ ಪ್ರಕಟವಾಗುವ ರಕ್ಷಣೆಯ ಕಾಲವು. ಅದನ್ನು ಕೇಳಿದವರು ಅದನ್ನು ಘನವಾಗಿ ಎಣಿಸಿ ಅದರ ಫಲವನ್ನು ಹೊಂದದಿದ್ದರೆ, ಅದು ವ್ಯರ್ಥವಾಗುವದು.

1. ಮನುಷ್ಯದೇಹವು ನೆಲೆ ಇಲ್ಲದ್ದು. ಆದ್ದರಿಂದ ನಾಳೆಯನ್ನು ಕುರಿತು ಹೆಚ್ಚಳ ಪಡ ಹೇತುವೆ ಇಲ್ಲ. ಈ ದಿನವೇ ಮರಣ ಬರ ಬಹುದು. ಕರ್ತನು ಪ್ರಸನ್ನನಾದರೂ ಆಗ ಬಹುದು. ಆದದರಿಂದ ಈಗಲೇ ರಕ್ಷಣೆಯ ದಿನವು. ಎಲ್ಲರೂ ಈಗಲೇ ತಮ್ಮ ರಕ್ಷಣೆಯನ್ನು ಸಂಪಾದಿಸಿ ಕೊಳ್ಳ ಬೇಕು.

2. ಈ ಪತ್ರಿಕೆ ಬರೆಯಲ್ಪಡುವದಕ್ಕಿಂತ ಮುಂಚೆ ಒಂದು ಸಾರಿ ಪೌಲನಿಗಾದ ಶೆರೆಯನ್ನು ಕುರಿತು, ಅಪೊ. ಕ್ರಿ. ೧೬. ೨೩ಲ್ಲಿ ಹೇಳಿ ಇದೆ. ಆದದರಿಂದ ಪೌಲನ ಜೀವದ ವೃತ್ತಾಂತಗಳೆಲ್ಲಾ ಅಪೊಸ್ತಲರ ಕ್ರಿಯೆಗಳ ಪುಸ್ತಕದಲ್ಲಿ ಬರಿಯಲ್ಪಡಲಿಲ್ಲವೆಂದು ತೋರುತ್ತದೆ. (೧೧. ೨೩–೨೭.)

3. ಅಪೊಸ್ತಲರು ಪರಿಶುದ್ಧಾತ್ಮನ ಬೋಧನೆಯಲ್ಲಿಯೂ, ನಿಷ್ಕಪಟವಾದ ಪ್ರೀತಿಯ ಪ್ರೇರಣೆಯಲ್ಲಿಯೂ, ಸತ್ಯವಾಕ್ಯದ ಉಪದೇಶದಲ್ಲಿಯೂ, ದೈವಶಕ್ತಿ ನಡಿಸುವ ಎಲ್ಲಾ ಕಾರ್ಯಗಳಲ್ಲಿಯೂ ಉತ್ತಮರಾಗಿ ಪ್ರಕಾಶಿಸಿದರು.

4. ಅಪೊಸ್ತಲರು ದೇವರ ನೀತಿಯನ್ನು ಕಲಿಸುವ ನೀತಿಯ ಆಯುಧಗಳನ್ನು ಧರಿಸಿದವರಾಗಿದ್ದರು. (೧೦. ೪. ಎಫೆ. ೬. ೧೬–೧೭.) ದೇವರ ಮಹಿಮೆಯನ್ನು ಪ್ರಕಟಿಸಲೂ, ಸುವಾರ್ತೆಯನ್ನು ಹಬ್ಬಿಸಲೂ ತಕ್ಕ ವಿಷಯದಲ್ಲಿ, ಮಾನಾಪಮಾನಗಳನ್ನೂ ಕೀರ್ತಿ ಅಪಕೀರ್ತಿಗಳನ್ನೂ ಎಣಿಸದೆ ನಡಕೊಂಡರು. (೩, ೪. ವ.) ಇದನ್ನು ಕುರಿತು ಮುಂದಿನ ವಚನಗಳಲ್ಲಿ ಹೇಳಲ್ಪಟ್ಟಿದೆ.

5. (೪. ೧೦. ವಚನದ ವ್ಯಾಖ್ಯಾನ ನೋಡ ಬೇಕು.) ಲೋಕದ ಆಸ್ತಿಗೂ, ಪರಲೋಕದ ಆಸ್ತಿಗೂ ಇರುವ ವ್ಯತ್ಯಾಸವನ್ನು ೧ಕೊರಿ. ೭. ೩೦ಲ್ಲಿ ಕಾಣ ಬಹುದು. "ದಿನಗಂಡ ಪೂರ್ಣಾಯುಸ್ಸು" ಎಂಬ ಗಾದೆಯ ಪ್ರಕಾರ ಅಪೊಸ್ತಲರಿಗೆ ಪ್ರತಿ ದಿವಸದಲ್ಲಿ ನಿಂದೆಯೂ ಉಪದ್ರವೂ ಮರಣವೂ ಸಂಭವಿಸಿದಾಗ್ಯೂ, ದೇವಾನುಗ್ರಹದಿಂದ ಅವರು ಎಲ್ಲಾ ಅಪಾಯಗಳಿಗೆ ತಪ್ಪಿಸಲ್ಪಟ್ಟು, ಸಕಲರಿಗೂ ಕ್ರಿಸ್ತನ ರಕ್ಷಣೆಯನ್ನು ಸಾರಿ, ಅವರನ್ನು ಪರಮ ಪದವಿಗೆ ಆಯತ್ತ ಪಡಿಸಿದರು.

6. ಅನ್ಯೋನ್ಯ ಮಾಡುವದೆಂಬ ಘನವಾದ ಸೇವೆಗೆ ಕುಂದು ಬಾರದಂತೆ, ದೇವದಾಸರಿಗೆ ತಕ್ಕ ಸದ್ಗುಣಗಳಲ್ಲಿಯೂ, ಸೇವೆಯಲ್ಲಿಯೂ, ಉಪದ್ರಗಳಿಂದ ಆ ಸೇವೆಯ ಮಹಿಮೆ ತೋರುವ ಹಾಗೆ ನಡೆದು ಕೊಂಡರು.

7. ಪೌಲನು ತನ್ನ ಸೇವೆಯ ಶ್ರೇಷ್ಠತ್ವವನ್ನು ಚನ್ನಾಗಿ ಗ್ರಹಿಸಿ, (೫. ೯, ೧೦, ೧೩; ೬. ೧.) ಕೊರಿಂಥದ ಸಭೆಯವರ ಮೇಲೆ ಬಹಳ ಪ್ರೀತಿಯುಳ್ಳವನಾಗಿ (೬. ೨–೧೩.) ದೇವರ ಕಟ್ಟಳೆಗೂ ವಾಗ್ದತ್ತಗಳಿಗೂ ವಿರೋಧವಾಗಿಯೂ ಕ್ರೈಸ್ತರ ಮಿರಾಶಿಗಳಿಗೆ ಕುಂದು ಉಂಟು ಮಾಡ ತಕ್ಕದ್ದಾಗಿಯೂ ಇರುವ, ಅವಲಕ್ಷಣವೂ ಅಕ್ರಮವೂ ಆದ ನಡತೆಗಳಿಗೆ ದೂರವಾಗಿರುವ ಹಾಗೆ ಎಚ್ಚರಿಸುತ್ತಾನೆ. (೧೬–೧೮. ವ., ೭. ೧.) ತನ್ನ ನಿಧಾನವನ್ನೂ ಪ್ರೀತಿಯನ್ನೂ ಅವರಿಗೆ ಗ್ರಹಿಸ ಮಾಡಿ, ತನ್ನ ಕಟ್ಟಳೆಯ ಹಾಗೆ ನಡಿಯ ಪ್ರೇರೇಪಿಸುತ್ತಾನೆ. (೨, ೩. ವ.) ತಾನು ಬರೆದ ಮೊದಲನೇ ಪತ್ರಿಕೆಯನ್ನು ಓದಿ ಅವರು ಗುಣ ಪಟ್ಟರೆಂಬ ಆದರಣೆಯಾದ ವರ್ತಮಾನವನ್ನು ತೀತನ ಮೂಲಕವಾಗಿ ಕೇಳಿ, ಸಂತೋಷವೂ ನಂಬಿಕೆಯೂ ಉಳ್ಳವನಾಗಿದ್ದನು. (೪–೧೬. ವ.)

8. ಹೃದಯದ ಪರಿಪೂರ್ಣತೆಯಿಂದ ಬಾಯಿ ಮಾತಾಡುತ್ತದೆ. ಪ್ರೀತಿಯನ್ನು ತಡೆಯುವಂಥಾದ್ದು ಇಲ್ಲದ ಪ್ರಕಾರ, ಅವನ ಹೃದಯದಲ್ಲಿದ್ದ ಪ್ರೀತಿಯು ಅವನ ಬಾಯಿಂದ ವಿಸ್ತಾರವಾಗಿ ತೋರಿತು. (ಯೆಶಾ. ೬೦. ೫.)

೧೨,೧೩ ನಮ್ಮಲ್ಲಿ ನೀವು ಇಕ್ಕಟ್ಟು ಪಡುವದಿಲ್ಲ; [1]ನಿಮ್ಮ ಕರುಳುಗಳಲ್ಲಿಯೇ ಇಕ್ಕಟ್ಟು ಪಡುತ್ತೀರಿ. ಆದರೆ ಅದೇ
ಪ್ರತಿಫಲಕ್ಕಾಗಿ, ನೀವು ಸಹ ವಿಸ್ತರಿಸಿ ಕೊಳ್ಳಿರಿ; ನನ್ನ ಮಕ್ಕಳಿಗೆಂದು ಹೇಳುತ್ತೇನೆ.
೧೪ ಅವಿಶ್ವಾಸಿಗಳ ಕೂಡ [2]ಇಜ್ಜೋಡು ನೊಗದಲ್ಲಿರ ಬೇಡಿರಿ. ಯಾಕಂದರೆ ನೀತಿಗೂ ಅನೀತಿಗೂ ಗೊಡಿವೆ
೧೫ ಏನು? ಬೆಳಕಿಗೆ ಕತ್ತಲೆಯ ಸಂಗಡ ಅನ್ಯೋನ್ಯವೇನು? ಕ್ರಿಸ್ತನಿಗೂ [3]ಬೆಲಿಯಾಳನಿಗೂ ಒಪ್ಪಿಗೆ ಏನು?
೧೬ ವಿಶ್ವಾಸಿಸುವವನಿಗೆ ಅವಿಶ್ವಾಸಿಯ ಸಂಗಡ ಪಾಲು ಏನು? ದೇವರ [4]ಮಂದಿರಕ್ಕೆ ವಿಗ್ರಹಗಳ ಸಂಗಡ
ಒಡಂಬಡಿಕೆ ಏನು? ಯಾಕಂದರೆ ನಾನು ಅವರಲ್ಲಿ ವಾಸ ಮಾಡಿ, ಸಂಚರಿಸುವೆನು; ಮತ್ತು ಅವರ ದೇವರಾ
ಗಿರುವೆನು, ಅವರು ನನಗೆ ಪ್ರಜೆಯಾಗಿರುವರು, (ಹೊರ. ೨೯. ೪೫. ಲೇವಿಕ. ೨೬. ೧೧, ೧೨.) ಎಂದು
[5]ದೇವರು ಹೇಳಿರುವ ಪ್ರಕಾರ, ನೀವು ಜೀವವುಳ್ಳ ದೇವರ ಮಂದಿರವಾಗಿದ್ದೀರಿ.
೧೭ ಆದದರಿಂದ ಕರ್ತನು ಹೇಳುವದೇನಂದರೆ, ಅವರ ಮಧ್ಯದಲ್ಲಿಂದ ಹೊರಟು ಬಂದು, ಅಗಲಿ, ಅಶುದ್ಧವಾದ
೧೮ ದ್ದನ್ನು ಮುಟ್ಟದೆ ಇರ್ರಿ; ಆಗ ನಾನು ನಿಮ್ಮನ್ನು ಅಂಗೀಕರಿಸುವೆನು, ಮತ್ತು ನಿಮಗೆ ತಂದೆಯಾಗಿರುವೆನು,
ನೀವು ನನಗೆ ಕುಮಾರ ಕುಮಾರ್ತೆಗಳು ಆಗಿರುವಿರಿ, (ಯೆಶಾ. ೫೨. ೧೧, ೧೨. ೨ ಸಮು. ೭. ೧೪.)
ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.

7. ಹಾಗಾದರೆ, ಪ್ರಿಯರೇ, ಈ ವಾಗ್ದತ್ತಗಳನ್ನು ಹೊಂದಿದವರಾಗಿ, ಮಾಂಸ ಆತ್ಮಗಳ ಎಲ್ಲಾ [6]ಕಲ್ಮಷ
ದಿಂದ ನಮ್ಮನ್ನು ಶುಚಿ ಮಾಡಿ ಕೊಂಡು, ಪರಿಶುದ್ಧತ್ವವನ್ನು ದೇವರ ಭಯದಲ್ಲಿ ಪೂರೈಸುವ.

ಮೊದಲನೇ ಪತ್ರಿಕೆಯಿಂದ ಉಂಟಾದ ಪ್ರಯೋಜನವನ್ನು ಪೌಲನು ಕೇಳಿ ಸಂತೋಷ ಪಟ್ಟದ್ದು.

೨ [7]ನಮ್ಮನ್ನು ಅಂಗೀಕರಿಸಿರಿ; ನಾವು ಯಾವನಿಗೂ ಅನ್ಯಾಯ ಮಾಡಲಿಲ್ಲ, ಯಾವನಿಗೂ ನಷ್ಟ ಮಾಡ

1. ಹೃದಯದಲ್ಲಿ ಸ್ಥಳವಿಲ್ಲ ಅಂದರೆ, ಅದು ನಿಮ್ಮ ಹೃದಯವನ್ನು ಕುರಿತೇ ಹೊರ್ತು, ನಮ್ಮ ಹೃದಯವನ್ನು ಕುರಿತಲ್ಲ; ಹೆತ್ತವರಿಗೆ ಇರ ತಕ್ಕ ಪ್ರೀತಿ ನನಗೆ ಸಂಪೂರ್ಣವಾಗಿರುವ ಪ್ರಕಾರ, ಮಕ್ಕಳಿಗೆ ತಕ್ಕ ಪ್ರೀತಿ ನಿಮ್ಮಲ್ಲಿ ಸಂಪೂರ್ಣವಾಗಿರುವ ಹಾಗೆ ನೋಡಿ ಕೊಳ್ಳಿರಿ, ಅನ್ನುತ್ತಾನೆ.

2. ಈ ಕಟ್ಟಳೆ ಅಜ್ಞಾನರ ಸಂಗಡ ಐಕ್ಯವಾಗಿರ ಬಾರದೆಂದೂ, ವಿಗ್ರಹಗಳಿಗೆ ಆಗುವ ಉತ್ಸವಗಳಿಗೆ ಹೋಗ ಬಾರದೆಂದೂ, ಹೇಳುತ್ತಾನೆಂದು ಕೆಲವರು ನೆನಸುತ್ತಾರೆ. ಆದಾಗ್ಯೂ ಇದು ಕ್ರೈಸ್ತರನ್ನು ಅವಿಶ್ವಾಸಿಗಳ ಸಂಗಡ ಐಕ್ಯ ಪಡಿಸುವ ಯಾವ ಕೆಟ್ಟ ಪದ್ಧತಿಗಳನ್ನೂ ಅನಾಚಾರಗಳನ್ನೂ ಬಿಟ್ಟು ತೊಲಗ ಬೇಕೆಂಬುವದನ್ನೇ ಸೂಚಿಸುತ್ತದೆ. ದ್ವಿತೀಯ ನ್ಯಾ. ೨೨. ೧೦ಲ್ಲಿ ಇರುವ ಕಟ್ಟಳೆಯನ್ನು ಅನುಸರಿಸಿ, ಒಂದೇ ನೊಗದಲ್ಲಿ ಇಜ್ಜೋಡಾದವುಗಳನ್ನು ಹೂಡ ಬಾರದು ಎಂಬ ಈ ಕಟ್ಟಳೆ ಕೊಡಲ್ಪಟ್ಟಿತೆಂದು ತೋರುತ್ತದೆ.

3. ಬೆಲಿಯಾಳು ಎಂಬ ಇಬ್ರೀಯ ಶಬ್ದಕ್ಕೆ ಹೀನ ಅಥವಾ ಭೇದ ಎಂಬ ಅರ್ಥವು. (ದ್ವಿತೀಯ ನ್ಯಾ. ೧೩. ೧೩.) ಇದು ಭೇದ ಉಂಟು ಮಾಡುವ ಸೈತಾನನಿಗೆ ಹೆಸರಾಗಿ ಇಲ್ಲಿ ಪ್ರಯೋಗಿಸಿ ಇದೆ. ಬೆಳಕಿಗೂ ಕತ್ತಲೆಗೂ ಐಕ್ಯವಿಲ್ಲದೆ ಇರುವ ಪ್ರಕಾರ, ಕ್ರಿಸ್ತನ ದಾಸರಿಗೂ ಪಿಶಾಚನ ಮಕ್ಕಳಿಗೂ ಐಕ್ಯವಿರ ಬಾರದು. ಲೋಕದ ಆಚಾರಗಳನ್ನು ಅನುಸರಿಸುವವರು ನಿಜ ಕ್ರೈಸ್ತರಲ್ಲ.

4. (೧ ಕೊರಿ. ೬. ೧೯. ವಚನದ ವ್ಯಾಖ್ಯಾನ ನೋಡ ಬೇಕು.) ಪರಿಶುದ್ಧಾತ್ಮನು ವಾಸ ಮಾಡುವ ಹೃದಯದಲ್ಲಿ ಅಶುದ್ಧಾತ್ಮವು ಸೇರ ಕೂಡದು. ದೇವರ ಮಂದಿರವಾಗಿರುವ ನಮ್ಮ ಹೃದಯಗಳಲ್ಲಿ ವಿಗ್ರಹಗಳನ್ನು ಇಡ ಬಾರದು. ವಿಗ್ರಹವು ಯಾವ ಮಂದಿರದಲ್ಲಿ ಸ್ಥಾಪಿತವಾಗಿದೆಯೋ ಅದು ಪಿಶಾಚನ ಮಂದಿರವೇ ಸರಿ.

5. ಹಲವು ವಾಕ್ಯಗಳ ಅಭಿಪ್ರಾಯವನ್ನು ಈ ವಚನದಲ್ಲಿ ಒಂದಾಗಿ ಕೂಡಿಸಿ ತೋರಿಸಿ ಇದೆ. ಸರ್ವಶಕ್ತನಿಗೆ ಕುಮಾರ ಕುಮಾರ್ತೆಗಳಾಗಿರುವವರೂ, ಪರಿಶುದ್ಧಾತ್ಮನಿಗೆ ಮಂದಿರವಾಗಿರುವವರೂ ಆದ ದೇವಭಕ್ತರು, ಅಶುದ್ಧರಾದ ಅಜ್ಞಾನರನ್ನು ಬಿಟ್ಟು ಅಗಲಿ, ಪಾಪವನ್ನು ಮುಟ್ಟದೆ ಇರ ಬೇಕು. ಹಾಗೆ ಇರದೆ ಇದ್ದರೆ, ದೇವರು ಅವರಲ್ಲಿ ವಾಸ ಮಾಡಿ ಅವರಿಗೆ ತಂದೆಯಾಗಿರನು. ಅಂಥವರು ಆತನಿಗೆ ಕುಮಾರರೂ ಕುಮಾರ್ತೆಗಳೂ ಆಗಿರ ಕೂಡದು.

6. ಈ ವಚನವು ೬ನೇ ಸಂಧಿಗೆ ಸಮ್ಮಂಧ ಪಟ್ಟದ್ದಾಗಿದೆ. ಅದರ ಕಡೇ ವಚನಗಳಲ್ಲಿ ಇರುವ ಶ್ರೇಷ್ಠ ವಾಗ್ದತ್ತಗಳನ್ನು ಹೊಂದಿದವರು ನಡಿಯ ಬೇಕಾದ ವಿಧವನ್ನು ಹೇಳಿಯದೆ. ಅವರು ಮಾಂಸಕ್ಕೂ ಆತ್ಮಕ್ಕೂ ಅಂಟಿ ಕೊಂಡಿರುವ ಸಕಲ ಅಶುದ್ಧತ್ವವನ್ನೂ ಪಾಪದ ಮೈಲಿಗೆಯನ್ನೂ ತೊಲಗಿಸ ಬೇಕು. ಮಾಂಸದ ಅಶುದ್ಧತ್ವವು ಮನುಷ್ಯರಿಗೆ ಕಾಣಿಸ ತಕ್ಕದ್ದು. ಆತ್ಮದ ಅಶುದ್ಧತ್ವವು ದೇವರಿಗೆ ತಿಳಿಯ ತಕ್ಕದ್ದು. ಆದದರಿಂದ ಕ್ರಿಸ್ತನ ದಾಸರು ತಮ್ಮನ್ನು ಹೊರಗೂ ಒಳಗೂ ಶುದ್ಧ ಮಾಡಿ ಕೊಳ್ಳ ಬೇಕು. ಹೀಗೆ ಕಲ್ಮಷ ನಿವರ್ತಿಯಾದ ಹೃದಯದಲ್ಲಿ ದೇವರ ಭಯದಿಂದ ಉಂಟಾಗುವ ಪರಿಶುದ್ಧತ್ವವು ಪೂರ್ಣವಾಗ ಬೇಕು. ಈ ವಚನದಲ್ಲಿರುವ ಕಟ್ಟಳೆಯ ಶ್ರೇಷ್ಠತ್ವವು, ೨ದಿನಚರ್ಯ ೨೯ನೇ ಸಂಧಿಯನ್ನು ಓದಿದರೆ, ತಿಳಿಯುವದು.

7. ಇದು ನಿಮ್ಮ ಹೃದಯಗಳಲ್ಲಿ ನಮಗೆ ಸ್ಥಳ ಕೊಡಿರಿ ಎಂಬ ಅರ್ಥವು. ೬. ೧೧—೧೩. ವಚನಗಳ ವರಿಗೂ ಹೇಳಲ್ಪಟ್ಟ ವಿಷಯವನ್ನು ಪೌಲನು ಇಲ್ಲಿ ತಿರಿಗಿ ಹೇಳುತ್ತಾನೆ. (೩. ವ.)



೩ ಲಿಲ್ಲ, ಯಾವನಿಗೂ ಮೋಸ ಮಾಡಲಿಲ್ಲ. [1]ಆಜ್ಞೆನಿರ್ಣಯಕ್ಕಾಗಿ ನಾನು ಮಾತಾಡುವದಿಲ್ಲ; ಯಾಕಂ
ದರೆ ಕೂಡ ಸಾಯುವದಕ್ಕೂ ಕೂಡ ಬದುಕುವದಕ್ಕೂ ನಮ್ಮ ಹೃದಯಗಳಲ್ಲಿ ಇದ್ದೀರೆಂದು, ಮುಂಚೆ
೪ ಹೇಳಿದ್ದೇನೆ. ನಿಮ್ಮ ಕಡೆಗೆ ನನಗೆ ಬಹಳ ಧೈರ್ಯವು, ನಿಮಗೋಸ್ಕರ ನನಗೆ ಬಹಳ ಹೆಚ್ಚಳ ಉಂಟು.
[2]ಆದರಣೆಯಿಂದ ತುಂಬಿದವನಾಗಿದ್ದೇನೆ, ನಮ್ಮ ಎಲ್ಲಾ ಉಪದ್ರದಲ್ಲಿ ಸಂತೋಷದಿಂದ ಅತಿ ಪೂರಿತನಾ
ಗಿದ್ದೇನೆ.
೫ ಹ್ಯಾಗಂದರೆ ನಾವು [3]ಮಕೆದೋನ್ಯಕ್ಕೆ ಬಂದಾಗ, ನಮ್ಮ ಮಾಂಸಕ್ಕೆ ಏನೂ ವಿಶ್ರಾಂತಿ ಇಲ್ಲದೆ, ಎಲ್ಲಾದ
೬ ರಲ್ಲಿ ಉಪದ್ರ ಪಡುತ್ತಿದ್ದೆವು; ಹೊರಗೆ ಯುದ್ಧಗಳು, ಒಳಗೆ ಭಯಗಳು, ಇದ್ದವು. ಆದರೆ ದೀನರನ್ನು ಆದ
೭ ರಿಸುವ ದೇವರು, ತೀತನು ಬಂದದರಿಂದ, ಅವನು ಬಂದದರಿಂದ ಮಾತ್ರವಲ್ಲ, ಅವನು ನಿಮ್ಮಲ್ಲಿ ಹೊಂದಿದ
ಆದರಣೆಯಿಂದಲೂ, ನಮ್ಮನ್ನು ಆದರಿಸಿದನು. ಏನಂದರೆ ನಿಮ್ಮ ಅತ್ಯಾಶೆಯನ್ನೂ, ನಿಮ್ಮ ಗೋಳಾಟವನ್ನೂ,
ನನ್ನ ವಿಷಯವಾದ ನಿಮ್ಮ ಆಸಕ್ತಿಯನ್ನೂ, ನಮಗೆ ತಿಳಿಸಿದನು; ಆದದರಿಂದ ಹೆಚ್ಚಾಗಿ ಸಂತೋಷ ಪಟ್ಟೆನು.
೮ ಹ್ಯಾಗಂದರೆ, ನಾನು ಪತ್ರಿಕೆಯಿಂದ ನಿಮ್ಮನ್ನು ದುಃಖ ಪಡಿಸಿದಾಗ್ಯೂ, [4]ಪಶ್ಚಾತ್ತಾಪ ಪಟ್ಟದ್ದರೂ, ಪಶ್ಚಾತ್ತಾಪ
ಪಡುವದಿಲ್ಲ; ಯಾಕಂದರೆ ಆ ಪತ್ರಿಕೆ ಘಳಿಗೆಯಾದರೂ ನಿಮ್ಮನ್ನು ದುಃಖ ಪಡಿಸಿತೆಂದು ನೋಡುತ್ತೇನೆ.
೯ ಈಗ ನೀವು ದುಃಖ ಪಟ್ಟದರಿಂದಲ್ಲ, ಮಾನಸಾಂತರಕ್ಕೆ ದುಃಖ ಪಟ್ಟದರಿಂದ, ಸಂತೋಷ ಪಡುತ್ತೇನೆ; ಯಾ
ಕಂದರೆ ನಮ್ಮಿಂದ ಯಾವದರಲ್ಲಿಯೂ ನಷ್ಟ ಪಡದ ಹಾಗೆ ದೇವರಿಗೆ ಅನುಕೂಲವಾಗಿ ದುಃಖ ಪಟ್ಟಿರಿ.
೧೦ ಯಾಕಂದರೆ [5]ದೇವರಿಗೆ ಅನುಕೂಲವಾದ ದುಃಖವು ರಕ್ಷಣೆಗಾಗಿ ಪಶ್ಚಾತ್ತಾಪವಿಲ್ಲದ ಮಾನಸಾಂತರವನ್ನು
ಹುಟ್ಟಿಸುತ್ತದೆ; ಆದರೆ ಲೋಕದ ದುಃಖವು [6]ಮರಣವನ್ನು ಹುಟ್ಟಿಸುತ್ತದೆ.
೧೧ ಹ್ಯಾಗಂದರೆ, ಇಗೋ, ನೀವು ದೇವರಿಗೆ ಅನುಕೂಲವಾದ ದುಃಖ ಪಟ್ಟದ್ದೇ, ನಿಮ್ಮಲ್ಲಿ ಎಂಥ [7]ಜಾಗ್ರತೆ
ಯನ್ನು, ಎಂಥ ಪ್ರತ್ಯುತ್ತರವನ್ನು, ಎಂಥ ಕರಕರೆಯನ್ನು, ಎಂಥ ಭಯವನ್ನು, ಎಂಥ ಅತ್ಯಾಶೆಯನ್ನು, ಎಂಥ

1. ನಮ್ಮ ಅಧಿಕಾರದಿಂದ ನಾವು ಒಬ್ಬರಿಗೂ ಅನ್ಯಾಯ ಮಾಡಲಿಲ್ಲ; ನಮ್ಮ ದುರ್ಬೋಧನೆಯಿಂದ ಒಬ್ಬರನ್ನೂ ಕೆಡಿಸಲಿಲ್ಲ; ನಮ್ಮ ದ್ರವ್ಯಾಶೆಯಿಂದ ಒಬ್ಬನನ್ನೂ ವಂಚಿಸಲಿಲ್ಲ. ಇದನ್ನು ನಿಮಗೆ ನಿಂದೆಯಾಗಿ ಆದರೂ ನಿಮಗೆ ಆಜ್ಞೆವಿಧಿಸುವದಕ್ಕಾದರೂ ಹೇಳದೆ, ನಿಮ್ಮ ಮೇಲಿರುವ ಪ್ರೀತಿಯಿಂದಲೇ ಹೇಳುತ್ತೇನೆ, ಅನ್ನುತ್ತಾನೆ. (೩. ೨; ೬. ೧೧.) ಅವರ ಸಂಗಡ ಸಾಯಲೂ ಬದುಕಲೂ ತಕ್ಕ ಪ್ರೀತಿಯುಳ್ಳವನು ಅಕಾರಣವಾಗಿ ಅವರ ಮೇಲೆ ತಪ್ಪು ಹೊರಿಸಲಾರನು.

2. ತೀತನ ಮೂಲಕವಾಗಿ ಕೊರಿಂಥ ಸಭೆಯ ಸಂತೋಷವಾದ ವರ್ತಮಾನಗಳನ್ನು ಪೌಲನು ಕೇಳಿದ್ದರಿಂದ ಆದರಣೆಯಿಂದ ತುಂಬಿದ್ದನು. (೬. ವ.) ಅವನ ಉಪದ್ರವು ಸಹ ಅವನಿಗೆ ಹಿತ್ತಾಗಿತ್ತು.

3. ತೀತನು ಬಾರದೆ ಇದ್ದದರಿಂದ, ಪೌಲನು ತ್ರೋಯದಲ್ಲಿರುವಾಗ ಮಾತ್ರವಲ್ಲ, (೨. ೧೩.) ಮಕೆದೋನ್ಯಕ್ಕೆ ಬಂದಾಗಲೂ ಅವನ ಮನಸ್ಸಿನಲ್ಲಿ ಶಾಂತಿ ಇರಲಿಲ್ಲ. ಅವರ ವಿಷಯ ಒಳಗೆ ಭಯವೂ, ಅವಭಕ್ತರಿಂದಲೂ, ಯೆಹೂದ್ಯ ಬೋಧಕರಿಂದಲೂ ಹೊರಗೆ ಹೋರಾಟಗಳೂ ಉಂಟಾಗಿದ್ದವು.

4. ಪೌಲನು ಕೊರಿಂಥ್ಯರಿಗೆ ಬರೆದ ಮೊದಲನೇ ಪತ್ರಿಕೆಯಿಂದ ಅವರಿಗೆ ದುಃಖವಾಗುವದೆಂದು ತಿಳಿದು, ತಾನು ಸಹ ದುಃಖ ಪಟ್ಟನು. ಆದರೂ ಅವರಿಗೆ ಸ್ವಲ್ಪ ಕಾಲ ಉಂಟಾದ ದುಃಖದಿಂದ ಹುಟ್ಟಿದ ಫಲವಾದ ಮೇಲುಗಳನ್ನು ಕೇಳಿ ಸಂತೋಷ ಪಟ್ಟನು.

5. ಅವರು ತಮ್ಮ ಪಾಪದಿಂದ ದೇವರನ್ನು ದುಃಖ ಪಡಿಸಿದೆವೆಂಬ ಚಿಂತೆಯಿಂದ ದುಃಖ ಪಟ್ಟ ಕಾರಣ, ಅದು ದೇವರಿಗೆ ಸಮರ್ಪಕವಾಯಿತು. ಅದರಿಂದ ಅವರಿಗೆ ನಷ್ಟವಾಗದೆ ಆತ್ಮರಕ್ಷಣೆ ಉಂಟಾದದರಿಂದ, ಈ ವಿಧವಾದ ಅವರ ದುಃಖವನ್ನು ಕುರಿತು ಪೌಲನು ಮನಸ್ತಾಪ ಪಡ ಅವಶ್ಯವಿಲ್ಲವಾಯಿತು.

6. ದೇವರಿಗೆ ಸಮರ್ಪಕವಾದ ದುಃಖವು ರಕ್ಷಣೆ ಉಂಟು ಮಾಡುವದಾದರೆ, ಲೌಕಿಕ ದುಃಖವು ಮರಣ ಉಂಟು ಮಾಡುತ್ತದೆ. ಲೌಕಿಕರು ದೇವರು ಕೃಪೆಯಿಂದ ದಂಡಿಸುತ್ತಾನೆಂದು ಗ್ರಹಿಸದೆ, ಕ್ರೂರವಾಗಿ ದಂಡಿಸುತ್ತಾನೆಂದು ನೆನಸಿ, ದೇವರನ್ನು ನೊಂದು ಕೊಳ್ಳುವದರಿಂದ, ದಿನ ದಿನಕ್ಕೆ ಮನಸ್ಸಿನಲ್ಲಿ ಹಿಂಜರಿದು ನಿತ್ಯ ಮರಣವಾದ ನರಕಾಗ್ನಿಯಲ್ಲಿ ಬಿದ್ದು ನಾಶವಾಗುವರು. ದೇವದ್ರೋಹಿಯಾದ ಯೂದ ಇಸ್ಕರಿಯೋತನ ಸಂಗತಿ ಇದಕ್ಕೆ ತಕ್ಕ ದೃಷ್ಟಾಂತವಾಗಿದೆ.

7. ದೇವರಿಗೆ ಸಮರ್ಪಕವಾದ ದುಃಖದಿಂದ ಉಂಟಾದ ಪ್ರಯೋಜನಕ್ಕೆ ಪೌಲನು ಕೊರಿಂಥ್ಯರ ಕಾರ್ಯಗಳನ್ನೇ ದೃಷ್ಟಾಂತ ಪಡಿಸಿ ತೋರಿಸುತ್ತಾನೆ. ೧ನೇದು, ನಿಶ್ಚಿಂತೆಯಾಗಿದ್ದ ಅವರನ್ನು ಎಬ್ಬಿಸಿ, ಚಿಂತೆಯೂ ಪ್ರಯತ್ನವೂ ಉಳ್ಳವರಾಗ ಮಾಡಿತು. ೨ನೇದು, ಅಪರಾಧಿಗಳ ಸಂಗಡ ಸಮ್ಮಂಧ ಪಟ್ಟವರಲ್ಲವೆಂದು ರೂಪಿಸ, ನ್ಯಾಯಗಳನ್ನು ಹೇಳ ಪ್ರೇರೇಪಿಸಿತು. ೩ನೇದು, ಪಾಪದ ಮೇಲೆ ಅಸಹ್ಯ ಹುಟ್ಟಿಸಿತು. ೪ನೇದು, ದೇವರ ಕೋಪ ಬರುವದೆಂಬ ಭಯ ಹುಟ್ಟಿಸಿತು. ೫ನೇದು, ಕ್ಷಮೆ ಹೊಂದ ಬೇಕೆಂಬ ಆಶೆಯನ್ನು ಉಂಟು ಮಾಡಿತು. ೬ನೇದು, ದೇವರ ಮಹಿಮೆ ಪ್ರಕಟವಾಗಲೂ, ತಮ್ಮ ಯಥಾರ್ಥತ್ವ ತೋರಲೂ ತಕ್ಕ ಭಕ್ತಿ ವೈರಾಗ್ಯವನ್ನುಂಟು ಮಾಡಿತು. ೭ನೇದು, ಅಪರಾಧಿಯ ಮೇಲೆಯೂ ತಮ್ಮ ಮೇಲೆಯೂ ಖಂಡಿತವಾಗಿರುವ ಹಾಗೆ ಮಾಡಿತು.

ಆಸಕ್ತಿಯನ್ನು, ಎಂಥ ಪ್ರತಿದಂಡನೆಯನ್ನು, ಹುಟ್ಟಿಸಿತು! [1]ಈ ಕಾರ್ಯದಲ್ಲಿ ನಿಮ್ಮನ್ನು ಎಲ್ಲಾ ವಿಷಯವಾಗಿ
೧೨ ನಿರ್ಮಲರೆಂದು ಸ್ಥಾಪಿಸಿ ಕೊಂಡಿದ್ದೀರಿ. ಹಾಗಾದರೆ, ನಾನು ನಿಮಗೆ ಬರೆದಿದ್ದಾಗ್ಯೂ, [2]ಅನ್ಯಾಯ ಮಾ
ಡಿದವನಿಗೋಸ್ಕರವಲ್ಲ, [3]ಅನ್ಯಾಯ ಪಟ್ಟವನಿಗೋಸ್ಕರವಲ್ಲ, ನಿಮ್ಮ ನಿಮಿತ್ತವಾಗಿರುವ ನಮ್ಮ ಜಾಗ್ರತೆಯು
ದೇವರ ಸನ್ನಿಧಿಯಲ್ಲಿ ನಿಮ್ಮೆದುರಿಗೆ ತೋರ ಬರುವದಕ್ಕೋಸ್ಕರ ಬರೆದೆನು.
೧೩ ಇದಕ್ಕೋಸ್ಕರ ನಿಮ್ಮ ಆದರಣೆಯಲ್ಲಿ ಆದರಣೆ ಹೊಂದಿದ್ದೇವೆ; ಮತ್ತು ತೀತನ ಸಂತೋಷದಲ್ಲಿ ಅತ್ಯಧಿಕ
೧೪ ವಾದ ಸಂತೋಷ ಪಟ್ಟೆವು. ಏನಂದರೆ ಅವನ ಆತ್ಮವು ನಿಮ್ಮೆಲ್ಲರಿಂದ ಉಪಶಮನವಾಯಿತು; ಯಾಕಂದರೆ
ನಾನು ಅವನಿಗೆ ನಿಮ್ಮ ವಿಷಯದಲ್ಲಿ ಹೆಚ್ಚಳ ಮಾತು ಹೇಳಿದ್ದರೆ, ನಾಚಿಕೆ ಪಡಲಿಲ್ಲ. ಆದರೆ ನಾವು ಹ್ಯಾಗೆ
[4]ಸತ್ಯದಿಂದ ನಿಮಗೆ ಎಲ್ಲಾ ಹೇಳಿದೆವೋ, ಹಾಗೆಯೇ ತೀತನ ಮುಂದೆ ಮಾಡಿದ ನಮ್ಮ ಹೆಚ್ಚಳವು ಸಹ
೧೫ ಸತ್ಯವಾಯಿತು. ಮತ್ತು ಭಯದಿಂದಲೂ, [5]ನಡುಗಿನಿಂದಲೂ, ಅವನನ್ನು ಅಂಗೀಕರಿಸಿದವರಾದ ನಿಮ್ಮೆ
ಲ್ಲರ ವಿಧೇಯತ್ವವನ್ನು ಅವನು ನೆನಪು ಮಾಡಿ ಕೊಳ್ಳುವದರಿಂದ, ನಿಮ್ಮ ಮೇಲೆ ಅವನ ಕರುಳು ಹೆಚ್ಚಾಗಿ
೧೬ ಮರುಗುತ್ತದೆ. ಎಲ್ಲಾದರಲ್ಲಿ ನಿಮ್ಮನ್ನು ಕುರಿತು [6]ಧೈರ್ಯವಾಗಿರುವದರಿಂದ ಸಂತೋಷ ಪಡುತ್ತೇನೆ.

ಯೆಹೂದದಲ್ಲಿರುವ ಬಡ ಕ್ರೈಸ್ತರಿಗೆ ಧರ್ಮಸಹಾಯ ಮಾಡುವದನ್ನು ಕುರಿತು ಆಜ್ಞಾಪಿಸಿದ್ದು.

**8.** [7]ಇದಲ್ಲದೆ, ಸಹೋದರರೇ, [8]ಮಕೆದೋನ್ಯದ ಸಭೆಗಳಲ್ಲಿ ಕೊಡಲ್ಪಟ್ಟಿರುವ ದೇವರ [9]ಕೃಪೆಯನ್ನು ನಿಮಗೆ
೨ ತಿಳಿಸುತ್ತೇವೆ. ಏನಂದರೆ ಉಪದ್ರದ ಬಹಳ ಪರೀಕ್ಷೆಯಲ್ಲಿ ಅವರ [10]ಸಂತೋಷದ ಹೆಚ್ಚುವಿಕೆಯೂ, ಅವರ
೩ ಅಗಾಧವಾದ ಬಡತನವೂ, ಅವರ ಉದಾರತ್ವದ ಐಶ್ವರ್ಯಕ್ಕಾಗಿ ಹೆಚ್ಚಿತು. ನಾನು ಸಾಕ್ಷಿಯಾಗಿ, ಅವರು,

1. ಇದು ಪಾಪಿ ತಪ್ಪಿದ ಪಾಪ ಮಾಡಿದವನ ಕಾರ್ಯವನ್ನು ಕುರಿತದ್ದು. (೧ ಕೊರಿ. ೫. ೧.) ಈ ವಿಷಯದಲ್ಲಿ ಅವರೆಲ್ಲರೂ ಅಲ್ಲ, ಅವರಲ್ಲಿ ಬಹು ಮಂದಿ, ತಾವು ಅಪರಾಧಿಗಳಲ್ಲವೆಂದು ತೋರಿಸಿದರು. (೨. ೫. ವಚನದ ವ್ಯಾಖ್ಯಾನ ನೋಡ ಬೇಕು.)

2. ಪೌಲನು ಈ ವಿಷಯದಲ್ಲಿ ಖಂಡಿತವಾಗಿ ಹೇಳಿದ್ದು ಕೆಲವರ ಪ್ರಯೋಜನಕ್ಕೆ ಮಾತ್ರವಲ್ಲ, ಸಭೆಯವರೆಲ್ಲರ ಪ್ರಯೋಜನಕ್ಕಾಗಿಯೇ ಖಂಡಿತವಾಗಿ ಹೇಳಿದನು.

3. ಅನ್ಯಾಯ ಪಟ್ಟವನೆಂಬುವದು, ತಂದೆಯ ಹೆಂಡತಿಯನ್ನು ಇಟ್ಟು ಕೊಂಡ ಮಹಾಪಾತಕನ ತಂದೆಯನ್ನು ಕುರಿತದ್ದು. (೧ ಕೊರಿ. ೫. ೧.)

4. ಪೌಲನು ತನ್ನ ಶತ್ರುಗಳ ಹಾಗೆ ವಂಚನೆಯಾಗಿ ಮೋಸವಾಗಿ ಮಾತಾಡದೆ, ಅವರ ಆತ್ಮದ ಪ್ರಯೋಜನವನ್ನು ಅಪೇಕ್ಷಿಸಿ ಸತ್ಯವಾಗಿ ಮಾತಾಡಿದನು.

5. ಕೊರಿಂಥದ ಸಭೆಯವರು ಪೌಲನ ಕಟ್ಟಳೆಯ ಪ್ರಕಾರ ನಡಿಯುವರೋ ಇಲ್ಲವೋ ಎಂಬ ಕಳವಳವೂ ನಡುಗುವಿಕೆಯೂ ತೀತನ ಮನಸ್ಸಿನಲ್ಲಿ ಉಂಟಾಗಿರ ಬಹುದು.

6. ಅವರು ತೀತನನ್ನು ಅಂಗೀಕರಿಸಿದ ವಿಧವನ್ನೂ, ಪೌಲನ ಕಟ್ಟಳೆಯನ್ನು ಘನವಾಗಿ ಎಣಿಸಿದ್ದರಿಂದ ಅವರು ತೋರಿಸಿದ ಸದ್ಗುಣವನ್ನೂ ನೋಡಿ, ಅವನು ಧೈರ್ಯವುಳ್ಳವನಾದನು.

7. ಪೌಲನು ಇದಕ್ಕಿಂತ ಮುಂಚೆ ಯೆಹೂದದ ಬಡ ಕ್ರೈಸ್ತರಿಗೆ ಧರ್ಮಸಹಾಯ ಮಾಡ ಬೇಕೆಂದು ಕಟ್ಟಳೆ ಕೊಟ್ಟ ಪ್ರಕಾರ (೧ ಕೊರಿ. ೧೬. ೧—೪.) ಈಗ ಕಷ್ಟ ದೆಶೆಯಲ್ಲಿದ್ದ ಮಕೆದೋನ್ಯದ ಸಭೆಯವರು ಧರ್ಮವಿಷಯ ಉದಾರತ್ವದಿಂದ ಕೊಟ್ಟದ್ದನ್ನು ಹೇಳಿ, ಐಶ್ವರ್ಯಸಂಪನ್ನರಾದ ಕೊರಿಂಥದ ಸಭೆಯವರು ಸಹ ಅವರ ಹಾಗೆಯೇ ನಡಿಯ ಬೇಕೆಂದು ಪ್ರೇರೇಪಿಸಿ, (೮. ೧—೬.) ಹೀಗೆ ಉದಾರತ್ವವಾಗಿ ಕೊಡುವದಕ್ಕೆ ತಕ್ಕ ಕಾರಣಗಳನ್ನು ಹೇಳಿ ತೋರಿಸಿ, (೭—೧೫. ವ.) ಆ ಧರ್ಮಹಣವನ್ನು ತೆಗೆದು ಕೊಂಡು ಹೋದ ಸಹೋದರರನ್ನು ಅವರು ಪ್ರೀತಿಯಿಂದ ನೋಡಿ ಕೊಳ್ಳ ಬೇಕೆಂದು ಹೇಳುತ್ತಾನೆ. (೧೬—೨೪. ವ.) ಕೊರಿಂಥ್ಯರ ಉದಾರತ್ವವನ್ನು ಕುರಿತು ತಾನು ಹೆಚ್ಚಳವಾಗಿ ಮಾತಾಡಿದ್ದನ್ನು ಕುರಿತು ಹೇಳಿ ಅವರನ್ನು ಉತ್ಸಾಹ ಪಡಿಸುತ್ತಾನೆ. (೯. ೧—೫.) ಇಂಥಾ ಧರ್ಮವು ದೇವರ ಮಹಿಮೆಯನ್ನು ಪ್ರಕಟಿಸಲೂ, ಅವರಿಗೂ ಬೇರೊಬ್ಬರಿಗೂ ಪ್ರಯೋಜನವಾಗಲೂ ಹೇತುವೆಯಾಗುವದೆಂದೂ ಹೇಳುತ್ತಾನೆ. (೬—೧೫. ವ.)

8. ಮಕೆದೋನ್ಯದ ಸಭೆಗಳು ಅಂದರೆ, ಫಿಲಿಪ್ಪಿ, ಥೆಸ್ಸಲೋನೀಕ, ಬೆರೋಯ ಈ ಮುಂತಾದ ಮಕೆದೋನ್ಯ ದೇಶದ ಸಭೆಗಳನ್ನು ಕುರಿತದ್ದು.

9. ಸಭೆಯವರು ಮಾಡಿದ ಧರ್ಮಕ್ಕೆ "ಕೃಪೆ" ಎಂಬ ಒಂದು ಶಬ್ದವನ್ನು ಪ್ರಯೋಗಿಸಿ ಇದೆ. ಈ ಧರ್ಮಗುಣವು ದೇವರ ಕೃಪೆಯಿಂದ ಉಂಟಾದ ಕಾರಣ, ಅದು ದೇವರ ಕೃಪೆಯ ಹಾಗೆ ಮಹಿಮೆಯಾಗಿ ತೋರುವದರಿಂದ ಅದಕ್ಕೆ ಈ ಹೆಸರು ತಕ್ಕದ್ದಾಗಿದೆ.

10. ಪೂರ್ಣ ಉದಾರತ್ವದಿಂದ ಸಂತೋಷ ಹೆಚ್ಚುವದು. ಆದರೆ ಅಗಾಧವಾದ ದರಿದ್ರದಿಂದ ಪೂರ್ಣ ಸಂತೋಷ ಉಂಟಾಗುವದು ಮತ್ತೂ ಅತಿಶಯವೇ. ಮಕೆದೋನ್ಯದ ಸಭೆಗಳ ಕಠಿಣ ದರಿದ್ರದಲ್ಲಿ ಪೂರ್ಣ ಧರ್ಮವೂ ಸಂತೋಷವೂ ಉಂಟಾದ ಈ ಸಂಗತಿಯು ಲೌಕಿಕ ಚಿಂತೆಯುಳ್ಳ ಕೊರಿಂಥ್ಯರಿಗೆ ಆಶ್ಚರ್ಯವಾಗುವದು. "ಎರಚಿದ ಬುಗ್ಗೆ ಹೆಚ್ಚಾಗಿ ಊರುವದು, ಎರಚದಿರುವ ಬುಗ್ಗೆ ಹೆಚ್ಚಾಗಿ ಊರುವದಿಲ್ಲ" ಎಂಬ ಗಾದೆಯ ಪ್ರಕಾರ, ಉದಾರತ್ವದಿಂದ ಸಂಪೂರ್ಣವೂ, ಲೋಭತ್ವದಿಂದ ಕೊರತೆಯೂ ಉಂಟಾಗುವದು.



೪ ಸಾಮರ್ಥ್ಯದ ಪ್ರಕಾರವೂ, ಸಾಮರ್ಥ್ಯ ಮೀರಿಯೂ, ಸ್ವಚಿತ್ತದಿಂದ, [1]ನಾವು ದಾನವನ್ನೂ ಪರಿಶುದ್ಧರಿ
ಗಾಗಿರುವ ಸೇವೆಯ ಧರ್ಮವನ್ನೂ ತೆಗೆದು ಕೊಳ್ಳ ಬಹಳ ಬಿನ್ನಹದಿಂದ ನಮ್ಮನ್ನು ಬೇಡಿ ಕೊಂಡು,
೫ ನಾವು [2]ಕೋರಿದ ಹಾಗಲ್ಲ, ತಮ್ಮನ್ನೇ ಮೊದಲು ಕರ್ತನಿಗೂ, ದೇವರ ಚಿತ್ತದಿಂದ ನಮಗೂ, ಕೊಟ್ಟರು.
೬ ಆದದರಿಂದ ನಾವು ತೀತನಿಗೆ, ಅವನು ಮುಂತೊಡಗಿದ ಪ್ರಕಾರ, ಈ ಕೃಪೆಯನ್ನು ಸಹ ನಿಮ್ಮಲ್ಲಿ ತೀರಿಸ
ಬೇಕೆಂದು ಬೇಡಿ ಕೊಂಡೆವು.
೭ ಆದರೆ ವಿಶ್ವಾಸದಲ್ಲಿಯೂ, ವಾಕ್ಯದಲ್ಲಿಯೂ, ತಿಳುವಿಕೆಯಲ್ಲಿಯೂ, ಎಲ್ಲಾ ಜಾಗ್ರತೆಯಲ್ಲಿಯೂ, ನಿಮ್ಮಿಂದ
ನಮಗಾಗುವ ಪ್ರೀತಿಯಲ್ಲಿಯೂ, ಎಲ್ಲಾದರಲ್ಲಿ ಹೆಚ್ಚುವ ಪ್ರಕಾರ ಈ ಕೃಪೆಯಲ್ಲಿಯೂ ನೀವು ಹೆಚ್ಚುವ ಹಾಗೆ,
೮ ಆಜ್ಞೆಯ ಪ್ರಕಾರವಲ್ಲ, [3]ಮತ್ತೊಬ್ಬರ ಜಾಗ್ರತೆಯನ್ನು ನೋಡಿ, ನಿಮ್ಮ ಪ್ರೀತಿಯ ಸತ್ಯವನ್ನು ಪರೀಕ್ಷಿಸುವ
ದಕ್ಕೆ ಹೇಳುತ್ತೇನೆ.
೯ ಯಾಕಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ತಿಳಿಯುತ್ತೀರಿ; ಏನಂದರೆ ಅವನು ಐಶ್ವರ್ಯ
ವಂತನಾಗಿದ್ದು, ನೀವು ಅವನ ಬಡತನದಿಂದ ಐಶ್ವರ್ಯವಂತರಾಗುವ ಹಾಗೆ, ನಿಮಗೋಸ್ಕರ [4]ಬಡವನಾದನು.
೧೦ ಮತ್ತು [5]ಇದರಲ್ಲಿ ಆಲೋಚನೆ ಹೇಳುತ್ತೇನೆ; ಯಾಕಂದರೆ ಹೋದ ವರುಷದಿಂದ ಮಾಡುವದನ್ನಲ್ಲದೆ,
೧೧ ಇಚ್ಛೈಸುವದನ್ನು ಸಹ, ಮುಂತೊಡಗಿದವರಾದ ನಿಮಗೆ ಇದು ಒಳ್ಳೇದು. ಆದರೆ ಇಚ್ಛೈಸುವ ಮನಸ್ಸು
ಇದ್ದ ಪ್ರಕಾರವೇ, ಉಂಟಾದದರೊಳಗಿಂದ ಪೂರೈಸುವಿಕೆಯು ಆಗುವ ಹಾಗೆ, ಈಗ ಮಾಡುವದನ್ನು ಸಹ
೧೨ ಪೂರೈಸಿರಿ. ಯಾಕಂದರೆ ಒಬ್ಬನಿಗೆ ಸಿದ್ಧ ಮನಸ್ಸು ಉಂಟಾಗಿದ್ದರೆ, [6]ಇಲ್ಲದ ಪ್ರಕಾರವಲ್ಲ, ಇದ್ದ ಪ್ರಕಾರವೇ
ಹಿತವಾಗಿದೆ.
೧೩,೧೪ ಯಾಕಂದರೆ ಮತ್ತೊಬ್ಬರಿಗೆ ಲಘುವೂ, ನಿಮಗೆ ಉಪದ್ರವೂ, ಆಗ ಬೇಕೆಂದಲ್ಲ, ಸಮತ್ವದ ಪ್ರ
೧೫ ಕಾರ, ಈಗಿನ ಕಾಲದಲ್ಲಿ ನಿಮ್ಮ ಹೆಚ್ಚುವಿಕೆ ಅವರ ಕೊರತೆಗೂ, ಸಮತ್ವವು ಆಗುವದಕ್ಕೆ, ಬಹಳ ಕೂಡಿ

1. ದಾನವೆಂಬುವದಕ್ಕೆ ಮೊದಲನೇ ವಚನದಲ್ಲಿರುವ ಕೃಪೆ ಎಂಬ ಪದವೇ ಮೂಲ ಭಾಷೆಯಲ್ಲಿ ಉಂಟು. ಈ ಕೃಪೆಯಾದ ಧರ್ಮೋಪಕಾರವನ್ನು ಬಡ ಕ್ರೈಸ್ತರಾದ ದೇವದಾಸರಿಗೆ ಕೊಟ್ಟು, ತಾವು ಸಹ ಅವರಿಗೆ ಸೇವೆ ಮಾಡ ಬೇಕೆಂದು ಅಪೇಕ್ಷಿಸಿ, ಆ ದಾನವನ್ನು ಅಂಗೀಕರಿಸುವ ಹಾಗೆ ಅಪೊಸ್ತಲರನ್ನು ಬಹಳವಾಗಿ ಬೇಡಿ ಕೊಂಡರು.

2. ಧರ್ಮವಿಷಯದಲ್ಲಿ ಮಕೆದೋನ್ಯದ ಸಭೆಗಳು ಅಪೊಸ್ತಲರು ನೆನಸಿದ್ದಕ್ಕಿಂತ ಹೆಚ್ಚಾಗಿ ಮಾಡಿದರು. ಅವರು ತಮ್ಮ ಹಣವನ್ನು ಮಾತ್ರವಲ್ಲ ತಮ್ಮನ್ನೇ ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿ, ಆತನ ದಾಸರಿಗೆ ಬರುವ ಉಪದ್ರಗಳನ್ನೂ ಕಷ್ಟಗಳನ್ನೂ ಅನುಭವಿಸ ನಿರ್ಣಯಿಸಿ ಕೊಂಡರು. (ಅಪೊ. ಕ್ರಿ. ೨೦. ೪. ಕೊಲೊ. ೪. ೧೦. ಫಿಲಿ. ೨. ೩೦.)

3. ಬೇರೆ ಸದ್ಗುಣಗಳಲ್ಲಿ ಬೆಳೆಯುತ್ತಾ ಬಂದ ಕೊರಿಂಥದ ಸಭೆಯವರು ಧರ್ಮಗುಣದಲ್ಲಿಯೂ ಬೆಳೆಯ ಬೇಕೆಂದು ಹೇಳಿದನು. ಇದನ್ನು ಅಧಿಕಾರದಿಂದ ಆಜ್ಞಾಪಿಸದೆ, ಪ್ರೀತಿಯಿಂದ ಆಲೋಚನೆ ಹೇಳುತ್ತಾನೆ. (೧೦. ವ.) ಅವರ ಪ್ರೀತಿಯ ನಿಶ್ಚಯವು ತೋರುವ ಹಾಗೆ ಮತ್ತೊಬ್ಬರ ದೃಷ್ಟಾಂತದಿಂದಲೂ, ಮುಖ್ಯವಾಗಿ ಕ್ರಿಸ್ತನ ಪ್ರೀತಿಯಿಂದಲೂ ಅವರನ್ನು ಪ್ರೇರೇಪಿಸುತ್ತಾನೆ. (ಫಿಲಿ. ೨. ೫—೮.)

4. ಸರ್ವ ಮಹಿಮೆಯೂ ಭಾಗ್ಯವೂ ಉಳ್ಳ ಕರ್ತನು ಈ ಲೋಕದಲ್ಲಿ ಕಠಿಣ ದರಿದ್ರಕ್ಕೊಳಗಾದದ್ದು ಎಷ್ಟೋ ಆಶ್ಚರ್ಯವು. ಭಕ್ತಿ ವಿಶ್ವಾಸದಿಂದ ಆತನ ಶರಣು ಹೊಗುವ ದಾಸರನ್ನು ಪರಮಪದವಿಯಲ್ಲಿ ಐಶ್ವರ್ಯವಂತರಾಗ ಮಾಡುವದಕ್ಕೆ ಆತನು ಈ ಲೋಕದಲ್ಲಿ ಬಡತನವನ್ನೂ ಶ್ರಮೆಯನ್ನೂ ಸಹಿಸುವ ಹಾಗೆ ತನ್ನನ್ನು ತಗ್ಗಿಸಿ ಕೊಂಡನು.

5. ಇದರಲ್ಲಿ ಅಂದರೆ, ಈ ಧರ್ಮವಿಷಯದಲ್ಲಿ ಪ್ರಾರಂಭಿಸಿದವರು ಅದನ್ನು ಮುಗಿಸ ಬೇಕು. ಮತ್ತು ಆಜ್ಞೆಯ ಪ್ರಕಾರವಲ್ಲ ಯೋಚನೆಯಾಗಿ ಹೇಳುತ್ತೇನೆ: ಈ ಧರ್ಮವಿಷಯದಲ್ಲಿ ನೀವು ಬೇರೆ ಸಭೆಗಳಿಗಿಂತ ಮುಂಚಿತವಾಗಿ ಹೋದ ವರುಷದಲ್ಲಿಯೇ ಮನಃಪೂರ್ವಕವಾಗಿ ಪ್ರಾರಂಭಿಸಿರುವದರಿಂದ ಅದರ ವಿಷಯ ನಾನು ಆಜ್ಞಾಪಿಸ ಕೆಲಸವಿಲ್ಲ. ನನ್ನ ಯೋಚನೆ ಮಾತ್ರ ಹೇಳುತ್ತೇನೆ ಎಂಬುವದು ಪೌಲನ ಉದ್ದಿಶ್ಯವೆಂದು ಕೆಲವರು ನೆನಸುತ್ತಾರೆ. ಮೊದಲನೇ ಪತ್ರಿಕೆಯನ್ನು ಕಳುಹಿಸುವದಕ್ಕಿಂತ ಮುಂಚೆ ಅವರು ಆ ವಿಷಯದಲ್ಲಿ ಯತ್ನಯಿಸಿದ್ದರು. ತರುವಾಯ ಅದನ್ನು ಜಾಗ್ರತೆಯಾಗಿ ನಡಿಸಿದರೆಂದು ತೋರುತ್ತದೆ. (೧ ಕೊರಿ. ೧೬. ೧. ವಚನದ ವ್ಯಾಖ್ಯಾನ ನೋಡ ಬೇಕು.)

6. ಮನಸ್ಸಿನ ಅಪೇಕ್ಷೆಯು ಕ್ರಿಯೆಯಿಂದ ತೋರ ಬೇಕು. ಉತ್ಸಾಹದಿಂದ ಮಾಡುವ ಧರ್ಮವೇ ದೇವರಿಗೆ ಸಮರ್ಪಕವಾದ ಕಾಣಿಕೆಯು. ಆತನು ಒಬ್ಬನಲ್ಲಿ ಇಲ್ಲದ್ದನ್ನು ಕೇಳದೆ ಇರುವದನ್ನೇ ಕೇಳುತ್ತಾನೆ. ಸ್ವಲ್ಪವಾದದ್ದಾದರೂ ಅದನ್ನು ಉತ್ಸಾಹದಿಂದ ಕೊಟ್ಟರೆ, ಅದೇ ಆತನಿಗೆ ಪ್ರೀತಿಯಾದದ್ದು. ಎರಡು ಕಾಸನ್ನು ಹಾಕಿದ ಬಡ ವಿಧವೆಯು ಇದಕ್ಕೆ ತಕ್ಕ ದೃಷ್ಟಾಂತವಾಗಿದ್ದಾಳೆ.

ಸಿದವನಿಗೆ ಹೆಚ್ಚು ಇರಲಿಲ್ಲ, ಸ್ವಲ್ಪ ಕೂಡಿಸಿದವನಿಗೆ ಕಡಿಮೆ ಇರಲಿಲ್ಲ, ಎಂದು (ಹೊರ. ೧೬. ೧೮.) ಬರೆ
ದಿರುವ ಪ್ರಕಾರ, [1]ಅವರ ಹೆಚ್ಚುವಿಕೆ ನಿಮ್ಮ ಕೊರತೆಗೂ, ಆಗ ಬೇಕು.

೧೬ ಆದರೆ ನಿಮಗೋಸ್ಕರ [2]ಅದೇ ಜಾಗ್ರತೆಯನ್ನು ತೀತನ ಹೃದಯದಲ್ಲಿ ಕೊಟ್ಟ ದೇವರಿಗೆ ಸ್ತುತಿ.
೧೭ ಏನಂದರೆ ಅವನು ಮಾತನ್ನು ಕೇಳಿ, ಮತ್ತು ಹೆಚ್ಚು ಜಾಗ್ರತೆಯುಳ್ಳವನಾಗಿದ್ದು, ಸ್ವೇಚ್ಛೆಯಿಂದ ನಿಮ್ಮ
೧೮ ಬಳಿಗೆ ಹೋಗ ಹೊರಟನು. ಅವನ ಸಂಗಡ ಸುವಾರ್ತೆಯಲ್ಲಿ ಸಕಲ ಸಭೆಗಳೊಳಗೆ ಹೊಗಳಲ್ಪಡುವದ
೧೯ ಲ್ಲದೆ, ಅದೇ ಕರ್ತನ ಮಹಿಮೆಗೋಸ್ಕರವೂ, [3]ನಿಮ್ಮ ಸಿದ್ಧ ಮನಸ್ಸಿಗೋಸ್ಕರವೂ, ನಮ್ಮಿಂದ ಸೇವಿಸಲ್ಪಡುವ
ಈ ದಾನದ ಸಂಗಡ ನಮ್ಮ [4]ಜತೆಪ್ರಯಾಣಿಕನಾಗಿ ಸಭೆಗಳಿಂದ ಆರಿಸಿ ನೇಮಿಸಲ್ಪಟ್ಟ [5]ಸಹೋದರನನ್ನು
೨೦ ಕಳುಹಿಸಿದ್ಧೇವೆ. ನಮ್ಮಿಂದ ಸೇವಿಸಲ್ಪಡುವ ಈ ಮಹಾ ದಾನದ ವಿಷಯವಾಗಿ ಯಾರೊಬ್ಬ ನಮ್ಮಲ್ಲಿ
೨೧ ದೋಷ ಕಾಣದ ಹಾಗೆ ಎಚ್ಚರಿಕೆಯಾಗಿದ್ದು, ಕರ್ತನ ಮುಂದೆ ಮಾತ್ರವಲ್ಲ, ಮನುಷ್ಯರ ಮುಂದೆಯೂ
೨೨ ಒಳ್ಳೆಯವುಗಳನ್ನು ಮುನ್ನೆನಸಿದೆವು. ಮತ್ತು ಬಹಳ ಕಾರ್ಯಗಳಲ್ಲಿ ಬಹಳ ಸಾರಿ ಜಾಗ್ರತೆಯುಳ್ಳವನೆಂದೂ,
ಈಗ ನಿಮ್ಮ ಮೇಲೆ ಇಡುವ ಬಹಳ ನಂಬಿಕೆಗೋಸ್ಕರ ಬಹು ಹೆಚ್ಚಾಗಿ ಜಾಗ್ರತೆಯುಳ್ಳವನೆಂದೂ, ನಾವು
ಪರೀಕ್ಷಿಸಿದ ನಮ್ಮ [6]ಸಹೋದರನನ್ನು ಅವರ ಸಂಗಡ ಕಳುಹಿಸಿದ್ಧೇವೆ.

೨೩ ತೀತನನ್ನು ಕುರಿತಾದರೆ, ಅವನು ನನ್ನ ಜತೆಗಾರನೂ, ನಿಮಗಾಗಿ ಜತೆಕೆಲಸದವನೂ; ನಮ್ಮ ಸಹೋದರ
೨೪ ರಾದರೆ, ಅವರು ಸಭೆಗಳ [7]ಅಪೊಸ್ತಲರೂ, ಕ್ರಿಸ್ತನ ಮಹಿಮೆಯೂ ಆಗಿದ್ಧಾರೆ. ಹಾಗಾದರೆ, ನಿಮ್ಮ ಪ್ರೀತಿ
ಯೂ ನಿಮಗೋಸ್ಕರವಾದ ನಮ್ಮ ಹೆಚ್ಚಳವೂ, ಇವುಗಳ ದೃಷ್ಟಾಂತವನ್ನು ಅವರಿಗೂ ಸಭೆಗಳ ಸಮ್ಮುಖದ
ಲ್ಲಿಯೂ ತೋರಿಸಿರಿ.

1. ಯೆಹೂದದ ಬಡ ಕ್ರೈಸ್ತರಿಗೆ ಧರ್ಮಸಹಾಯ ಮಾಡ ಬೇಕೆಂದು ಪೌಲನು ಹೇಳಿದ್ದರಿಂದ, ಅವರು ಸೋಮಾರಿಗಳಾಗಿರಲೂ, ಇವರು ಕಷ್ಟ ಪಟ್ಟು ಕೊಡಲೂ ಬೇಕೆಂಬ ಯೋಚನೆಯಿಂದ ಹೇಳದೆ, ಸಮತ್ವವನ್ನು ಅಪೇಕ್ಷಿಸಿಯೇ ಹೇಳಿದನು. ಕೊರಿಂಥ್ಯರಿಗೆ ಕೊರತೆ ಉಂಟಾದರೆ, ಯೆಹೂದ್ಯ ಸಭೆಯವರು ಅದನ್ನು ನಿವರ್ತಿಸ ಶಕ್ತರಾಗಿದ್ದರೆ, ಅವರಿಗೂ ಇದೇ ಯೋಚನೆ ಹೇಳುವನು. ಸಮತ್ವವೇ ಅವನ ಮನಸ್ಸಿನ ಕೋರಿಕೆಯು. ಇಸ್ರಯೇಲ್ಯರು ಅರಣ್ಯದಲ್ಲಿ ಮನ್ನವನ್ನು, ಕೆಲವರು ಅಧಿಕವಾಗಿಯೂ, ಕೆಲವರು ಕಡಿಮೆಯಾಗಿಯೂ ಕೂಡಿಸಿದಾಗ್ಯೂ, ಎಲ್ಲವನ್ನು ಒಂದು ಸ್ಥಳದಲ್ಲಿರಿಸಿ ಮನೆಯ ಯಜಮಾನನು ಒಬ್ಬೊಬ್ಬನಿಗೂ ತಕ್ಕ ಪ್ರಕಾರ ಹಂಚಿ ಕೊಟ್ಟದ್ದರಿಂದ ಎಲ್ಲರಿಗೂ ಸಮವಾಗಿತ್ತು. ಸಹೋದರಸ್ನೇಹವು ವೃದ್ಧಿಯಾಯಿತು. ಅದೇ ಪ್ರಕಾರ ಪರಮ ಕಾನಾನಿಗೆ ಪ್ರಯಾಣ ಮಾಡುವಂಥ ಸಭೆಯವರು ಅರಣ್ಯವಾದ ಈ ಲೋಕದಲ್ಲಿ ಒಬ್ಬರನ್ನೊಬ್ಬರು ಸ್ನೇಹಿಸಿ, ಒಬ್ಬರ ಕೊರತೆಗಳನ್ನು ಒಬ್ಬರು ಪರಿಹರಿಸಿ ಸಮಾನಸ್ಥಿತಿಯುಳ್ಳವರಾಗಿರುವ ಹಾಗೆ ಸಹಾಯ ಮಾಡ ಬೇಕು.

2. ಕೊರಿಂಥದ ಸಭೆಯವರನ್ನು ಕುರಿತು ತೀತನ ಮನಸ್ಸಿನಲ್ಲಿ ಬಹಳ ಅಕ್ಕರೆಯುಂಟಾಗುವ ಹಾಗೆ ದೇವರು ಅನುಗ್ರಹಿಸಿದ್ದರಿಂದ ಅವನು ಪೌಲನ ಮಾತಿನಿಂದ ಮಾತ್ರವಲ್ಲ, (೬. ವ.) ತನ್ನ ಸ್ವೇಚ್ಛೆಯಿಂದ ಅವರನ್ನು ನೋಡ ಬೇಕೆಂಬ ಆಶೆಯಿಂದ ಹೊರಟು ಹೋದನು.

3. ನಿಮ್ಮ ಸಿದ್ಧ ಮನಸ್ಸು ಎಂಬುವದಕ್ಕೆ ನಮ್ಮ ಸಿದ್ಧ ಮನಸ್ಸು ಎಂದು ಕೆಲವು ಪ್ರತಿಗಳಲ್ಲಿ ಉಂಟು. ದೇವರ ಮಹಿಮೆ ಪ್ರಕಟವಾಗಲೂ, ಯೆಹೂದ್ಯ ಕ್ರೈಸ್ತರಿಗೆ ಸೇವೆ ಮಾಡುವದರಲ್ಲಿ (ಗಲಾ. ೨. ೧೦.) ಯಥಾರ್ಥತ್ವವು ಕಾಣುವ ಹಾಗೆಯೂ, ಪೌಲನು ಇನ್ನೊಬ್ಬನನ್ನು ಸಂಗಡ ಕರಕೊಂಡು ಹೋಗ ಅಪೇಕ್ಷಿಸಿ, ಈ ಧರ್ಮದ ಸೇವೆಯನ್ನು ಪೂರೈಸ ತೊಡಗಿದನು.

4. ಧರ್ಮಹಣವನ್ನು ಕೂಡಿಸಲೂ, ಅದನ್ನು ಪೌಲನ ಸಂಗಡ ಯೆರೂಸಲೇಮಿಗೆ ತೆಗೆದು ಕೊಂಡು ಹೋಗಲೂ, ಮಕೆದೋನ್ಯ ಸಭೆಯವರು ಆ ಸಹೋದರನನ್ನು ನೇಮಿಸಿದರು. ಹಣದ ವಿಷಯದಲ್ಲಿ ಏನೂ ಅಪವಾದವಿಲ್ಲದೆ ಇರುವದಕ್ಕಾಗಿ ತನ್ನ ಸಂಗಡ ಇನ್ನೊಬ್ಬನನ್ನು ಕಳುಹಿಸ ಬೇಕೆಂದು ಪೌಲನು ಕೇಳಿ ಕೊಂಡ ಪ್ರಕಾರ ಸಭೆಯವರು ಮಾಡಿದರು. (೨೦, ೨೧. ವ.)

5. ಈ ವಚನದಲ್ಲಿಯೂ ೨೨ನೇ ವಚನದಲ್ಲಿಯೂ ಹೇಳಲ್ಪಟ್ಟ ಸಹೋದರನು ಯಾರೆಂದು ನಿಶ್ಚಯ ತಿಳಿಯಲಿಲ್ಲ. ಸಕಲ ಸಭೆಗಳಲ್ಲಿ ಹೊಗಳಲ್ಪಟ್ಟವನು ಲೂಕನೆಂದು ಅನೇಕರು ನೆನಸುತ್ತಾರೆ. ಅದನ್ನು ಕುರಿತು ೧೨. ೧೮. ವಚನದ ವ್ಯಾಖ್ಯಾನ ನೋಡ ಬೇಕು. ತುಕಿಕನೂ ತ್ರೊಫೀಮನೂ ಪೌಲನ ಸಂಗಡ ಆಸ್ಯಕ್ಕೆ ಹೋದರು. (ಅಪೊ. ಕ್ರಿ. ೨೦. ೪.) ಯೆರೂಸಲೇಮಿನಲ್ಲಿ ತ್ರೊಫೀಮನು ಪೌಲನ ಸಂಗಡ ಇದ್ದನು. (ಅಪೊ. ಕ್ರಿ. ೨೧. ೨೯,) ಇವನು ಸಭೆಗಳಿಗೆ ಒಳ್ಳೇ ಪರಿಚಿತಿಯುಳ್ಳವನಾಗಿದ್ದನೆಂದು ತೋರುತ್ತದೆ.

6. ಸೀಲನೇ ಈ ಸಹೋದರನೆಂದು ಕೆಲವರು ನೆನಸುತ್ತಾರೆ. ಆದರೆ ಅದು ನಿಶ್ಚಯವೆಂದು ಹೇಳುವದಕ್ಕಾಗದು.

7. ಇವರು ಸಭೆಗಳಿಂದ ಆದು ಕೊಳ್ಳಲ್ಪಟ್ಟು (೧೯. ವ.) ಕಳುಹಿಸಲ್ಪಟ್ಟ ರಾಯಭಾರಿಗಳಾಗಿದ್ಧಾರೆ. (ಫಿಲಿ. ೨. ೨೫.) ಪೌಲನೂ ಅವನ ಜತೆಗಾರರೂ ಕರ್ತನಿಂದ ಆದು ಕೊಳ್ಳಲ್ಪಟ್ಟವರಾಗಿಯೂ ಆತನ ಮಹಿಮೆಗೋಸ್ಕರ ಪ್ರಯಾಸ ಪಟ್ಟವರಾಗಿಯೂ ಇದ್ದದರಿಂದ ಕ್ರಿಸ್ತನಿಗೆ ಮಹಿಮೆಯಾಗಿದ್ದರು. ಇದೇ ಘನವು.



9. [1]ಪರಿಶುದ್ಧರಿಗೆ ಆಗುವ ಸೇವೆಯನ್ನು ಕುರಿತು ನಿಮಗೆ ಇನ್ನು ಬರೆಯುವದು ನನಗೆ ಅಗತ್ಯವಿಲ್ಲ.
೨ ಯಾಕಂದರೆ [2]ಅಕಾಯವು [3]ಹೋದ ವರುಷದಿಂದ ಸಿದ್ಧವಾಗಿದೆ ಎಂದು, ನಾನು ನಿಮಗೋಸ್ಕರ ಹೆಚ್ಚಳ
ಪಟ್ಟು, ಮಕೆದೋನ್ಯರಿಗೆ ಹೇಳುವ ನಿಮ್ಮ ಸಿದ್ಧ ಮನಸ್ಸನ್ನು ಬಲ್ಲೆನು. ಮತ್ತು ನಿಮ್ಮಲ್ಲಿ ಉಂಟಾದ ಆಸಕ್ತಿ
೩ ಯು [4]ಬಹಳ ಜನರನ್ನು ಎಬ್ಬಿಸಿತು. ಆದರೆ ನಿಮಗೋಸ್ಕರ ನಾವು ಹೇಳಿದ ಹೆಚ್ಚಳವು ಈ ಸಂಗತಿಯಲ್ಲಿ
೪ ವ್ಯರ್ಥವಾಗದ ಹಾಗೆಯೂ, ನಾನು ಹೇಳಿದ ಪ್ರಕಾರ ನೀವು ಸಿದ್ಧವಾಗಿರುವ ಹಾಗೆಯೂ, [5]ಮಕೆದೋ
ನ್ಯರು ನಮ್ಮ ಸಂಗಡ ಬಂದು, ಒಂದು ವೇಳೆ ನಿಮ್ಮನ್ನು ಸಿದ್ಧವಿಲ್ಲದವರಾಗಿ ಕಂಡರೆ, ಈ ದೃಢವಾದ ಹೆಚ್ಚಳ
ದಲ್ಲಿ, ನಿಮಗೆಂದು ಹೇಳಲೋ? ಅಲ್ಲ, ನಮಗೆ ನಾಚಿಕೆಯಾಗದ ಹಾಗೆಯೂ, [6]ಸಹೋದರರನ್ನು ಕಳುಹಿಸಿ
೫ ದ್ಧೇನೆ. ಹೀಗಿರಲಾಗಿ ಅವರು ನಿಮ್ಮ ಬಳಿಗೆ ಮುಂದೆ ಹೋಗಿ, ಮುಂತಿಳಿಸಲ್ಪಟ್ಟಿರುವ ನಿಮ್ಮ [7]ಆಶೀರ್ವಾದ
ವನ್ನು, ಅದು ಈ ಪ್ರಕಾರ ಲೋಭದ ಹಾಗಲ್ಲ, ಆಶೀರ್ವಾದದ ಹಾಗೆ ಆಯತ್ತವಾಗುವ ಬಗ್ಯೆ, ಮುಂಚೆ
ಸಿದ್ಧ ಮಾಡ ಬೇಕೆಂದು, ಸಹೋದರರನ್ನು ಎಚ್ಚರಿಸುವದು ಅವಶ್ಯವೆಂದೆಣಿಸಿದೆನು.

೬ ಇದು ಮಾತ್ರ—ಕೊಂಚವಾಗಿ ಬಿತ್ತುವವನು ಕೊಂಚವಾಗಿಯೇ ಕೊಯ್ಯುವನು; ಮತ್ತು ಬಹಳವಾಗಿ
೭ ಬಿತ್ತುವವನು ಬಹಳವಾಗಿಯೇ ಕೊಯ್ಯುವನು; ಒಬ್ಬೊಬ್ಬನು ಹೃದಯದಲ್ಲಿ ಮುಂಕೊಳ್ಳುವ ಪ್ರಕಾರ
ವೇ, [8]ದುಃಖದಿಂದಲಾದರೂ ಅಗತ್ಯದಿಂದಲಾದರೂ ಅಲ್ಲ; ಯಾಕಂದರೆ ಸಂತೋಷವಾಗಿ ಕೊಡುವವನನ್ನು
೮ ದೇವರು ಪ್ರೀತಿ ಮಾಡುತ್ತಾನೆ. (ಸಾಮು. ೨೨. ೯.) ಇದಲ್ಲದೆ—ಚೆಲ್ಲಿದನು, ಬಡವರಿಗೆ ಕೊಟ್ಟನು, ಅವನ
೯ ನೀತಿಯು ಎಂದೆಂದಿಗೂ ನೆಲೆಯಾಗಿದೆ, ಎಂದು (ಕೀರ್ತ. ೧೧೨. ೯.) ಬರೆದಿರುವ ಪ್ರಕಾರ, ನೀವು ಎಲ್ಲಾ
ದರಲ್ಲಿ ಎಂದಿಗೂ ಎಲ್ಲಾ ತೃಪ್ತಿಯುಳ್ಳವರಾಗಿ, ಎಲ್ಲಾ ಸತ್ಕ್ರಿಯೆಗಾಗಿ ಹೆಚ್ಚುವ ಹಾಗೆ, ದೇವರು [9]ಎಲ್ಲಾ ಕೃ
ಪೆಯನ್ನು ನಿಮಗಾಗಿ ಹೆಚ್ಚಿಸ ಬಲ್ಲನು.

1. ಬಡವರನ್ನು ಕರುಣಿಸುವದೂ, ಸಹಾಯ ಮಾಡುವದೂ, ಸಭೆಯವರ ಧರ್ಮವೆಂಬುವದು ಪ್ರತ್ಯಕ್ಷವಾದ ಕಾರ್ಯವಾದದರಿಂದ, ಅದನ್ನು ಕುರಿತು ಅವರಿಗೆ ವಿಸ್ತಾರವಾಗಿ ಹೇಳ ತಕ್ಕ ಅವಶ್ಯವಿಲ್ಲ. ಆದದರಿಂದ ಪೌಲನು ಅವರ ಸಿದ್ಧ ಮನಸ್ಸನ್ನು ಕುರಿತು ಮುಖ್ಯವಾಗಿ ಹೆಚ್ಚಳ ಪಡುತ್ತಾನೆ. (೮. ೧೧.)

2. ೧. ೧. ವಚನದ ವ್ಯಾಖ್ಯಾನ ನೋಡ ಬೇಕು.

3. ೮. ೧೦. ವಚನದ ವ್ಯಾಖ್ಯಾನ ನೋಡ ಬೇಕು.

4. ಧರ್ಮವಿಷಯದಲ್ಲಿ ಮಕೆದೋನ್ಯರು ಧಾರಾಳವಾಗಿ ಕೊಡ ಮನೋತ್ಸಾಹವುಳ್ಳವರಾಗಿದ್ದಾಗ್ಯೂ, ಅವರಲ್ಲನೇಕರು ಆ ವಿಷಯವಾಗಿ ಕೊರಿಂಥ್ಯರ ವೈರಾಗ್ಯವನ್ನು ಕೇಳಿ ಎಬ್ಬಿಸಲ್ಪಟ್ಟರು.

5. ಮಕೆದೋನ್ಯ ದೇಶದ ಥೆಸ್ಸಲೊನೀಕದವನಾದ ಯಾಸೋನನೂ, ಬೆರೋಯದವನಾದ ಸೋಸಿಪತ್ರನೂ ಪೌಲನ ಸಂಗಡ ಕೊರಿಂಥಕ್ಕೆ ಹೋದರು. (ರೋಮಾ. ೧೬. ೨೧. ಅಪೊ. ಕ್ರಿ. ೧೭. ೫; ೨೦. ೪.)

6. ಇದು ೮ನೇ ಸಂಧಿಯಲ್ಲಿ ಹೇಳಲ್ಪಟ್ಟ ತೀತನನ್ನೂ ಬೇರೆ ಇಬ್ಬರು ಸಹೋದರರನ್ನೂ ಕುರಿತದ್ದು. ಕೊರಿಂಥದ ಸಭೆಯವರಿಗೆ ಇವರ ವಶದಲ್ಲಿಯೇ ಈ ಪತ್ರಿಕೆ ಕಳುಹಿಸಲ್ಪಟ್ಟಿತು.

7. ಈ ಧರ್ಮಕ್ಕೆ ಇಲ್ಲಿ "ಆಶೀರ್ವಾದ" ಎಂಬದಾಗಿಯೂ, ೮. ೧ಲ್ಲಿ "ಕೃಪೆ" ಎಂಬದಾಗಿಯೂ ಶ್ರೇಷ್ಠ ಹೆಸರುಗಳು ಹೇಳಲ್ಪಟ್ಟಿವೆ. ಆ ಕೃಪೆಯ ಹಾಗೆಯೇ ಈ ಆಶೀರ್ವಾದವೂ ದೇವರಿಂದ ಬಂದದ್ದಾಗಿಯೂ, ಎಲ್ಲಾ ಕೊರತೆಗಳನ್ನು ಪರಿಹರಿಸಿ ಸಂಪೂರ್ಣತ್ವವನ್ನುಂಟು ಮಾಡುವದಾಗಿಯೂ ಇರುತ್ತದೆ. ಈ ಧರ್ಮವನ್ನು ಕೊರಿಂಥದ ಸಭೆಯವರು ಮಾಡುವದಾಗಿ ಮುಂದಾಗಿ ತಿಳಿಸಿದ್ದರು. ಇದು ಅವರ ಪರೋಪಕಾರಗುಣವನ್ನು ತೋರ ಮಾಡುವ ಆಶೀರ್ವಾದವಾಗಿತ್ತು. (ಉತ್ಪ. ೩೩. ೧೧. ಯೆಹೋಶು. ೧೫. ೧೯. ಸಾಮುತಿ. ೧೧. ೨೫, ೨೬.) ಇದು ಲೋಭಕ್ಕೆ ವ್ಯತಿರಿಕ್ತವಾದ ಗುಣವು. (೬, ೭. ವ.)

8. ವ್ಯಸನದಿಂದಲೂ ಕಡ್ಡಾಯದಿಂದಲೂ ಕೊಟ್ಟರೆ, ಪ್ರಯೋಜನವೇನೂ ಇಲ್ಲ. (ಮತ್ತಾ. ೧೯. ೨೨.) ಉತ್ಸಾಹವಾಗಿ ಕೊಡುವ ಕಾಣಿಕೆಯೇ ದೇವರಿಗೆ ಪ್ರೀತಿಯಾಗಿರುವದು. ಆತನು ಎಲ್ಲಾ ಮೇಲುಗಳಿಗೂ ಬದಲು ಕೊಡುವವನಾಗಿದ್ಧಾನೆ.

9. ಈ ವಚನದಲ್ಲಿ ಎಲ್ಲಾ ಎಂಬುವ ಪದವು ಆಗಾಗ್ಯೆ ಬರುತ್ತದೆ. ನಾನು ನಿನ್ನನ್ನು ಆಶೀರ್ವದಿಸುವೆನು, ನೀನು ಆಶೀರ್ವಾದವಾಗಿರುವಿ ಎಂದು ವಾಗ್ದತ್ತ ಕೊಟ್ಟ ದೇವರು, ತನ್ನ ಆಶೀರ್ವಾದಗಳನ್ನು ಅನುಗ್ರಹಿಸುವಾಗ ಎಲ್ಲಾ ಸಂಪೂರ್ಣವಾಗಿರುವದು. ಧಾರಾಳವಾಗಿ ಕೊಡುವ ಗುಣವು ಸಹ ಉಂಟಾಗುವದು. (೮. ೧. ವಚನದ ವ್ಯಾಖ್ಯಾನ ನೋಡ ಬೇಕು.) ಆಗ ಕೀರ್ತ. ೧೧೨. ೯. ವಚನದಲ್ಲಿರುವ ಉದಾರ ಗುಣಕ್ಕೆ ತಕ್ಕ ಕ್ರಿಯೆಯೂ ಪ್ರಯೋಜನವೂ ಪೂರ್ಣವಾಗುವದು. ಉದಾರ ಗುಣವು ನಿತ್ಯವಾದ ನೀತಿಗೆ ಗುರುತಾಗಿದೆ. ಇದು ನೀತಿನಿರ್ಣಯಿಸುವದರಿಂದ ಉತ್ಪತ್ತಿಯಾಗಿ ಮಹಿಮೆ ಪಡಿಸುವ ನೀತಿಯಲ್ಲಿ ಮುಗಿಯುವದರಿಂದ ಎಂದೆಂದಿಗೂ ನೆಲೆಯಾಗಿರುವದು.

೧೦ ಆದರೆ ನಮ್ಮ ಮುಖಾಂತರ ದೇವರಿಗೆ ಸ್ತೋತ್ರವನ್ನು ಉಂಟು ಮಾಡುವ ಎಲ್ಲಾ [1]ಉದಾರತ್ವಕ್ಕಾಗಿ ಎಲ್ಲಾ
೧೧ ದರಲ್ಲಿ ನೀವು ಐಶ್ವರ್ಯವಂತರಾಗುವ ಹಾಗೆ, ಬಿತ್ತುವವನಿಗೆ ಬೀಜವನ್ನು ತಂದು ಕೊಡುವವನು, ಉಣ್ಣು
ವದಕ್ಕೆ ರೊಟ್ಟಿಯನ್ನು ತಂದು, ನೀವು ಬಿತ್ತಿದ್ದನ್ನು ಹೇರಳ ಮಾಡಿ, ನಿಮ್ಮ [2]ನೀತಿಯ ಬೆಳೆಗಳನ್ನು ವೃದ್ಧಿ ಮಾ
೧೨ ಡಲಿ. ಯಾಕಂದರೆ [3]ಈ ಧರ್ಮದ ಸೇವೆಯು, ಪರಿಶುದ್ಧರ ಕೊರತೆಗಳನ್ನು ಪೂರೈಸುವದಲ್ಲದೆ, ದೇವರಿಗಾ
೧೩ ಗುವ ಬಹಳ ಸ್ತೋತ್ರಗಳಿಂದ ಸಹ ಹೆಚ್ಚುವದು. ಹ್ಯಾಗಂದರೆ ಈ ಸೇವೆಯ ಅನುಭವದಿಂದ ಕ್ರಿಸ್ತನ ಸು
ವಾರ್ತೆಯನ್ನು ಅರಿಕೆ ಮಾಡುವ ನಿಮ್ಮ ವಿಧೇಯತ್ವಕ್ಕೋಸ್ಕರವೂ, ಅವರಿಗೂ ಎಲ್ಲರಿಗೂ ಧರ್ಮ ಮಾಡುವ
೧೪ ಉದಾರತ್ವಕ್ಕೋಸ್ಕರವೂ, ನಿಮ್ಮಲ್ಲಿರುವ ಅಧಿಕವಾದ ದೇವರ ಕೃಪೆಯ ನಿಮಿತ್ತ ನಿಮ್ಮನ್ನು ಅತ್ಯಾಶಿಸುವ
೧೫ ಅವರು ನಿಮಗೋಸ್ಕರ ಮಾಡುವ ಪ್ರಾರ್ಥನೆಯಿಂದಲೂ, ದೇವರನ್ನು ಮಹಿಮೆ ಪಡಿಸುತ್ತಾರೆ. [4]ಹೇಳಲಾ
ರದ ಅವನ ವರಕ್ಕೋಸ್ಕರ ದೇವರಿಗೆ ಸ್ತುತಿ.

ಪೌಲನು ತಾನು ಅಪೊಸ್ತಲ ಅಧಿಕಾರ ಉಳ್ಳವನೆಂದೂ, ತಾನು ಸ್ಥಾಪಿಸಿದ ಸಭೆಗಳಲ್ಲಿ
ಅಧಿಕಾರ ಸಲ್ಲಿಸ ತಕ್ಕವನೆಂದೂ ನಿರೂಪಿಸಿದ್ದು.

**10.** ಆದರೆ [5]ಮುಖಾಮುಖಿಯಾಗಿ ನಿಮ್ಮಲ್ಲಿ [6]ದೀನನಾಗಿಯೂ, ದೂರದಲ್ಲಿರುವಾಗ, ನಿಮ್ಮ ಮೇಲೆ
ಧೈರ್ಯ ತೋರಿಸುವವನಾಗಿಯೂ, ಇರುವ ಪೌಲನೆಂಬ ನಾನೇ [7]ಕ್ರಿಸ್ತನ ತಾಳ್ಮೆ ಸಾತ್ವಿಕತ್ವಗಳ ನಿಮಿತ್ತ
೨ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಆದರೆ ನಮ್ಮನ್ನು ಮಾಂಸದ ಪ್ರಕಾರ ನಡೆದು ಕೊಳ್ಳುವವರಂತೆ [8]ಎಣಿಸು

1. (ರೋಮಾ. ೧೨. ೮. ವಚನದ ವ್ಯಾಖ್ಯಾನ ನೋಡ ಬೇಕು.) ಬಿತ್ತುವವನಿಗೆ ಬಹಳ ಫಲವುಂಟಾಗುವ ಪ್ರಕಾರ ಉದಾರವಾಗಿ ಕೊಡುವವನಿಗೆ ಅಧಿಕ ಸಂಪತ್ತು ಉಂಟಾಗುವದು. ಸಭೆಗಳಿಗೆ ಇಂಥಾ ಸಂಪತ್ತು ಉಂಟಾದದರಿಂದ ಪೌಲನು ದೇವರನ್ನು ಬಹಳವಾಗಿ ಸ್ತುತಿಸ ಕಾರಣವಾಯಿತು.

2. ಪೌಲನು ಬೀಜದ ಉಪಮಾನದಿಂದ ಈ ವಚನಗಳಲ್ಲಿರುವ ಬೋಧನೆ ಹೇಳುತ್ತಾನೆ. ಧರ್ಮವೆಂಬ ಬೀಜವನ್ನು ಬಿತ್ತ ತಕ್ಕ ಶಕ್ತಿಯನ್ನೂ, ಕೃಪೆಯಾದ ಅದರ ಫಲವನ್ನೂ ಕೊಡುವವನು ದೇವರೇ.

3. ೧೨–೧೪. ವಚನಗಳ ವರೆಗಿರುವ ಅಭಿಪ್ರಾಯವು ಸ್ವಲ್ಪ ಕಠಿಣವಾಗಿದ್ದರೂ, ಹೀಗೆ ಅದನ್ನು ವಿವರಿಸ ಬಹುದು; ಹ್ಯಾಗಂದರೆ, ನಿಮ್ಮ ಧರ್ಮಕೆಲಸದಿಂದ ದೇವರ ಜನರ ಕೊರತೆ ನಿವರ್ತಿ ಆಗುವದಾಯಿತು. ಮತ್ತು ಅವರ ಕೃತಜ್ಞತೆಯಿಂದ ದೇವರಿಗೆ ಬಹಳ ಸ್ತೋತ್ರವಾಯಿತು. ನೀವು ಸುವಾರ್ತೆಗೆ ಒಳಪಟ್ಟು ನಡಿಯುವದನ್ನೂ, ಅವರ ವಿಷಯವಾಗಿ ತೋರಿದ ನಿಮ್ಮ ಉದಾರ ಗುಣವನ್ನೂ ಅವರು ಕಂಡು, ದೇವರನ್ನು ಮಹಿಮೆ ಪಡಿಸುತ್ತಾರೆ. ಮತ್ತು ನಿಮ್ಮ ಪ್ರೀತಿಯಿಂದ ಪ್ರೇರಿಸಲ್ಪಟ್ಟು ನಿಮಗೋಸ್ಕರ ಪ್ರಾರ್ಥಿಸುವದರಿಂದಲೂ ದೇವರನ್ನು ಮಹಿಮೆ ಪಡಿಸುವರು ಎಂಬುವದೇ ಈ ವಚನಗಳ ತಾತ್ಪರ್ಯವು.

4. ಪೌಲನು ಇದಕ್ಕೆ ಮುಂಚೆ ಕ್ರಿಸ್ತನು ತನ್ನನ್ನು ತಾನೇ ಒಪ್ಪಿಸಿ ಕೊಟ್ಟ ಆಶ್ಚರ್ಯವಾದ ವರವನ್ನು ಕುರಿತು ಹೇಳಿದ್ದಾನೆ. (೮. ೯.) ಈಗ ತಂದೆಯು ತನ್ನ ಮಗನನ್ನು ಒಪ್ಪಿಸಿ ಕೊಟ್ಟ ಹೇಳಲಸಾಧ್ಯವಾದ ವರವನ್ನು ಕುರಿತು ಹೇಳುತ್ತಾನೆ. (ರೋಮಾ. ೮. ೩೨.) ಇದು ಹೇಳಲಾರದ ವರವಾಗಿದೆ; ಮನೋವಾಕ್ಕಿಗೆ ನಿಲುಕದ ಆಶ್ಚರ್ಯವಾದದ್ದೇ ಸರಿ. ಈ ಶ್ರೇಷ್ಠ ವರಕ್ಕಾಗಿ ಪರಮ ತಂದೆಯನ್ನು ಅತ್ಯಂತ ಭಕ್ತಿಯಿಂದ ಸ್ತುತಿಸ ಬೇಕು; ಮತ್ತು ಆತನ ದಾಸರನ್ನು ಸ್ನೇಹಿಸಿ ಅವರಿಗೆ ಮೇಲು ಮಾಡ ಬೇಕು.

5. ಪತ್ರಿಕೆಯ ಈ ಮೂರನೇ ಭಾಗದಲ್ಲಿ ಪೌಲನು ತನ್ನ ಎದುರಾಳಿಗಳು ಆಕ್ಷೇಪಿಸ ಕೂಡದ ರೀತಿಯಾಗಿ ತಾನು ಸರಿಯಾಗಿ ಅಪೊಸ್ತಲ ಅಧಿಕಾರ ಉಳ್ಳವನೆಂದು ಸ್ಥಾಪಿಸುತ್ತಾನೆ. ಸಮಯಕ್ಕೆ ತಕ್ಕ ಹಾಗೆ ಸಲ್ಲಿಸ ತಕ್ಕ ವೈದಿಕ ಅಧಿಕಾರವು ತನಗುಂಟೆಂದೂ, (೧೦. ೧–೬.) ಅದು ಅವರು ನೆನಸಿದ್ದಕ್ಕಿಂತ ಮೇಲಾದದ್ದೆಂದೂ, (೭–೧೧. ವ.) ಆದರೂ ಶತ್ರುಗಳ ಹಾಗೆ ತಾನು ತನಗೆ ಸ್ವಂತವಲ್ಲದ ವಿಷಯಗಳನ್ನು ಕುರಿತು ಹೆಚ್ಚಳ ಪಡುವದಿಲ್ಲವೆಂದೂ ಹೇಳುತ್ತಾನೆ. (೧೨–೧೮. ವ.) ತನ್ನಿಂದ ಗುಣ ಪಟ್ಟವರ ಮೇಲನ್ನು ಕೋರಿ, ತನ್ನನ್ನು ಕುರಿತೂ, ತಾನು ಮಾಡಿದ ಕಾರ್ಯಗಳನ್ನು ಕುರಿತೂ, ಮಾತಾಡ ಬೇಕಾದದರಿಂದ ತನಗುಂಟಾದ ಕ್ಲೇಶವನ್ನು ತಿಳಿಸಿ, (೧೧. ೧–೪.) ತನ್ನ ಯಥಾರ್ಥತ್ವವನ್ನು ಅವರಿಗೆ ಜ್ಞಾಪಕ ಪಡಿಸಿ, (೫–೧೫. ವ.) ತನಗುಂಟಾದ ಕಷ್ಟಗಳನ್ನೂ ಉಪದ್ರಗಳನ್ನೂ ಕುರಿತು ಹೇಳುತ್ತಾನೆ. (೧೬–೩೩.ವ.) ತರುವಾಯ ತನಗೆ ಅನುಗ್ರಹಿಸಲ್ಪಟ್ಟ ದೇವದರ್ಶನಗಳನ್ನು ಕುರಿತು ಹೇಳಿ, (೧೨. ೧–೬.) ಅವುಗಳಿಂದ ತಾನು ಗರ್ವ ಪಡದ ಹಾಗೆ ತನಗೆ ಒಂದು ಸಂಕಟ ಉಂಟಾಗಿತ್ತೆಂದೂ, ಆ ಸಂಕಟವನ್ನು ಸಹಿಸ ತಕ್ಕದ್ದಕ್ಕೆ ದೇವಾನುಗ್ರಹವಾಯಿತೆಂದೂ ಹೇಳಿ, (೬–೧೦.ವ.) ಕಡೆಯಲ್ಲಿ ತನ್ನನ್ನು ಕುರಿತು ಮೆಚ್ಚಿಗೆಯಾಗಿ ಮಾತಾಡಿದ್ದು ತಪ್ಪಾಗಿದ್ದರೆ ಅದು ತನ್ನ ಅಪರಾಧವಾಗಿರದೆ, ತಾನು ಹೀಗೆ ಮಾತಾಡ ಪ್ರೇರೇಪಿಸಿದವರ ಅಪರಾಧವೆಂದು ತೋರಿಸುತ್ತಾನೆ. (೧೧–೧೩. ವ.)

6. ಶತ್ರುಗಳ ಮಾತನ್ನು ಹಿಡಿದು ಪೌಲನು ಹೀಗೆ ಹೇಳುತ್ತಾನೆಂದು ತೋರುತ್ತದೆ. (೧೦. ವ. ೧ಕೊರಿ. ೨. ೩; ೬. ೬.)

7. ನನ್ನ ಕರ್ತನಾದ ಯೇಸು ತಾನೇ ಶಾಂತವೂ ದಯವೂ ಉಳ್ಳವನಾಗಿರಲಾಗಿ, ಆತನ ದಾಸನಾದ ನಾನು ಕ್ರೂರನೂ ಕಠಿಣನೂ ಆಗುವ ಹಾಗೆ ಮಾಡ ಬೇಡಿರೆಂದು ಪೌಲನು ಅವರನ್ನು ಬೇಡಿ ಕೊಳ್ಳುತ್ತಾನೆ.

8. ಮಾಂಸದ ಪ್ರಕಾರ ಅಥವಾ ಲೋಕಾಚಾರದ ಪ್ರಕಾರ ನಾವು ನಡಿಯುತ್ತೇವೆಂದು ಕೆಲವರು ನೆನಸುವರು. ನಮ್ಮನ್ನು ಕುರಿತ ಅವರ ಅಭಿಪ್ರಾಯವು ಸರಿಯಲ್ಲವೆಂದು ತೋರಿಸುವದಕ್ಕೆ ಅಧಿಕಾರದಿಂದ ಅವರಿಗೆ ಹೇಳುವೆವು, ಅನ್ನುತ್ತಾನೆ.



ವವರಾದ ಕೆಲವರ ಮೇಲೆ ಧೈರ್ಯವಾಗಿರ ಬೇಕೆಂದು, ನಿಶ್ಚಯಿಸಿ ಕೊಂಡ ದೃಢದಿಂದ, ನಾನು ಬಂದು
ಧೈರ್ಯ ಪಡದ ಹಾಗೆ, ಬೇಡಿ ಕೊಳ್ಳುತ್ತೇನೆ.
೩ ಯಾಕಂದರೆ ನಾವು ಮಾಂಸದಲ್ಲಿ ನಡೆದು ಕೊಳ್ಳುವವರಾಗಿದ್ದರೂ, ಮಾಂಸದ ಪ್ರಕಾರ [1]ಯುದ್ಧ ಮಾಡು
೪ ವದಿಲ್ಲ. ಯಾಕಂದರೆ ನಮ್ಮ ಯುದ್ಧದ ಆಯುಧಗಳು ಮಾಂಸದವುಗಳಲ್ಲ, ದುರ್ಗಗಳನ್ನು ಕೆಡವಿ ಹಾಕು
೫ ವದಕ್ಕೆ ದೇವರಲ್ಲಿ ಬಲವಾಗಿವೆ. ನಾವು ಯೋಚನೆಗಳನ್ನೂ, ದೇವರ ತಿಳುವಿಕೆಗೆ ವಿರೋಧವಾಗಿ ಎದ್ದು
ಬರುವ ಎಲ್ಲಾ ಎತ್ತರವಾದವುಗಳನ್ನೂ ಕೆಡವಿ ಹಾಕಿ, ಎಲ್ಲಾ ಬುದ್ಧಿಯನ್ನು ಕ್ರಿಸ್ತನ ವಿಧೇಯತ್ವಕ್ಕೆ ಶೆರೆ ಹಿ
೬ ಡಿದು, ನಿಮ್ಮ ವಿಧೇಯತ್ವವು ಸಂಪೂರ್ಣವಾದಾಗ, ಎಲ್ಲಾ ಅವಿಧೇಯತ್ವಕ್ಕೆ ಮುಯ್ಯಿಗೆ ಮುಯ್ಯಿ ತೀರಿಸ
ಸಿದ್ಧವಾಗಿದ್ದೇವೆ.
೭ [2]ಮುಖದ ಮುಂದಿನವುಗಳನ್ನು ನೋಡಿ ಕೊಳ್ಳುತ್ತೀರೋ? ಯಾವನಾದರೂ ತಾನು ಕ್ರಿಸ್ತನವನೆಂದು ನಂಬಿ
ಕೊಂಡರೆ, ತಾನು ಕ್ರಿಸ್ತನವನು ಹ್ಯಾಗೋ, ಹಾಗೆಯೇ ನಾವೂ ಕ್ರಿಸ್ತನವರೆಂದು, ಮತ್ತೂ ತನ್ನಲ್ಲಿ ಎಣಿಸಿ
ಕೊಳ್ಳಲಿ.
೮ ಯಾಕಂದರೆ ನಿಮ್ಮನ್ನು ಕೆಡವಿ ಹಾಕುವದಕ್ಕಲ್ಲ, ಕಟ್ಟುವದಕ್ಕೆ ಕರ್ತನು ನಮಗೆ ಕೊಟ್ಟ ನಮ್ಮ ಅಧಿಕಾರ
೯ ದ ವಿಷಯ [3]ಸ್ವಲ್ಪ ಹೆಚ್ಚಾಗಿ ಹೆಚ್ಚಳ ಪಟ್ಟರೂ, ನಾಚಿಕೆ ಪಡೆನು. ನಾನು [4]ಪತ್ರಿಕೆಗಳಿಂದ ನಿಮ್ಮನ್ನು ಹೆದ
೧೦ ರಿಸ ಬೇಕಾದವನಾಗಿ ಕಾಣಿಸಲೊಲ್ಲೆನು. ಅವನ ಪತ್ರಿಕೆಗಳು ಭಾರವಾಗಿಯೂ ಬಲವಾಗಿಯೂ ಅವೆ,
೧೧ ಸರಿ; ಆದರೆ ಶರೀರದ ಸನ್ನಿಧಿಯು ತ್ರಾಣವಿಲ್ಲದ್ದೂ, ವಾಕ್ಯವು ಅಲ್ಪವಾದದ್ದೂ, [5]ಅನ್ನುತ್ತಾನಲ್ಲ. ಇಂಥವ
ನು, ನಾವು ಮಾತಿನಲ್ಲಿ ಪತ್ರಿಕೆಗಳಿಂದ ದೂರದಲ್ಲಿ ಎಂಥವರಾಗಿದ್ದೇವೋ, ಅಂಥವರಾಗಿಯೇ ಸಮೀಪವಾಗಿ
ಕ್ರಿಯೆಯಲ್ಲಿ ಇದ್ದೇವೆಂದು, ತಿಳುಕೊಳ್ಳಲಿ.
೧೨ ಯಾಕಂದರೆ ತಮ್ಮನ್ನು ಪ್ರತಿಷ್ಠೆ ಮಾಡಿ ಕೊಳ್ಳುವ [6]ಕೆಲವರಿಗೆ ನಮ್ಮನ್ನು ಶೇರಿಸಿ ಕೊಳ್ಳುವದಕ್ಕಾದರೂ,
ಹೋಲಿಸಿ ಕೊಳ್ಳುವದಕ್ಕಾದರೂ, ನಾವು ಧೈರ್ಯವಾಗಿರುವದಿಲ್ಲ; ಆದರೆ ಅವರು ತಮ್ಮಲ್ಲಿ ತಮ್ಮನ್ನು ಅಳೆ
೧೩ ದು ಕೊಂಡು, ತಮಗೆ ತಮ್ಮನ್ನು ಹೋಲಿಸಿ ಕೊಂಡು, ತಿಳಿಯದವರಾಗಿದ್ದಾರೆ. ಆದರೆ [7]ನಾವು ಅಮಿತ

1. ಮಾಂಸದೇಹಿಗಳಾದ ನಾವು ಈ ಶರೀರವೆಂಬ ಗುಡಾರದಲ್ಲಿ ವಾಸ ಮಾಡುವಾಗ ಒಂದಾವರ್ತಿ ಮಾಂಸಕ್ಕೆ ಸಮ್ಮಂಧಪಟ್ಟವರಾಗಿ ನಡಿಯ ಬೇಕಾಗಿದ್ದರೂ, ಮಾಂಸಗುಣಗಳಾದ ಪಾಪದ ಸಂಗಡ ಹೋರಾಡುವಲ್ಲಿ ಆ ಪ್ರಕಾರ ನಡಿಯುವವರಲ್ಲ. ನಮ್ಮ ಆಯುಧಗಳು ಮಾಂಸದ ಬಲಹೀನವಾದ ಆಯುಧಗಳಲ್ಲ. ಅವು ಸಕಲ ಶತ್ರುಗಳನ್ನು ಜಯಿಸಿ, ಸಕಲ ತಡೆಗಳನ್ನು ತೊಲಗಿಸಿ, ಸಕಲ ಗರ್ವವಾದ ಗುಣಗಳನ್ನು ತಗ್ಗಿಸಿ, ಜಯಶೀಲನಾದ ಯೇಸುವಿಗೆ ಒಳಪಡಿಸ ತಕ್ಕ ದಿವ್ಯ ಬಲವುಳ್ಳ ಆಯುಧಗಳಾಗಿವೆ, ಅನ್ನುತ್ತಾನೆ. ಅವಿಧೇಯತ್ವವೂ ಗರ್ವವೂ ಉಳ್ಳ ಕೊರಿಂಥ್ಯರಲ್ಲಿ ಕೆಲವರಿಗೆ ಈ ವಾಕ್ಯಗಳು ಅಂಬುಗಳ ಹಾಗೆ ತಗಲುವವು.

2. ಪೌಲನ ಶತ್ರುಗಳು ತಾವು ಅನೇಕ ಸ್ವಾತಂತ್ರ್ಯಗಳನ್ನು ಹೊಂದಿದವರೆಂದು ಹೆಚ್ಚಳ ಪಟ್ಟರು. (೧. ವ.) ಅದರಿಂದ ಪೌಲನು ತಾನು ಸಹ ಆ ವಿಷಯದಲ್ಲಿ ಅವರಿಗೆ ಮೇಲಾದವನೇ ಹೊರ್ತು ಕಡಿಮೆಯಾದವನಲ್ಲವೆಂದು ತೋರಿಸುತ್ತಾನೆ.

3. ತಾನು ಕ್ರಿಸ್ತನಿಂದ ಹೊಂದಿದ ಅಧಿಕಾರವನ್ನು ಕುರಿತು ಮುಂಚೆ ಹೇಳಿದ್ದಕ್ಕಿಂತ ಅಧಿಕವಾಗಿ ಹೇಳ ಮನಸ್ಸುಳ್ಳವನಾದರೂ, ಅವರಿಗೆ ಭಯವನ್ನು ಉಂಟು ಮಾಡುವದಕ್ಕಲ್ಲ, ಅವರ ಕ್ಷೇಮವನ್ನು ಕೋರುವವನಾಗಿದ್ದದರಿಂದ ಅದನ್ನು ಕುರಿತು ವಿಸ್ತಾರವಾಗಿ ಹೇಳಲಿಲ್ಲ. (೯. ವ.)

4. ಪತ್ರಿಕೆಗಳೆಂಬುವದು ಮೊದಲನೇ ಪತ್ರಿಕೆಯನ್ನೂ ಈ ಎರಡನೇ ಪತ್ರಿಕೆಯನ್ನೂ ಸೂಚಿಸುತ್ತದೆ. (೧ಕೊರಿ. ೫. ೯. ವಚನದ ವ್ಯಾಖ್ಯಾನ ನೋಡ ಬೇಕು.)

5. ಇದು ೧೧ನೇ ವಚನದಲ್ಲಿ ಹೇಳಿದ ಎದುರಿಗಳಲ್ಲಿ ಮುಖ್ಯಸ್ಥನನ್ನಾದರೂ, ೭ನೇ ವಚನದಲ್ಲಿ ಹೇಳಿದ ಮನುಷ್ಯನನ್ನಾದರೂ ಕುರಿತದ್ದು. ಈ ವಚನದ ಆಧಾರದಿಂದ ಕೆಲವರು, ಪೌಲನು ಅಂಗಗಳಲ್ಲಿ ಊನವುಳ್ಳವನೆಂದೂ, ಚಾತುರ್ಯ ಮಾತಿನವನಲ್ಲವೆಂದೂ ನೆನಸುತ್ತಾರೆ. ಶತ್ರುಗಳ ನಿಂದೆಯಾದ ಮಾತುಗಳಿಂದ ಹೀಗೆ ನೆನಸುವದು ಸರಿಯಲ್ಲ. ಅವನು ತನ್ನ ವಿಷಯ ಹೇಳಿದ ಸಂಗತಿಯಿಂದ ಇದು ಸ್ಪಷ್ಟವಾಗಿ ತೋರುತ್ತದೆ. (೧ಕೊರಿ. ೨. ೩.)

6. ನಾವು ಧೈರ್ಯಶಾಲಿಗಳಾಗಿದ್ದರೂ, ಸ್ವಂತ ಹೊಗಳಿಕೆಯುಳ್ಳ ಶತ್ರುಗಳ ಹಾಗೆ ಧೈರ್ಯ ಪಡುವದಿಲ್ಲ. ಅವರು ತಮ್ಮ ಅಧಿಕಾರವನ್ನೂ ಪ್ರಯಾಸಗಳನ್ನೂ ಕುರಿತು ತಾವೇ ನಿಧಾನಿಸಿ ಕೊಂಡು ತಮ್ಮನ್ನು ತಾವೇ ಮೆಚ್ಚಿ ಕೊಳ್ಳುತ್ತಾರೆ. ಇದು ಅವಿವೇಕವಾಗಿದೆ. ನಾವಾದರೆ ದೇವರು ನಮಗೆ ಕಟ್ಟಳೆ ಇಟ್ಟ ಕೆಲಸವನ್ನು ದಿವ್ಯ ಅಳತೆಯಿಂದ ಅಳೆದು ನಿಧಾನಿಸಿ ಅದನ್ನು ಕುರಿತು ಹೆಚ್ಚಳ ಪಡುತ್ತೇವೆ. ನೀವು ಸಹ ಆ ದಿವ್ಯ ಕೆಲಸಕ್ಕೆ ಶೇರಿದವರಾಗಿದ್ದೀರಿ, ಅನ್ನುತ್ತಾನೆ.

7. ದೇವರು ಕಟ್ಟಳೆ ಇಟ್ಟಿರುವ ಅಳತೆಗೆ ಮಿಂಚಿ ನಾವು ಏನೂ ಮಾಡುವದಿಲ್ಲ. ಶತ್ರುಗಳ ಹಾಗೆ ಬೇರೊಬ್ಬರು ಮಾಡಿದ ಕೆಲಸವನ್ನು ನಾವೇ ಮಾಡಿದೆವೆಂದು ನಮ್ಮನ್ನು ಮೆಚ್ಚಿ ಕೊಳ್ಳುವದಿಲ್ಲ, ಅನ್ನುತ್ತಾನೆ. (೧೫. ವ.)

ವಾದವುಗಳ ವರೆಗೆ ಅಲ್ಲ, ನಿಮ್ಮ ಪರ್ಯಂತರಕ್ಕೂ ಮುಟ್ಟುವ ಮಿತಿಯನ್ನು ದೇವರು ನಮಗೆ ಹಂಚಿದ ಕಟ್ಟ
೧೪ ಳೆಯ ಮಿತಿಯ ಪ್ರಕಾರ ಹೆಚ್ಚಳ ಪಡುವೆವು. ಹ್ಯಾಗಂದರೆ ನಿಮ್ಮ ಪರ್ಯಂತರ ಮುಟ್ಟದವರಂತೆ ನಮ್ಮನ್ನು
ನಾವೇ ಹೆಚ್ಚಾಗಿ ಉದ್ದ ಮಾಡಿ ಕೊಳ್ಳುವದಿಲ್ಲ; ಯಾಕಂದರೆ ಕ್ರಿಸ್ತನ ಸುವಾರ್ತೆಯಲ್ಲಿ [1]ನಿಮ್ಮ ಪರ್ಯಂತ
೧೫ ರಕ್ಕೂ ಬಂದೆವು. ಮತ್ತೊಬ್ಬರ ಕಷ್ಟಗಳಲ್ಲಿ ಅಮಿತವಾಗಿ ಹೆಚ್ಚಳ ಪಡೆವು. ನಿಮ್ಮ ವಿಶ್ವಾಸವು ಹೆಚ್ಚುವಾ
೧೬ ಗ, ನಮ್ಮ ಕಟ್ಟಳೆಯ ಪ್ರಕಾರ ಅತ್ಯಧಿಕವಾಗಿ ನಿಮ್ಮಲ್ಲಿ ಮಹಿಮೆ ಪಡಲೂ, [2]ನಿಮ್ಮ ಆಚೆಯ ಪರ್ಯಂತರ
ಸುವಾರ್ತೆ ಪ್ರಸಂಗಿಸಲೂ, ಬೇರೊಬ್ಬರ ಕಟ್ಟಳೆಯಲ್ಲಿ ಸಿದ್ಧ ಮಾಡಿದವುಗಳಿಗೋಸ್ಕರ ಹೆಚ್ಚಳ ಪಡದೆ ಇರಲೂ,
೧೭, ೧೮ ನಿರೀಕ್ಷಿಸುತ್ತೇವೆ. ಆದರೆ ಹೆಚ್ಚಳ ಪಡುವವನು ಕರ್ತನಲ್ಲಿ ಹೆಚ್ಚಳ ಪಡಲಿ. ಯಾಕಂದರೆ ತನ್ನನ್ನು
ಪ್ರತಿಷ್ಠೆ ಮಾಡಿ ಕೊಳ್ಳುವವನಲ್ಲ, ಕರ್ತನು ಪ್ರತಿಷ್ಠೆ ಮಾಡುವವನೇ ಪರೀಕ್ಷಿತನಾಗಿದ್ಧಾನೆ.

### ಕಳ್ಳಬೋಧಕರ ಹೆಚ್ಚಳವನ್ನೂ ನಿಂದೆಯನ್ನೂ ನಿವರ್ತಿಸುವದಕ್ಕೆ ಪೌಲನು ತನ್ನ ಶ್ಲಾಘ್ಯಗಳನ್ನೂ ಪ್ರಯಾಸಗಳನ್ನೂ ಹೇಳಿ ತೋರಿಸಿದ್ದು.

11. ನನ್ನನ್ನು ಬುದ್ಧಿಹೀನತ್ವದಲ್ಲಿ ಸ್ವಲ್ಪ ಸಹಿಸಿದರೆ, ಉತ್ತಮ; ಹೌದು, ನನ್ನನ್ನು [3]ಸಹಿಸಿರಿ. (೨) ಯಾಕಂದರೆ
ದಿವ್ಯ ಆಸಕ್ತಿಯಿಂದ ನಿಮ್ಮ ಮೇಲೆ ಆಸಕ್ತಿ ಪಡುತ್ತೇನೆ. ಯಾಕಂದರೆ [4]ನಿಮ್ಮನ್ನು ಶುದ್ಧ ಕನ್ಯೆಯಾಗಿ
೩ ಕ್ರಿಸ್ತನೆಂಬ ಒಬ್ಬನೇ ಗಂಡನಿಗೆ ತಂದು ಕೊಡುವದಕ್ಕೆ ನೇಮಕ ಮಾಡಿದ್ಧೇನೆ. ಆದರೆ ಸರ್ಪವು ತನ್ನ ತಂತ್ರ
ದಿಂದ ಹವ್ವಳಿಗೆ ಮೋಸ ಮಾಡಿದ ಹಾಗೆ, ನಿಮ್ಮ ಮನಸ್ಸುಗಳು, ಕ್ರಿಸ್ತನಿಗಾಗಿರುವ ಯಥಾರ್ಥವನ್ನು ಬಿಟ್ಟು,
೪ ಕೆಟ್ಟು ಹೋದಾವೆಂದು, ಭಯ ಪಡುತ್ತೇನೆ. ಹ್ಯಾಗಂದರೆ ಬರುವವನು, ನಾವು ಸಾರದೆ ಇದ್ದ ಬೇರೆ ಯೇ
ಸುವನ್ನು ಸಾರಿದರೆ, ಇಲ್ಲವೆ ನೀವು ಹೊಂದದೆ ಇದ್ದ ಬೇರೆ ಆತ್ಮವನ್ನು ಹೊಂದಿದರೆ, ಇಲ್ಲವೆ ನೀವು ಅಂಗೀಕ
೫ ರಿಸದೆ ಇದ್ದ ಬೇರೆ ಸುವಾರ್ತೆಯನ್ನು ಅಂಗೀಕರಿಸಿದರೆ, [5]ಚನ್ನಾಗಿ ಸಹಿಸಿರುವಿರಿ. ಏನಂದರೆ ಅತಿ ಶ್ರೇಷ್ಠ ಅ
೬ ಪೊಸ್ತಲರಿಗಿಂತ ನಾನು ಎಷ್ಟು ಮಾತ್ರ ಕಡಿಮೆಯಾದವನಲ್ಲವೆಂದು ನೆನಸುತ್ತೇನೆ. ನಾನು ವಾಕ್ಯದಲ್ಲಿ ಕಲಿ
ಯದವನಾಗಿದ್ದರೂ, ತಿಳುವಿಕೆಯಲ್ಲಿ ಕಲಿಯದವನಲ್ಲ; ಆದರೆ ಎಲ್ಲಾದರಲ್ಲಿ ನಿಮಗೆ ಪೂರ್ಣವಾಗಿ ಪ್ರಸಿದ್ಧಿ
ಯಾಗಿದ್ಧೇವೆ.

1. ನಿಮ್ಮ ಪರ್ಯಂತರ ಎಂಬುವದಕ್ಕೆ ಮೂಲ ಭಾಷೆಯ ಪ್ರಕಾರ ನಿಮಗೆ ಮೊದಲು ಎಂಬ ತಾತ್ಪರ್ಯವಾಗುತ್ತದೆ. ಕೊರಿಂಥ ಪಟ್ಟಣದಲ್ಲಿ ಪೌಲನೇ ಮೊದಲಾಗಿ ಸುವಾರ್ತೆಯನ್ನು ಪ್ರಸಂಗಿಸಿದವನು.

2. ನಮ್ಮ ಕೋರಿಕೆಯ ಪ್ರಕಾರ ನಿಮಗೆ ವಿಶ್ವಾಸವೂ ಭಕ್ತಿಯೂ ಅಭಿವೃದ್ಧಿಯಾಗುವಾಗ, ನಿಮಗೆ ದೂರವಾದ ದೇಶಗಳಲ್ಲಿ ಸತ್ಯ ಮಾರ್ಗವನ್ನು ಪ್ರಬಲ ಮಾಡುವದಕ್ಕೆ ನಮ್ಮ ಭಕ್ತಿವಿಶ್ವಾಸವು ವೃದ್ಧಿಯಾಗುವದೆಂದು ಹೇಳುತ್ತಾನೆ. (ರೋಮಾ. ೧೫. ೨೮, ೨೯.) ನಮ್ಮ ಶತ್ರುಗಳಾದರೆ, ಬೇರೊಬ್ಬರು ಕಷ್ಟ ಪಟ್ಟದ್ದರಲ್ಲಿ ತೃಪ್ತಿಯಾಗಿ ತಮ್ಮಿಂದಲೇ ಅದು ಆಯಿತೆಂದು ಹೆಚ್ಚಳ ಪಡುತ್ತಾರೆ. ಹೆಚ್ಚಳ ಪಡುವವನು ದೇವರನ್ನು ಕುರಿತು ಹೆಚ್ಚಳ ಪಟ್ಟು, ಆತನಿಂದ ಬರುವ ಹೊಗಳಿಕೆಯನ್ನು ಕೋರಿ ನಡಿಯ ಬೇಕೇ ಹೊರ್ತು, ಮನುಷ್ಯರನ್ನು ಕುರಿತು ಹೆಚ್ಚಳ ಪಡುವದೂ, ಅವರ ಹೊಗಳಿಕೆಯನ್ನು ಕೋರುವದೂ ಸರಿಯಲ್ಲ, ಅನ್ನುತ್ತಾನೆ.

3. ಪೌಲನು ತನ್ನ ಸ್ವಂತ ಕೆಲಸಗಳನ್ನೂ ಪ್ರಯಾಸಗಳನ್ನೂ ಕುರಿತು ಹೇಳ ಬೇಕಾಗಿ ಸಂಭವಿಸಿದ್ದರಿಂದ ಅದು ಬುದ್ಧಿಹೀನತ್ವವೆಂದೂ, ಅದನ್ನು ಅವರು ಸಹಿಸ ಬೇಕೆಂದೂ ಹೇಳುತ್ತಾನೆ.

4. ನಾನು ನಿಮ್ಮನ್ನು ಆತ್ಮದ ಮದಲಿಂಗನಾದ ಕ್ರಿಸ್ತನಿಗೆ ಶುದ್ಧ ಕನ್ನಿಕೆಯಾಗಿ ತಂದು ಕೊಡ ನಿರ್ಣಯಿಸಿರುವದರಿಂದ ನೀವು ನನ್ನನ್ನು ಸಹಿಸಿ ಕೊಳ್ಳ ಬೇಕು. ಪಿಶಾಚನು ಹವ್ವಳನ್ನು ಶೋಧಿಸಿದ ಪ್ರಕಾರ, ಪಿಶಾಚನ ಮಕ್ಕಳಾದವರು ನಿಮ್ಮನ್ನು ಶೋಧಿಸಿ, ನಿಮ್ಮ ನಾಯಕನಾದ ದೇವರ ಮೇಲಿರುವ ನಿಮ್ಮ ಪ್ರೀತಿಯನ್ನೂ ವಿಶ್ವಾಸವನ್ನೂ ಕೆಡಿಸದಂತೆ ನಿಮಗೋಸ್ಕರ ಚಿಂತೆಯುಳ್ಳವನಾಗಿದ್ಧೇನೆಂದು ಹೇಳುತ್ತಾನೆ. ಕುರಿಮರಿಯ ಮದುವೆಯ ದಿವಸವಾದ ಆ ಮಹಾ ದಿವಸದಲ್ಲಿ ಕ್ರಿಸ್ತನ ದಾಸರಾದ ಒಬ್ಬೊಬ್ಬರನ್ನೂ ಶುದ್ಧ ಕನ್ನಿಕೆಯರಾಗಿ ನಿಲ್ಲಿಸುವದೇ ಉತ್ತಮ ಬೋಧಕರ ಕೆಲಸವಾಗಿದೆ. (ಪ್ರಕಟ. ೧೯. ೭.)

5. ನಿಮಗೆ ಬೋಧಕನಾಗಿ ಬಂದವನು, ನೀವು ಮುಂಚೆ ಕೇಳಿ ಇರದಂಥ ಬೇರೆ ರಕ್ಷಕನನ್ನೂ ಆತ್ಮನನ್ನೂ ಸುವಾರ್ತೆಯನ್ನೂ ಕುರಿತು ನಿಮಗೆ ಪ್ರಸಂಗಿಸಿ ಇದ್ದರೆ, ಅವನನ್ನು ನೀವು ಸಹಿಸಿ ಕೊಳ್ಳುವದು ನ್ಯಾಯವಾಗಿತ್ತು. ಆದರೆ ಕಾರ್ಯವನ್ನು ನೋಡುವಾಗ ಈ ಕಳ್ಳಬೋಧಕರಾದ (೧೩. ವ.) ಮಹಾ ಅಪೊಸ್ತಲರಿಗಿಂತ ನಾನು ಯಾವದರಲ್ಲಿಯೂ ಕಡಿಮೆಯಾದವನಲ್ಲವೆಂದು ತೋರುವದು. ನನಗೆ ಚಾತುರ್ಯವಿದ್ಯೆ ಇಲ್ಲದಿದ್ದಾಗ್ಯೂ (೧ಕೊರಿ. ೨. ೧—೪.) ಸುವಾರ್ತೆಯ ತಿಳುವಿಕೆಯಲ್ಲಿಯೂ, (ಗಲಾ. ೧. ೭, ೮.) ಯೋಗ್ಯವಾದ ನಡತೆಯಲ್ಲಿಯೂ (೬. ವ.) ಕಷ್ಟಗಳಲ್ಲಿಯೂ ಪ್ರಯಾಸಗಳಲ್ಲಿಯೂ, (೨೩—೩೦. ವ.) ನಾನು ಸ್ವಲ್ಪವಾದರೂ ಕಡಿಮೆಯಾದವನಲ್ಲವೆಂದು, ಕಳ್ಳಬೋಧಕರ ಮನಸ್ಸಿಗೂ, ಅವರನ್ನು ಹಿಂಬಾಲಿಸಿದವರ ಮನಸ್ಸಿಗೂ ಅಂಬಿನಂತೆ ಚುಚ್ಚ ತಕ್ಕದ್ದಾಗಿ ಹೇಳುತ್ತಾನೆ.



೭ ಇದಲ್ಲದೆ ನೀವು ಎತ್ತಲ್ಪಡುವ ಹಾಗೆ ನನ್ನನ್ನು [1]ತಗ್ಗಿಸಿ ಕೊಂಡು, ದೇವರ ಸುವಾರ್ತೆಯನ್ನು ಉಚಿತವಾಗಿ
೮ ನಿಮಗೆ ಸಾರಿದ್ದರಿಂದ ಪಾಪ ಮಾಡಿದೆನೋ? ನಿಮ್ಮ ಸೇವೆಗೋಸ್ಕರ ಸಂಬಳ ತಕ್ಕೊಂಡು, ಬೇರೆ ಸಭೆಗಳ
೯ ನ್ನು ಸುಲುಕೊಂಡೆನು; ಮತ್ತು ನಿಮ್ಮ ಬಳಿಯಲ್ಲಿದ್ದು ಕೊರತೆ ಪಡುವವನಾಗಿರಲು, ನಾನು ಯಾವನಿಗಾ
ದರೂ ಭಾರವಾಗಿರಲಿಲ್ಲ. ಯಾಕಂದರೆ ನನ್ನ ಕೊರತೆಯನ್ನು ಮಕೆದೋನ್ಯದಿಂದ ಬಂದ [2]ಸಹೋದರರು
ಪೂರೈಸಿದರು; ಮತ್ತು ಎಲ್ಲಾದರಲ್ಲಿ ನಿಮಗೆ ಭಾರವಾಗದ ಹಾಗೆ, ನನ್ನನ್ನು ಕಾಪಾಡಿ ಕೊಂಡೆನು, ಇನ್ನೂ
೧೦ ಕಾಪಾಡಿ ಕೊಳ್ಳುವೆನು. ಈ ಹೆಚ್ಚಳವು ಅಕಾಯದ ಶೀಮೆಗಳಲ್ಲಿ ನನಗೆ ಅಡ್ಡಿ ಮಾಡಲ್ಪಡುವದಿಲ್ಲವೆಂಬು
೧೧ ವದಕ್ಕೆ ಕ್ರಿಸ್ತನ ಸತ್ಯವು ನನ್ನಲ್ಲಿ ಇರುವದೇ ಸಾಕ್ಷಿ. ಯಾಕೆ? ನಿಮ್ಮನ್ನು ಪ್ರೀತಿ ಮಾಡದೆ ಇರುವದರಿಂದ
೧೨ ಲೋ? ದೇವರು ಬಲ್ಲನು. ಆದರೆ [3]ಆಸ್ಪದ ಅಪೇಕ್ಷಿಸುವವರ ಆಸ್ಪದವನ್ನು ತೆಗೆದು ಹಾಕ ಬೇಕೆಂದೂ,
ಅವರು [4]ಯಾವದರಲ್ಲಿ ಹೆಚ್ಚಳ ಪಡುತ್ತಾರೋ, ಅದರಲ್ಲಿ ನಮ್ಮಂತೆ ಕಾಣಿಸುವ ಹಾಗೆಯೂ, ನಾನು ಮಾ
ಡುವದನ್ನು ಇನ್ನೂ ಮಾಡುವೆನು.
೧೩ ಯಾಕಂದರೆ ಅಂಥವರು ಸುಳ್ಳು ಅಪೊಸ್ತಲರೇ, ಕ್ರಿಸ್ತನ ಅಪೊಸ್ತಲರ ವೇಷಧಾರಿಗಳಾದ ಕಳ್ಳಕೆಲಸದವರೇ.
೧೪, ೧೫ ಅದು ಆಶ್ಚರ್ಯವಲ್ಲ; ಸೈತಾನನು ತಾನೇ ಬೆಳಕಿನ ದೂತನ ವೇಷ ಧರಿಸುತ್ತಾನಲ್ಲ? ಹಾಗಾದರೆ, ಅವನ
ಸೇವಕರು ಸಹ ನೀತಿಯ ಸೇವಕರ ವೇಷ ಧರಿಸುವದು ದೊಡ್ಡದಲ್ಲ—ಅವರ [5]ಅಂತ್ಯವು ಅವರ ಕ್ರಿಯೆಗಳ ಪ್ರ
ಕಾರವಾಗಿರುವದು.
೧೬ [6]ತಿರಿಗಿ ಹೇಳುತ್ತೇನೆ—ನನ್ನನ್ನು ಬುದ್ಧಿಹೀನನೆಂದು ಯಾರೂ ನೆನಸದಿರಲಿ. ಇಲ್ಲವಾದರೆ, ನಾನೂ ಸ್ವಲ್ಪವಾ
೧೭ ದರೂ ಹೆಚ್ಚಳ ಪಡುವ ಹಾಗೆ, ಬುದ್ಧಿಹೀನನೆಂದಾದರೂ, ನನ್ನನ್ನು ಅಂಗೀಕರಿಸಿರಿ. ನಾನು ಮಾತಾಡುವ
ದನ್ನು [7]ಕರ್ತನಿಂದಲ್ಲ, ಬುದ್ಧಿಹೀನನ ಪ್ರಕಾರ ಈ ಹೆಚ್ಚಳದ ದೃಢದಲ್ಲಿ ಮಾತಾಡುತ್ತೇನೆ.
೧೮, ೧೯ ಅನೇಕರು ಮಾಂಸದ ಪ್ರಕಾರ ಹೆಚ್ಚಳ ಪಡುವದರಿಂದ, ನಾನೂ ಹೆಚ್ಚಳ ಪಡುತ್ತೇನೆ. ಯಾಕಂದರೆ
೨೦ ನೀವು ಬುದ್ಧಿಶಾಲಿಗಳಾಗಿದ್ದು, ಬುದ್ಧಿಹೀನರನ್ನು ಸಂತೋಷವಾಗಿ ಸಹಿಸುತ್ತೀರಿ. ಒಬ್ಬನು ನಿಮ್ಮನ್ನು ದಾ
ಸರಾಗ ಮಾಡಿದರೆ, ಒಬ್ಬನು ನಿಮ್ಮನ್ನು ತಿಂದು ಬಿಟ್ಟರೆ, ಒಬ್ಬನು ಅಪಹರಿಸಿದರೆ, ಒಬ್ಬನು ಉಬ್ಬಿ ಕೊಂಡರೆ,

1. ಪೌಲನು ತನ್ನ ಜೀವನಕ್ಕೆ ಬೇಕಾದವುಗಳನ್ನು ತನ್ನ ಕೈಕೆಲಸದಿಂದಲೂ, ಬೇರೆ ಕ್ರೈಸ್ತರ ಸಹಾಯದಿಂದಲೂ ಹೊಂದಿದನೇ ಹೊರ್ತು (ಫಿಲಿ. ೪. ೧೫—೧೮.) ಕೊರಿಂಥದ ಸಭೆಯವರಿಂದ ಏನೂ ಹೊಂದಲಿಲ್ಲ. ಅವರೊಳಗೆ ಅವನು ತನ್ನನ್ನು ತಗ್ಗಿಸಿ ಕೊಂಡ ಹಾಗೆ ಕಳ್ಳಬೋಧಕರು ಮಾಡಲಿಲ್ಲ.

2. ಸಹೋದರರೆಂಬುವದು ಒಂದು ವೇಳೆ ಸೀಲನನ್ನೂ ತಿಮೊಥೆಯನನ್ನೂ ಕುರಿತದ್ದಾಗಿದೆ. (ಅಪೊ. ಕ್ರಿ. ೧೮. ೫.)

3. ಪೌಲನು ಹಣದಾಶೆಯಿಂದ ಸುವಾರ್ತೆ ಪ್ರಸಂಗಿಸುತ್ತಾನೆಂದು ವಿರೋಧಿಗಳು ಅವನ ಮೇಲೆ ಸುಳ್ಳು ಹೇಳ ಪ್ರಾರಂಭಿಸಿದರು. ಆ ಅಪದೂರಿಗೆ ಸ್ಥಳ ಕೊಡದ ಹಾಗೆ ಅವನು ಯಥಾರ್ಥವಾಗಿ ನಡೆದು ಕೊಂಡನು.

4. ಅಪೊಸ್ತಲರು ಹಣಕ್ಕಾಗಿ ಪ್ರಸಂಗಿಸುತ್ತಾರೆಂಬುವದೇ ಶತ್ರುಗಳು ಅವರ ಮೇಲೆ ಅನ್ಯಾಯವಾಗಿ ಹೊರಿಸಿದ ಅಪರಾಧವಾಗಿತ್ತು. ಆ ವಿಷಯದಲ್ಲಿ ಅವರು ಸಹ ತನ್ನ ಹಾಗೆ ಯಥಾರ್ಥವಾಗಿ ನಡಿಯ ಬೇಕೆಂದು ಪೌಲನು ಹೀಗೆ ಹೇಳುತ್ತಾನೆ. ಅವರು ಕಳ್ಳಅಪೊಸ್ತಲರಾಗಿಯೂ ಕಪಟಸೇವಕರಾಗಿಯೂ ಇದ್ದದರಿಂದ, ಮೇಲೆ ಯಥಾರ್ಥವುಳ್ಳವರಾಗಿ ತೋರಿಸಿದರೂ, ಒಳಗೆ ತಮ್ಮ ಸ್ವಪ್ರಯೋಜನವನ್ನು ಹುಡುಕುವವರಾಗಿದ್ದರು. ಉಚಿತವಾಗಿ ಯಾವ ಸೇವೆಯನ್ನೂ ಮಾಡಿದವರಲ್ಲ.

5. ಅಂಧಕಾರಪ್ರಭುವಾದ ಸೈತಾನನು, ಬೆಳಕಿನ ಹಾಗೆ ಪ್ರಕಾಶಿಸುವ ದೇವದೂತರ ಸಭೆಯಲ್ಲಿ ನಿಲ್ಲ ತಕ್ಕಂತೆ ನಡಿಯುವನಾದರೆ, (ಯೋಬ. ೧. ೬; ೨. ೧. ೧ಅರ. ೨೨. ೨೧.) ಅವನ ಸೇವಕರಾದ ಕಳ್ಳಬೋಧಕರು ತಮ್ಮನ್ನು ಒಳ್ಳೆಯವರಾಗಿ ತೋರಿಸುವದು ಆಶ್ಚರ್ಯವಲ್ಲ. ಅವರು ದೇವರಿಗೆ ದಾಸರಾಗಿರದೆ, ಪಿಶಾಚನ ದಾಸರಾಗಿದ್ದು, ಅವನ ಕೆಲಸ ಮಾಡುವದರಿಂದ ಅವನಿಗೆ ಬರುವ ಫಲವೇ ಅವರಿಗೂ ಬರುವದು. (ರೋಮಾ. ೬. ೨೩. ಫಿಲಿ. ೩. ೧೯.)

6. ಮೊದಲನೇ ವಚನದಲ್ಲಿ ಹೇಳಿದ ಪ್ರಕಾರ ಈ ವಚನದಲ್ಲಿ ತಿರಿಗಿ ಹೇಳುತ್ತಾನೆ. ನಾನು ನನ್ನ ವಿಷಯ ಹೆಚ್ಚಳ ಪಡುವ ನಿಮಿತ್ತ ನೀವು ನನ್ನನ್ನು ಹುಚ್ಚನೆಂದು ನೆನಸಿದಾಗ್ಯೂ, ಬುದ್ಧಿವಂತರಾದ ನೀವು ಹುಚ್ಚರನ್ನು ಮಾತ್ರವಲ್ಲ, ಕ್ರೂರರನ್ನೂ ದ್ರವ್ಯಾಶಿಕರನ್ನೂ ಗರ್ವಿಷ್ಠರನ್ನೂ ಸಹಿಸಿ ಕೊಳ್ಳುವ ಪ್ರಕಾರ, ನನ್ನನ್ನು ಸಹ ಸಹಿಸಿ ಕೊಳ್ಳ ಬೇಕೆಂದು ಪೌಲನು ಹೇಳುತ್ತಾನೆ.

7. ಕ್ರಿಸ್ತನ ದಾಸನ ಪ್ರಕಾರ ಇದನ್ನು ಹೇಳದೆ, ಮನುಷ್ಯನ ಹಾಗೆ ಒಬ್ಬ ಬುದ್ಧಿಹೀನನ ಪ್ರಕಾರ ತಾನು ಮಾಡಿದ ಕಾರ್ಯಗಳನ್ನು ಕುರಿತು ಹೆಚ್ಚಳ ಪಡುತ್ತಾನೆ. (೨೦. ವ.) ಕರ್ತನ ಮಹಿಮೆ ಪ್ರಕಟವಾಗಲೂ, ಆತನ ರಾಜ್ಯದ ಪ್ರಬಲಕ್ಕೆ ಅನುಕೂಲವಾಗಿಯೂ ಪೌಲನು ಇದನ್ನು ಹೇಳಿದ್ದರಿಂದ ದೇವರ ಚಿತ್ತಕ್ಕೆ ವಿರೋಧವಲ್ಲವೆಂದು ತಿಳಿಯ ಬೇಕು.

೨೧ ಒಬ್ಬನು ನಿಮ್ಮನ್ನು ಮುಖದ ಮೇಲೆ ಬಡಿದರೆ, ಸಹಿಸುತ್ತೀರಲ್ಲ? ನಾವು ಬಲಹೀನರಾದೆವೆಂಬ [1]ಅವಮಾನ
ದ ಪ್ರಕಾರ ಹೇಳುತ್ತೇನೆ.
ಯಾವದರಲ್ಲಿ ಯಾವನಾದರೂ ಧೈರ್ಯ ಪಡುತ್ತಾನೋ—ಬುದ್ಧಿಹೀನನಾಗಿ ಹೇಳುತ್ತೇನೆ—ನಾನು ಧೈರ್ಯ
೨೨ ಪಡುತ್ತೇನೆ. ಅವರು ಇಬ್ರೀಯರೋ? ನಾನು ಸಹ; ಅವರು ಇಸ್ರಯೇಲ್ಯರೋ? ನಾನು ಸಹ; ಅವರು
೨೩ [2]ಅಬ್ರಹಾಮನ ಬೀಜವೋ? ನಾನು ಸಹ; ಅವರು ಕ್ರಿಸ್ತನ ಸೇವಕರೋ? ನಾನು ಹೆಚ್ಚಾಗಿ, ಎಂದು ಬುದ್ಧಿ
ತಪ್ಪಿ ಹೇಳುತ್ತೇನೆ—ಕಷ್ಟಗಳಲ್ಲಿ ಹೆಚ್ಚಾಗಿ, ಪೆಟ್ಟುಗಳಲ್ಲಿ ಅಮಿತವಾಗಿ, ಶೆರೆಗಳಲ್ಲಿ ಹೆಚ್ಚಾಗಿ, ಮರಣಗಳಲ್ಲಿ ಅ
೨೪ ನೇಕ ಸಾರಿ— [3]ಯೆಹೂದ್ಯರ ಕೈಯಿಂದ ಐದು ಸಾರಿ [4]ಒಂದು ಕಡಿಮೆ ನಾಲ್ವತ್ತು ಪೆಟ್ಟು ತಿಂದೆನು;
೨೫ ಮೂರು ಸಾರಿ ಬೆತ್ತದಿಂದ ಹೊಡೆಯಲ್ಪಟ್ಟೆನು, ಒಂದು ಸಾರಿ ಕಲ್ಲೆಸೆಯಲ್ಪಟ್ಟೆನು, ಮೂರು ಸಾರಿ [5]ಹಡಗಿ
೨೬ ನ ನಷ್ಟದಲ್ಲಿದ್ದೆನು, ರಾತ್ರಿಯನ್ನೂ ಹಗಲನ್ನೂ ಅಗಾಧದಲ್ಲಿ ಕಳೆದೆನು; ಅನೇಕ ಸಾರಿ ಪ್ರಯಾಣಗಳಲ್ಲಿ,
[6]ನದಿಗಳ ಗಂಡಾಂತರಗಳಲ್ಲಿ, ಕಳ್ಳರ ಗಂಡಾಂತರಗಳಲ್ಲಿ, ಸ್ವಜಾತಿಯಿಂದಾದ ಗಂಡಾಂತರಗಳಲ್ಲಿ, ಜನಾಂಗಗಳಿಂ
ದಾದ ಗಂಡಾಂತರಗಳಲ್ಲಿ, ಪಟ್ಟದೊಳಗೆ ಗಂಡಾಂತರಗಳಲ್ಲಿ, ಅರಣ್ಯದೊಳಗೆ ಗಂಡಾಂತರಗಳಲ್ಲಿ, ಸಮುದ್ರದೊ
೨೭ ಳಗೆ ಗಂಡಾಂತರಗಳಲ್ಲಿ, ಸುಳ್ಳು ಸಹೋದರರೊಳಗೆ ಗಂಡಾಂತರಗಳಲ್ಲಿ, ಕಷ್ಟದಲ್ಲಿಯೂ, ಆಯಾಸದಲ್ಲಿಯೂ,
ಅನೇಕ ಸಾರಿ [7]ಜಾಗರಗಳಲ್ಲಿಯೂ, ಹಶಿವೆ ದಾಹಗಳಲ್ಲಿಯೂ, ಅನೇಕ ಸಾರಿ ಉಪವಾಸಗಳಲ್ಲಿಯೂ, ಛಳಿ
೨೮ ಯಲ್ಲಿಯೂ, ಬತ್ತಲೆಯಲ್ಲಿಯೂ, ಇದ್ದೆನು. [8]ಹೊರಗಿನವುಗಳ ಹೊರ್ತು, ಎಲ್ಲಾ ಸಭೆಗಳ ಪರಾಮರಿಕೆ
೨೯ ಯಾದ ದಿನ ದಿನದ ಸಂದಣಿಯು ನನಗೆ ಉಂಟು. [9]ಯಾರೊಬ್ಬನು ಬಲಹೀನನಾದರೆ, ನಾನು ಬಲಹೀನ
ನಾಗುವದಿಲ್ಲವೋ? ಯಾರೊಬ್ಬನು ಆಟಂಕ ಪಟ್ಟರೆ, ನಾನು ತಾಪ ಪಡುವದಿಲ್ಲವೋ?
೩೦, ೩೧ ಹೆಚ್ಚಳ ಪಡ ಬೇಕಾದರೆ, [10]ನನ್ನ ಬಲಹೀನತ್ವದವುಗಳಲ್ಲಿ ಹೆಚ್ಚಳ ಪಡುವೆನು. ನಾನು ಸುಳ್ಳು ಹೇಳುವ

1. ಸ್ವಂತ ಹೊಗಳಿಕೆಯವರೂ, ಗರ್ವಿಷ್ಠರೂ ಪ್ರಖ್ಯಾತಿಕರೂ ಆಗಿರುವ ಕೆಲವರ ಪ್ರಕಾರ ನಾನು ಇರದೆ, ನಿಮ್ಮ ಮಧ್ಯೆ ಬಲಹೀನನ ಹಾಗಿದ್ದದ್ದನ್ನು ಹೇಳುವದು ನನಗೆ ನಿಂದೆಯಾಗಿದ್ದರೂ ಅದನ್ನು ನಿಮಗೆ ಹೇಳುತ್ತೇನೆಂದು, ಎದುರು ಅರ್ಥ ಮಾಡ ತಕ್ಕ ವಿಧವಾಗಿ ಬರೆಯುತ್ತಾನೆ.

2. ಇಬ್ರೀಯರು ಎಂಬುವದರಿಂದ ದೇಶಾಚಾರವನ್ನೂ, (ಉತ್ಪ. ೧೧. ೧೪.) ಇಸ್ರಯೇಲ್ಯರು ಎಂಬುವದರಿಂದ ಮತಾಚಾರವನ್ನೂ, (ರೋಮಾ. ೯. ೪.) ಅಬ್ರಹಾಮನ ಸಂತತಿ ಎಂಬುವದರಿಂದ ಮೆಸ್ಸೀಯನಾದ ಲೋಕರಕ್ಷಕನ ಸಮ್ಮಂಧವನ್ನೂ ಸೂಚಿಸುತ್ತವೆ.

3. ೨೪—೨೬ನೇ ವಚನದ ವರಿಗೂ ಹೇಳಲ್ಪಟ್ಟ ಸಂಗತಿಗಳಲ್ಲಿ ಕೆಲವು ಮಾತ್ರ ಅಪೊಸ್ತಲರ ಕ್ರಿಯೆಗಳಲ್ಲಿ ಹೇಳಲ್ಪಟ್ಟವೆ. (ಅಪೊಸ್ತಲರ ಕ್ರಿಯೆಗಳ ಪೀಠಿಕೆಯಲ್ಲಿ ನೋಡ ಬೇಕು.) ಯೆಹೂದ್ಯರಿಂದ ಅವನಿಗೆ ಐದು ಸಾರಿ ಉಂಟಾದ ಪೆಟ್ಟುಗಳಲ್ಲಿ ಫಿಲಿಪ್ಪಿ ಪಟ್ಟದಲ್ಲಿ ರೋಮಾಯರಿಂದ ಅವನಿಗುಂಟಾದ ಪೆಟ್ಟುಗಳು ಸಹ ಶೇರಿ ಇವೆ. ಅವನಿಗೆ ಮೂರು ಸಾರಿ ಸಂಭವಿಸಿದ ಹಡಗನಷ್ಟವನ್ನು ಕುರಿತು ಅಪೊಸ್ತಲರ ಕ್ರಿಯೆಗಳಲ್ಲಿ ಹೇಳಲ್ಪಡಲಿಲ್ಲ. ಒಂದು ಸಾರಿ ಕಲ್ಲೆಸಿಕೆಯಿಂದ ಅವನಿಗುಂಟಾದ ಆಪತ್ತು ಲುಸ್ತ್ರದಲ್ಲಿ ಸಂಭವಿಸಿತು. ಪೌಲನ ಜೀವಿತಕಾಲವು ಶ್ರಮೆಯುಳ್ಳದ್ದೆಂದು ಇದರಿಂದ ಪ್ರಕಟವಾಗಿದೆ. ಶತ್ರುಗಳು ಹೊರಿಸಿದ ಅಪರಾಧವನ್ನು ಪರಿಹರಿಸಲವಶ್ಯವಿಲ್ಲದಿದ್ದರೆ, ಕ್ರಿಸ್ತನ ಮಾರ್ಗದಿಂದ ಉಂಟಾದದ್ದೂ, ಪೌಲನ ಜೀವಿತದ ವೃತ್ತಾಂತದಲ್ಲಿ ಪ್ರಕಟವಾದದ್ದೂ ಅದ ವೀರತ್ವವೂ ತಾಳ್ಮೆಯೂ ಚನ್ನಾಗಿ ತೋರಲಾರದು.

4. ಅಪರಾಧಸ್ಥನಿಗೆ ನಾಲ್ವತ್ತು ದೆಬ್ಬೆಗಳು ಹೊಡಿಯ ಬಹುದು ಎಂಬುವದು ಯೆಹೂದ್ಯರ ಪ್ರಮಾಣವು. (ದ್ವಿತೀಯ ನ್ಯಾ. ೨೫. ೩.) ಅಷ್ಟು ಪೆಟ್ಟು ಹೊಡಿಯುವಾಗ ಒಂದು ವೇಳೆ ಕೈತಪ್ಪಾಗಿ ಹೆಚ್ಚು ಪೆಟ್ಟುಗಳು ಆದೀತೆಂದು ಒಂದು ಪೆಟ್ಟು ಕಡಿಮೆ ಮಾಡುವ ಹಾಗೆ ಯೆಹೂದ್ಯರ ಬೋಧಕರು ಆಜ್ಞಾಪಿಸಿದರು.

5. ಅಪೊ. ಕ್ರಿ. ೨೭. ೪೧—೪೪. ವಚನಗಳಲ್ಲಿ ವಿವರವಾಗಿ ಹೇಳಿರುವ ಹಡಗನಷ್ಟವು, ಇದಕ್ಕೆ ಹೆಚ್ಚು ಕಡಿಮೆ ಮೂರು ವರುಷಗಳ ತರುವಾಯ ಸಂಭವಿಸಿತು. ಇದರ ಹಾಗೆ ಇದಕ್ಕೆ ಮುಂಚೆ ಒಂದು ಸಮಯದಲ್ಲಿ ಒಡೆದು ಹೋದ ಹಡಗದ ತುಂಡುಗಳಲ್ಲಿ ಒಂದರಿಂದ ಅವನು ಒಂದು ರಾತ್ರಿ ಹಗಲು ಕಳೆದಿರುವನು.

6. ಅವನು ಪ್ರಯಾಣ ಮಾಡಿದ ಕಡೆಗಳಲ್ಲಿ ನದಿಗಳ ಪ್ರವಾಹದಿಂದ ದಾಟ ಕೂಡದ ಹಾಗೆ ಕಷ್ಟವಾಗಿರುವದು.

7. ಕೆಲಸದಿಂದಲೂ ಚಿಂತೆಯಿಂದಲೂ ಕಷ್ಟದಿಂದಲೂ ನಿದ್ರೆ ಇಲ್ಲದೆ ಅನೇಕ ರಾತ್ರಿಗಳನ್ನು ಕಳೆದಿರುವನು. (ಅಪೊ. ಕ್ರಿ. ೨೦. ೭, ೧೧, ೩೧. ೨ ಥೆಸ್ಸ. ೩. ೮.)

8. ಇಲ್ಲಿ ಹೇಳಿ ಇರದ ಇನ್ನೂ ಅನೇಕ ಸಂಕಟಗಳು ಅವನಿಗೆ ಸಂಭವಿಸಿದವೆಂದು ಇದರಿಂದ ತೋರುತ್ತದೆ.

9. ಸಭೆಗಳ ವಿಷಯ ಅವನಿಗೆ ಅಧಿಕ ಚಿಂತೆ ಇದ್ದದರಿಂದ (೨೯. ವ.) ಬಲಹೀನರಿಗಾಗಿ ಸಂತಾಪ ಪಡಲೂ, ಶ್ರಮೆ ಪಡುವವರ ನಿಮಿತ್ತ ದುಃಖ ಪಡಲೂ, ಆಟಂಕ ಮಾಡುವವರ ವಿಷಯವಾಗಿ ಕೋಪ ಪಡಲೂ ಹೇತುವೆ ಇತ್ತು. ಸಭೆಯ ಸೇವಕನಿಗೆ ಇಷ್ಟು ಇರುವದಾದರೆ, ಸಭೆಯ ನಾಯಕನಿಗೆ ಎಷ್ಟು ಇರುವದು!

10. ಇದು ಅವನು ಹೀನ ಸ್ಥಿತಿಯಲ್ಲಿದ್ದವನೆಂದು ವಿರೋಧಿಗಳು ಹೀನವಾಗಿ ಮಾತಾಡ ಹೇತುವೆಯಾಗಿದ್ದ ಅವನ ಕಷ್ಟಗಳನ್ನು ಕುರಿತದ್ದು. ಇವುಗಳ ವಿಷಯ ಪೌಲನು ಅಧಿಕವಾಗಿ ಹೆಚ್ಚಳ ಪಟ್ಟನು. ಈ ಉಪದ್ರಗಳಲ್ಲೆಲ್ಲಾ ಒಡಂಬಡಿಕೆಯ ದೇವರೂ, ಕ್ರಿಸ್ತನ ತಂದೆಯೂ ಆಗಿರುವ ಸ್ವಾಮಿಯು ಅವನಿಗೆ ಆಧಾರಣೆಯಾಗಿದ್ದದರಿಂದ ಆತನ ಪರಿಶುದ್ಧ ಹೆಸರನ್ನು ಹೇಳುತ್ತಾನೆ.



ದಿಲ್ಲವೆಂದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರು ಬಲ್ಲನು; ಅವನು ಎಂದೆಂದಿಗೂ ಸ್ತು
೩೨ ತಿಸ ತಕ್ಕವನೇ. ದಮಸ್ಕದಲ್ಲಿ ಅರಸಾದ [1]ಅರೇತನ ಸುಬೆದಾರನು ನನ್ನನ್ನು ಹಿಡಿಯ ಬೇಕೆಂದು, ದಮಸ್ಕ
೩೩ ದವರ ಪಟ್ಟವನ್ನು ಕಾಯಲಾಗಿ, ಕಿಟಕಿಯಿಂದ ಪುಟ್ಟಿಯಲ್ಲಿ [2]ಗೋಡೆಯಿಂದ ಇಳಿಸಲ್ಪಟ್ಟು, ಅವನ ಕೈಗಳಿಗೆ
ತಪ್ಪಿಸಿ ಕೊಂಡೆನು.

ಪೌಲನಿಗೆ ಉಂಟಾದ ದೇವರ ದರ್ಶನಗಳು; ಅವುಗಳನ್ನು ಕುರಿತು ಹೆಚ್ಚಳ ಪಡ ತಕ್ಕದ್ದಾಗಿದ್ದರೂ, ಹಾಗೆ ಮಾಡದೆ, ಕ್ರಿಸ್ತನ ಬಲವು ತೋರ ತಕ್ಕದ್ದಾಗಿ ತನ್ನ ಬಲಹೀನತ್ವಗಳನ್ನು ಕುರಿತು ಹೆಚ್ಚಳ ಪಟ್ಟದ್ದು.

12. ಹೆಚ್ಚಳ ಪಡುವದು ಹ್ಯಾಗೂ ನನಗೆ ತಕ್ಕದ್ದಲ್ಲ; ಆದರೂ ಕರ್ತನ ದರ್ಶನಗಳಿಗೂ ಪ್ರಕಟಣೆಗಳಿಗೂ
೨ [3]ಬರುತ್ತೇನೆ. ಕ್ರಿಸ್ತನಲ್ಲಿರುವ [4]ಮನುಷ್ಯನನ್ನು ಬಲ್ಲೆನು; ಹದಿನಾಲ್ಕು ವರುಷಗಳ ಹಿಂದೆ—ಶರೀರದಲ್ಲಿಯೋ?
ನಾನರಿಯೆ; ಶರೀರದ ಹೊರಗೆಯೋ? ನಾನರಿಯೆ; ದೇವರು ಬಲ್ಲನು — ಅಂಥವನು ಮೂರನೇ ಆಕಾಶದ
೩ ಪರ್ಯಂತರಕ್ಕೂ ಹಿಡಿದು ವೈಯಲ್ಪಟ್ಟನು. ಅಂಥ ಮನುಷ್ಯನು—ಶರೀರದಲ್ಲಿಯೋ? ಶರೀರದ ಹೊರಗೆಯೋ?
೪ ನಾನರಿಯೆ; ದೇವರು ಬಲ್ಲನು— ಅವನು [5]ಪರದೈಸಕ್ಕೆ ವೈಯಲ್ಪಟ್ಟು, ಮನುಷ್ಯನು ಹೇಳಲಾಗದ ಅವಾಚ್ಯ
೫ [6]ವಾಕ್ಯಗಳನ್ನು ಕೇಳಿದನೆಂದು ಬಲ್ಲೆನು. ಅಂಥವನನ್ನು ಕುರಿತು ಹೆಚ್ಚಳ ಪಡುವೆನು; ನನ್ನನ್ನು ಕುರಿತಾದ
೬ ರೆ, ನನ್ನ [7]ಬಲಹೀನತ್ವಗಳಲ್ಲಿಯೇ ಹೊರ್ತು, ಹೆಚ್ಚಳ ಪಡೆನು. ಯಾಕಂದರೆ ಹೆಚ್ಚಳ ಪಡ ನನಗೆ ಮನಸ್ಸಿ
ದ್ದರೂ, ಬುದ್ಧಿಹೀನನಾಗಿರೆನು; ಯಾಕಂದರೆ ಸತ್ಯವನ್ನು ಹೇಳುವೆನು; ಆದರೆ ಯಾವನಾದರೂ ನನ್ನಲ್ಲಿ ಕಾ
ಣುವದಕ್ಕಿಂತಲಾದರೂ, [8]ನನ್ನಿಂದ ಕೇಳುವದಕ್ಕಿಂತಲಾದರೂ, ಹೆಚ್ಚು ನನ್ನನ್ನು ಕುರಿತು ಎಣಿಸದ ಹಾಗೆ,
ಸುಮ್ಮನಿರುತ್ತೇನೆ.

1. ಪೌಲನಿಗೆ ಮರಣದ ಪರ್ಯಂತರ ಉಂಟಾದ ಉಪದ್ರಗಳಲ್ಲಿ, ದಮಸ್ಕದಲ್ಲಿ ಸಂಭವಿಸಿದ ಉಪದ್ರವೇ ಮೊದಲನೇದು. ಆ ಕಾಲದಲ್ಲಿ ಆ ಪಟ್ಟವು ಅರಬ್ಬಿ ದೇಶದ ಅರಸನಾದ ಅರೇತನ ಆಳಿಕೆಯಲ್ಲಿತ್ತು. ಅವನು ಒಬ್ಬ ದೇಶಾಧಿಪತಿಯ ಮೂಲಕವಾಗಿ ಅದನ್ನು ಆಳುತ್ತಿದ್ದನು. ಅವನು ಹೆರೋದ ಅಂತಿಪನಿಗೆ ಮಾವನಾಗಿಯೂ ಆ ಪಟ್ಟವನ್ನು ಆಳುವವನಾಗಿಯೂ ಇದ್ದನು. ಒಂದು ವೇಳೆ ಲಂಚಕ್ಕೆ ಆಶೆ ಪಟ್ಟು, ಕೋಟೆ ಬಾಗಲುಗಳನ್ನು ಕಾಯಲೂ, ಪೌಲನನ್ನು ಕೊಂದು ಹಾಕಲೂ ಯೆಹೂದ್ಯರಿಗೆ ಆಜ್ಞಾಪಿಸಿರುವನು. (ಅಪೊ. ಕ್ರಿ. ೯. ೨೪.)

2. ಆ ಪಟ್ಟದ ಗೋಡೆಯ ಮಾರ್ಗವಾಗಿ, ಅಂದರೆ, ಒಂದು ವೇಳೆ ಕಿಟಕಿ ಇದ್ದ ಮನೆಯು ಅಲಂಗಕ್ಕೆ ಸಮ್ಮಂಧ ಪಟ್ಟಿರುವದು. (ಯೆಹೋಶು. ೨. ೧೫.) ಅಲ್ಲಿಂದ ಅವನನ್ನು ಪುಟ್ಟಿಯಲ್ಲಿಟ್ಟು ಇಳಿಸಿರುವರು. ಕ್ರಿಸ್ತನ ನಿಮಿತ್ತ ಪೌಲನಿಗೆ ಸಂಭವಿಸಿದ ಈ ಮೊದಲನೇ ಆಪತ್ತಿನಿಂದ ತಪ್ಪಿಸಲ್ಪಟ್ಟನು.

3. ಬರುತ್ತೇನೆ ಎಂಬುವದಕ್ಕೆ ಹೇಳುತ್ತೇನೆ ಎಂಬ ಅರ್ಥವು. ಕೃಪೆಯುಳ್ಳ ದೇವರು ನನಗೆ ಅನುಗ್ರಹಿಸಿದ ದರ್ಶನಗಳನ್ನು ಹೇಳಬರುತ್ತೇನೆಂದು ಮಹಾ ಅಡಕವಾಗಿ ದೀನತ್ವದಿಂದ ಹೇಳುತ್ತಾನೆ.

4. ಪೌಲನು ತನ್ನನ್ನು ಕುರಿತೇ ಹೀಗೆ ಹೇಳುತ್ತಾನೆಂದು ೭ನೇ ವಚನದಲ್ಲಿ ಸ್ಪಷ್ಟವಾಗಿ ತೋರುತ್ತದೆ. ಅವನಿಗಾದ ದರ್ಶನವು ಅವನು ಕ್ರಿಸ್ತನಲ್ಲಿ ಪರಿಶುದ್ಧನಾಗಿ ನಡಿಯಲೂ, ಆತನಿಗೆ ಅಧಿಕವಾಗಿ ಸೇವೆ ಮಾಡಲೂ ಅವನನ್ನು ಪ್ರೇರೇಪಿಸಿದ್ದರಿಂದ, (೯. ವ.) ನೀಚ ಮನುಷ್ಯನಾದ ನನಗಲ್ಲ, ಕ್ರಿಸ್ತನಲ್ಲಿರುವ ಪರಿಶುದ್ಧನಾದ ಒಬ್ಬ ಮನುಷ್ಯನಿಗೆ ಅನುಗ್ರಹಿಸಲ್ಪಟ್ಟಿತೆಂದು ಹೇಳುತ್ತಾನೆ. ಅವನು ಆ ಸಂಗತಿಯನ್ನು ಹದಿನಾಲ್ಕು ವರುಷಗಳ ವರಿಗೂ ಹೇಳದೆ ಅಡಗಿಸಿದ್ದನ್ನು ಯೋಚಿಸುವಾಗ, ಅವನು ಅದನ್ನು ಕುರಿತು ಹೆಚ್ಚಳ ಪಡ ಮನಸ್ಸಿಲ್ಲದವನಾಗಿದ್ದನೆಂದು ತೋರುತ್ತದೆ.

5. ಮೂರನೇ ಆಕಾಶವೇ ಪರದೈಸಾಗಿರ ಬೇಕು. ಮೂರನೇ ಆಕಾಶವೆಂಬುವದು ದೇವರ ಸನ್ನಿಧಿಯಾದ ಪರಲೋಕವೇ, ಮತ್ತು ಸತ್ತು ಹೋದ ಪರಿಶುದ್ಧವಂತರು ವಾಸಿಸುವ ಪರಮ ಮಹಿಮೆಯಿಂದ ಪ್ರಕಾಶಿಸುವ ಸ್ಥಳವಾಗಿಯೇ ಇರುವದು. (ಲೂಕ. ೨೩. ೪೩. ವಚನದ ವ್ಯಾಖ್ಯಾನ ನೋಡ ಬೇಕು.) ಈ ಸ್ಥಳದಲ್ಲಿ ಅವನಿಗೆ ದರ್ಶನವಾದಾಗ ಆತ್ಮ ಮಾತ್ರವಿತ್ತೋ, ಆತ್ಮವೂ ಶರೀರವೂ ಕೂಡ ಇತ್ತೋ ಎಂಬುವದು ಅವನಿಗೆ ಸಹ ನಿಶ್ಚಯವಾಗಿ ತಿಳಿಯಲಿಲ್ಲ. ಪರಮ ಮಹಿಮೆಯನ್ನು ಕಾಣುವವರು ಶರೀರ ಮರೆತು ಹೋಗುವರು.

6. ಪರಲೋಕದ ಭಾಷೆ ಮನುಷ್ಯರಿಗೆ ತಿಳಿಯಲಾರದು. ಅನೇಕ ಉಪದ್ರಗಳಿಗೊಳಪಟ್ಟಿದ್ದ ಪೌಲನಿಗೆ ಮಾತ್ರ ಆದರಣೆಯುಂಟಾಗುವ ಹಾಗೆ ಕೊಡಲ್ಪಟ್ಟದ್ದೇ ಹೊರ್ತು, ಮತ್ತೊಬ್ಬರಿಗೆ ತಿಳಿಸುವದಕ್ಕಲ್ಲ.

7. ಈ ಪರಮದರ್ಶನವನ್ನು ಕಾಣುವಂತೆ ಮಾಡಿದ ದೈವಾನುಗ್ರಹವನ್ನು ಕುರಿತು ಅವನು ಹೆಚ್ಚಳ ಪಡ ಮನಸ್ಸಾಗಿದ್ದನೇ ಹೊರ್ತು, ತನ್ನನ್ನು ಕುರಿತು ಹೆಚ್ಚಳ ಪಡ ಸ್ವಲ್ಪವಾದರೂ ಮನಸ್ಸುಳ್ಳವನಲ್ಲ. ಅವನು ತನ್ನನ್ನು ಕುರಿತು ಹೆಚ್ಚಳ ಪಡ ಬೇಕಾದರೆ, ತನ್ನ ಬಲಹೀನತ್ವಗಳಲ್ಲಿ ಹೆಚ್ಚಳ ಪಡುವನು. (೬—೧೦. ವ.) ಅವನು ಹೇಳಿದ್ದೆಲ್ಲಾ ನಿಜವಾಗಿದ್ದದರಿಂದ ಅವನು ಹೆಚ್ಚಳ ಪಟ್ಟರೂ ದೋಷವಿಲ್ಲ.

8. ನಾನು ನನ್ನನ್ನು ಕುರಿತು ಹೇಳುವದಕ್ಕಿಂತ ಹೆಚ್ಚಾಗಿ ಯಾರೂ ನನ್ನನ್ನು ಎಣಿಸ ಬಾರದು, ಅನ್ನುತ್ತಾನೆ.

೭ ಮತ್ತು ಪ್ರಕಟಣೆಗಳ ಹೆಚ್ಚುವಿಕೆಯಿಂದ ನಾನು ಅಧಿಕವಾಗಿ ಹೆಚ್ಚಿಸಿ ಕೊಳ್ಳದ ಹಾಗೆ, ನನಗೆ ಮಾಂಸದಲ್ಲಿ
[1]ಮುಳ್ಳು ಕೊಡಲ್ಪಟ್ಟಿತು—ಅದೇನಂದರೆ, ನಾನು ಅಧಿಕವಾಗಿ ಹೆಚ್ಚಿಸಿ ಕೊಳ್ಳದ ಹಾಗೆ, ನನ್ನನ್ನು ಹೊಡೆ
೮ ಯುವ ಸೈತಾನನ ದೂತನು. ಇದರ ನಿಮಿತ್ತ, ಅದು ನನ್ನನ್ನು ಬಿಟ್ಟು ಹೋಗುವ ಹಾಗೆ, ಮೂರು ಸಾರಿ
೯ [2]ಕರ್ತನನ್ನು ಬೇಡಿ ಕೊಂಡೆನು. ಮತ್ತು ಅವನು, ನನ್ನ ಕೃಪೆಯು ನಿನಗೆ ಸಾಕು; ಯಾಕಂದರೆ ನನ್ನ ಬಲ
ವು [3]ಅಶಕ್ತಿಯಲ್ಲಿ ಸಂಪೂರ್ಣವಾಗುವದು ಎಂದು, ನನಗೆ ಹೇಳಿದ್ದಾನೆ. ಹೀಗಿರುವದರಿಂದ ಕ್ರಿಸ್ತನ ಬಲವು
ನನ್ನ ಮೇಲೆ [4]ವಾಸವಾಗಿರುವ ಹಾಗೆ, ನನ್ನ ಬಲಹೀನತ್ವಗಳಲ್ಲಿ ಪರಮ ಸಂತೋಷದಿಂದ ಹೆಚ್ಚಳ ಪಡುವೆನು.
೧೦ ಆದದರಿಂದ ಕ್ರಿಸ್ತನ ನಿಮಿತ್ತ ಬಲಹೀನತ್ವಗಳಲ್ಲಿ, ನಿಂದೆಗಳಲ್ಲಿ, ಸಂಕಟಗಳಲ್ಲಿ, ಹಿಂಸೆಗಳಲ್ಲಿ, ಇಕ್ಕಟ್ಟುಗಳಲ್ಲಿ,
ಸಂತೋಷವಾಗಿದ್ಧೇನೆ. ಯಾಕಂದರೆ ಬಲಹೀನನಾಗಿರುವಾಗಲೇ ಬಲವುಳ್ಳವನಾಗಿದ್ಧೇನೆ.

ಪೌಲನು ಕೊರಿಂಥಕ್ಕೆ ಹೋಗ ಯೋಚನೆಯುಳ್ಳವನಾಗಿದ್ದದ್ದನ್ನು ಕುರಿತ ಕಟ್ಟಳೆಗಳು.

೧೧ ಹೆಚ್ಚಳ ಪಟ್ಟು ಬುದ್ಧಿಹೀನನಾದೆನು, ನೀವೇ ನನಗೆ ಅಗತ್ಯ ಮಾಡಿದಿರಿ. ಹ್ಯಾಗಂದರೆ ನಿಮ್ಮಿಂದ ನಾನು
ಪ್ರತಿಷ್ಠೆ ಮಾಡಲ್ಪಡ ಬೇಕಾಗಿತ್ತು; ಯಾಕಂದರೆ ನಾನು ಏನು ಇಲ್ಲದಿದ್ದರೂ, [5]ಅತಿ ಶ್ರೇಷ್ಠ ಅಪೊಸ್ತಲರಿಗಿಂ
೧೨ ತ ಎಷ್ಟು ಮಾತ್ರ ಕಡಿಮೆಯಾದವನಲ್ಲ. [6]ಅಪೊಸ್ತಲನ ಗುರುತುಗಳು ಎಲ್ಲಾ ತಾಳ್ಮೆಯಿಂದಲೂ, ಗುರು
೧೩ ತುಗಳಿಂದಲೂ, ಅದ್ಭುತಗಳಿಂದಲೂ, ಬಲವಾದ ಕ್ರಿಯೆಗಳಿಂದಲೂ, ನಿಮ್ಮಲ್ಲಿ ನಡಿಸಲ್ಪಟ್ಟವಲ್ಲವೋ? ನಾನೇ
ನಿಮಗೆ ಉಪದ್ರ ಕೊಡದೆ ಇದ್ದದ್ದಲ್ಲದೆ, ಮತ್ತ್ಯಾವದರಲ್ಲಿ ಬೇರೆ ಸಭೆಗಳಿಗಿಂತ ನಷ್ಟ ಪಟ್ಟಿರಿ? ಈ ಅನ್ಯಾಯ
ವನ್ನು ನನಗೆ ಮನ್ನಿಸಿರಿ.
೧೪ [7]ಇಗೋ, [8]ಮೂರನೇ ಸಾರಿ ನಿಮ್ಮ ಬಳಿಗೆ ಬರ ಸಿದ್ಧವಾಗಿದ್ಧೇನೆ; ಮತ್ತು ನಿಮಗೆ ಭಾರವಾಗಿರೆನು;

1. ಈ ಒಂದು ಸಮಯದಲ್ಲಿ ಅವನಿಗೆ ನಾನಾ ದರ್ಶನಗಳುಂಟಾದದರಿಂದ ಅದರ ವಿಷಯ ತನ್ನನ್ನು ಹೆಚ್ಚಿಸಿ ಕೊಳ್ಳದೆ, ತಗ್ಗಿಸಿ ಕೊಳ್ಳುವದಕ್ಕೆ ಒಂದು "ಮುಳ್ಳು" ಕೊಡಲ್ಪಟ್ಟಿತ್ತು. ಈ ಮುಳ್ಳು ಏನೆಂದು ನಿಶ್ಚಯ ತಿಳಿಯದು. ಇದು ಅವನ ಶರೀರದಲ್ಲಿ ಉಂಟಾಗಿದ್ದ ಶೋಧನೆ, ಎಂದು ತೋರುತ್ತದೆ. (ಗಲಾ. ೪. ೧೪.) ಅವನ ಶರೀರದಲ್ಲಿ ಒಂದು ಬಲಹೀನ ಅಥವ ಉಪದ್ರ ಉಂಟಾಗಿರ ಬಹುದು. ಅದು ಮುಳ್ಳಿನಂತೆ ಅವನ ಶರೀರವನ್ನು ಯಾವಾಗಲೂ ಚುಚ್ಚಿ ನೋವು ಕೊಟ್ಟಿತೆಂದು ತೋರುತ್ತದೆ. ಇದು ದೇವರ ಚಿತ್ತದ ಪ್ರಕಾರ ಬಂದಿದ್ದಾಗ್ಯೂ, ಪಿಶಾಚನು ಮನುಷ್ಯರ ಶರೀರವನ್ನು ಬಾಧಿಸುವದರಿಂದ (ಲೂಕ. ೧೩. ೧೬.) ನನ್ನನ್ನು ಹೊಡಿಯುವ ಸೈತಾನನ ದೂತನು ಎಂದು ಹೇಳಿ ಇದೆ. ಸೈತಾನನು ಯೋಬನ ಶರೀರವನ್ನು ಬಾಧಿಸಿದ ಕಾರಣ ಹೀಗೆ ಹೇಳಿರ ಬಹುದು. (ಯೋಬ. ೨. ೫, ೭.)

2. ಇಲ್ಲಿ ಕರ್ತನೆಂದು ಹೇಳಲ್ಪಡುವಾತನು ದೈವಶಕ್ತಿಯುಳ್ಳವನೂ, ಅದನ್ನು ಮತ್ತೊಬ್ಬರಿಗೆ ಕೊಡುವವನೂ ಆಗಿರುವ ಕ್ರಿಸ್ತನೇ. (೯. ವ.)

3. ತನ್ನ ದಾಸನು ಮೂರು ಸಾರಿ ಪ್ರಾರ್ಥಿಸಲಾಗಿ ಯೇಸು ಸ್ವಾಮಿ ಒಂದು ಸಾರಿ ಪ್ರತ್ಯುತ್ತರ ಕೊಟ್ಟನು. ಭಕ್ತರ ಪ್ರಾರ್ಥನೆ ವ್ಯರ್ಥವಾಗುವದಿಲ್ಲ. (ಯಾಕೋಬ. ೫. ೧೬.) ಪೌಲನ ಪ್ರಾರ್ಥನೆಯಿಂದ ಅವನ ಮುಳ್ಳು ತೆಗೆಯಲ್ಪಡದಿದ್ದರೂ, ಅದನ್ನು ಸಹಿಸಲೂ, ಅದರ ವಿಷಯ ಹೆಚ್ಚಳ ಪಡಲೂ, ಕೃಪೆ ದೊರಕಿತು. ಅವನ ಬಲಹೀನತ್ವದಲ್ಲಿ ಕರ್ತನ ಕೃಪೆ ಪೂರ್ಣವಾಗಿ ಪ್ರಕಟವಾಯಿತು. ಅನೇಕರ ಪ್ರಾರ್ಥನೆಗೆ ಇಂಥಾ ಉತ್ತರ ಶಿಕ್ಕುವದುಂಟು. ಉಪದ್ರ ಪರಿಹಾರವಾಗುವದು ಕೃಪೆಯೇ; ಅದನ್ನು ಸಹಿಸ ತಕ್ಕ ಬಲವು ಕೊಡಲ್ಪಡುವದು ಸಹ ಕೃಪೆಯೇ.

4. ಅವನ ಶರೀರದಲ್ಲಿದ್ದ ಮುಳ್ಳಿನಿಂದ ಅವನ ಆತ್ಮಕ್ಕೆ ಯಾವ ವಿಘ್ನವೂ ಬಾರದ ಹಾಗೆ ಕರ್ತನ ಬಲವು ಒಂದು ಖೇಡ್ಯದ ಹಾಗೆ ಅವನ ಮೇಲೆ ತಂಗಿ ಅವನನ್ನು ಆದರಿಸಿತು. ಅದರಿಂದ ಅವನು ಬಲಹೀನದಲ್ಲಿ ಬಲವುಳ್ಳವನಾಗಿಯೂ, ದುಃಖದಲ್ಲಿ ಸಂತೋಷವುಳ್ಳವನಾಗಿಯೂ ಇದ್ದನು.

5. ಅತಿ ಶ್ರೇಷ್ಠ ಅಪೊಸ್ತಲರೆಂಬುವದು, ತಮ್ಮನ್ನು ಮುಖ್ಯ ಅಪೊಸ್ತಲರೆಂದು ಹೆಚ್ಚಳ ಪಟ್ಟ ಕಳ್ಳಬೋಧಕರನ್ನು ಕುರಿತದ್ದು. (೧೧. ೫.)

6. ಸರಿಯಾದ ಅಪೊಸ್ತಲನಿಗೆ ತಕ್ಕ ಅದ್ಭುತದ ಗುರುತುಗಳೆಲ್ಲಾ ಪೌಲನಲ್ಲಿ ಪೂರ್ಣವಾಗಿ ತೋರಿದ್ದರಿಂದ ಅಪೊಸ್ತಲನೆಂಬ ಹೆಸರು ಅವನಿಗೆ ತಕ್ಕದ್ದು.

7. ಕಡೆಯಾಗಿ ಪೌಲನು ಸ್ವಪ್ರಯೋಜನವನ್ನು ಹುಡುಕದೆ ಯಥಾರ್ಥವಾಗಿ ನಡೆದದ್ದನ್ನು ಹೇಳಿ, (೧೨. ೧೪—೧೮.) ಕೊರಿಂಥದ ಸಭೆಯವರು ನಡಿಸುತ್ತಿದ್ದ ದುಷ್ಕರ್ಮಗಳನ್ನು ಬಿಟ್ಟು ಬಿಡುವ ಹಾಗೆ ಅಪೊಸ್ತಲ ಅಧಿಕಾರದಿಂದ ಆಜ್ಞಾಪಿಸಿ, (೧೯—೨೧. ವ.) ಸಭೆಯ ಕ್ರಮಗಳಿಗೆ ವಿರೋಧವಾಗಿರುವ ನಡತೆಗಳನ್ನೆಲ್ಲಾ ಖಂಡಿಸ ನಿರ್ಣಯಿಸಿ ಕೊಂಡಿರುವದನ್ನು ಹೇಳಿ, (೧೩. ೧—೪.) ಈ ವಿಷಯಗಳಲ್ಲಿ ಅವರು ತಮ್ಮನ್ನು ಪರೀಕ್ಷಿಸಿ ಕೊಳ್ಳುವಂತೆ ಎಚ್ಚರಿಸಿ, (೫—೧೦. ವ.) ವಂದನೋಕ್ತಿಗಳಿಂದ ಮುಗಿಸುತ್ತಾನೆ. (೧೧—೧೪. ವ.)

8. ಅವನು ಮೊದಲನೇ ಸಾರಿ ಕೊರಿಂಥಕ್ಕೆ ಹೋದದ್ದನ್ನು ಕುರಿತು ಅಪೊ. ಕ್ರಿ. ೧೮ನೇ ಸಂಧಿಯಲ್ಲಿ ಹೇಳಿ ಇದೆ. ಎರಡನೇ ಸಾರಿ ಹೋಗ ಬೇಕೆಂದು ಆಲೋಚಿಸಿದ್ದು ಈಡೇರಲಿಲ್ಲ. (೧ಕೊರಿ. ೧೬. ೫. ವಚನದ ವ್ಯಾಖ್ಯಾನ ನೋಡ ಬೇಕು.) ಮೂರನೇ ಸಾರಿ ಹೋಗುವ ಹಾಗೆ ಮಾಡಿದ ನಿರ್ಣಯವು (೧೩. ೧.) ಕೈಕೂಡಿತು.



ಯಾಕಂದರೆ ನಿಮ್ಮವುಗಳನ್ನಲ್ಲ, ನಿಮ್ಮನ್ನೇ ಹುಡುಕುತ್ತೇನೆ. ಹ್ಯಾಗಂದರೆ ಮಕ್ಕಳು ಹೆತ್ತವರಿಗೋಸ್ಕರವಲ್ಲ,
೧೫ ಹೆತ್ತವರು ಮಕ್ಕಳಿಗೋಸ್ಕರ, ದ್ರವ್ಯ ಇಟ್ಟು ಕೊಳ್ಳುವದೇ ತಕ್ಕದ್ದು. ಆದರೆ ನಾನು ನಿಮ್ಮನ್ನು ಹೆಚ್ಚಾಗಿ
ಪ್ರೀತಿ ಮಾಡಿದರೂ, ಕಡಿಮೆಯಾಗಿ ಪ್ರೀತಿ ಮಾಡಲ್ಪಟ್ಟಾಗ್ಯೂ, [1]ನಿಮ್ಮ ಪ್ರಾಣಗಳಿಗೋಸ್ಕರ ಪರಮ ಸಂ
ತೋಷದಿಂದ ವೆಚ್ಚ ಮಾಡಿ, ವೆಚ್ಚವಾಗುವೆನು.
೧೬ ಆದಾಗಲಿ; ನಾನು ನಿಮ್ಮನ್ನು ಭಾರ ಪಡಿಸಲಿಲ್ಲ, ಆದರೆ ತಂತ್ರವುಳ್ಳವನಾಗಿ [2]ಕಪಟದಿಂದ ನಿಮ್ಮನ್ನು ಹಿಡಿ
೧೭ ದೆನು; ನಿಮ್ಮ ಬಳಿಗೆ ಕಳುಹಿಸಿದವರಲ್ಲಿ ಒಬ್ಬನ ಮುಖಾಂತರ ನಿಮ್ಮಿಂದ ಲಾಭ ಮಾಡಿ ಕೊಂಡೆನೋ?
೧೮ [3]ತೀತನಿಗೆ ಅಪ್ಪಣೆ ಕೊಟ್ಟು, [4]ಸಹೋದರನನ್ನು ಕೂಡ ಕಳುಹಿಸಿದೆನು. ತೀತನು ನಿಮ್ಮಿಂದ ಏನಾದರೂ
ಲಾಭ ಮಾಡಿ ಕೊಂಡನೋ? ನಾವು ಅದೇ ಆತ್ಮದಲ್ಲಿಯೂ, ಅದೇ ಹೆಜ್ಜೆಗಳಲ್ಲಿಯೂ ನಡಿಯಲಿಲ್ಲವೋ?
೧೯ ನಿಮಗೆ ನೆವ ಹೇಳುತ್ತೇವೆಂದು, ತಿರಿಗಿ ನೆನಸುತ್ತೀರೋ? ದೇವರ ಮುಂದೆ ಕ್ರಿಸ್ತನಲ್ಲಿ ಮಾತಾಡುತ್ತೇವೆ;
೨೦ ಆದರೆ ಎಲ್ಲಾ ನಿಮ್ಮ ಆತ್ಮವೃದ್ಧಿಗೋಸ್ಕರ, ಪ್ರಿಯರೇ. ಯಾಕಂದರೆ ಒಂದು ವೇಳೆ ನಾನು ಬಂದಾಗ,
ನೀವು ನನ್ನ ಮನಸ್ಸಿಗೆ ಸರಿಯಲ್ಲದವರಾಗಿ ಕಾಣಿಸೀರೆಂದೂ, ನಾನು ನಿಮ್ಮ ಮನಸ್ಸಿಗೆ ಸರಿಯಲ್ಲದವನಾಗಿ
ಕಾಣಿಸೇನೆಂದೂ, ಒಂದು ವೇಳೆ ಝಗಳಗಳೂ, ಆಸಕ್ತಿಗಳೂ, ಕೋಪಗಳೂ, ವಿವಾದಗಳೂ, ಚಾಡಿಗಳೂ,
೨೧ ಗುಸುಗುಟ್ಟುಗಳೂ, ಉಬ್ಬಿಕೆಗಳೂ, ಗದ್ದಲಗಳೂ, ಆದಾವೆಂದೂ, ನನ್ನ ದೇವರು ತಿರಿಗಿ ಬಂದ ನನ್ನನ್ನು
ನಿಮ್ಮ ಬಳಿಯಲ್ಲಿ ತಗ್ಗಿಸ್ಯಾನೆಂದೂ, ಮುಂಚೆ ಪಾಪ ಮಾಡಿ, ತಾವು ನಡಿಸಿದ ಅಶುದ್ಧತ್ವ ಜಾರತ್ವ ಬಂಡು
ತನಗಳಿಗೋಸ್ಕರ ಮಾನಸಾಂತರ ಪಡದ [5]ಅನೇಕರ ನಿಮಿತ್ತ ಗೋಳಾಡುವೆನೆಂದೂ, ಭಯ ಪಡುತ್ತೇನೆ.

13. ಈಗ ಮೂರನೇ ಸಾರಿ ನಿಮ್ಮ ಬಳಿಗೆ ಬರುತ್ತೇನೆ. ಎರಡು ಮೂರು [6]ಸಾಕ್ಷಿಗಳ ಬಾಯಿಯಿಂದ ಸಂಗ
೨ ತಿಗಳೆಲ್ಲಾ ಸ್ಥಾಪಿಸಲ್ಪಡುವವು. (ದ್ವಿತೀಯ ನ್ಯಾ. ೧೯. ೧೫.) ಮುಂಚೆ ಹೇಳಿದ್ದನ್ನು, ಸಮೀಪದಲ್ಲಿದ್ದ
ಹಾಗೆ ಎರಡನೇ ಸಾರಿ, ಮುಂಚೆ ಹೇಳುತ್ತೇನೆ. ಮತ್ತು ಮುಂಚೆ ಪಾಪ ಮಾಡಿದವರಿಗೂ, ಮಿಕ್ಕಾದವರೆ
೩ ಲ್ಲರಿಗೂ, ದೂರದಲ್ಲಿದ್ದು ಈಗ ಬರೆಯುವದೇನಂದರೆ, ನಾನು ತಿರಿಗಿ ಬಂದರೆ, ಕನಿಕರಿಸೆನು. ನಿಮಗಾಗಿ

(ಅಪೊ. ಕ್ರಿ. ೨೦. ೨, ೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಇದಕ್ಕೆ ಮುಂಚೆ ಪೌಲನು ಎರಡು ಸಾರಿ ಹೋಗಿದ್ದನೆಂದು ಕೆಲವರು ನೆನಸುತ್ತಾರೆ.

1. ಮಕ್ಕಳ ಮೇಲೆ ಹೆತ್ತವರಿಗಿರುವ ಮಮತೆಯು ಬಹು ಕಷ್ಟದಿಂದ ಅವರಿಗೋಸ್ಕರ ಆಸ್ತಿಯನ್ನು ಕೂಡಿಸಿಡುವ ಹಾಗೆ ಪ್ರೇರೇಪಿಸುತ್ತದೆ. ಮತ್ತು ಕೆಲ ಸಮಯಗಳಲ್ಲಿ ಅವರಿಗೋಸ್ಕರ ಪ್ರಾಣ ಕೊಡುವ ಹಾಗೆ ಸಹ ಮಾಡುವದು. ಅದೇ ಪ್ರಕಾರ ಪೌಲನು ಕೊರಿಂಥದ ಸಭೆಗೆ ಯಾವ ಖರ್ಚಾದರೂ ಉಂಟಾಗದಂತೆ ಇದ್ದನು. ಅವರ ಆತ್ಮಲಾಭವಾಗುವಂತೆ ತನ್ನ ಪ್ರಾಣವನ್ನು ಸಹ ಕೊಡ ಸಿದ್ಧವಾಗಿದ್ದನು. ಹೆತ್ತವರ ಮಮತೆಯೂ, ಭಕ್ತರ ಪ್ರೀತಿಯೂ, ದೇವರ ಪ್ರೀತಿಗೆ ಗುರುತಾಗಿವೆ. (ರೋಮಾ. ೫. ೮. ೧ ಯೋಹಾ. ೪. ೧೦.) ಪ್ರೀತಿ ಇಲ್ಲದ ಸಭೆಯವರ ಆತ್ಮಪ್ರಯೋಜನಕ್ಕಾಗಿ ಪ್ರಾಣ ಕೊಡುವಂತೆ ಮಾಡುವ ಗುಣವು ಕ್ರಿಸ್ತನ ಪ್ರೀತಿಯಿಂದಲೇ ಹುಟ್ಟ ತಕ್ಕದ್ದು.

2. ಪೌಲನು ಸಭೆಯವರಿಂದ ತಾನೇ ಏನೂ ತೆಗೆದು ಕೊಳ್ಳದೆ ಇದ್ದಾಗ್ಯೂ, ಮತ್ತೊಬ್ಬರ ಮೂಲಕವಾಗಿ ತಂತ್ರದಿಂದ ಅವರ ದ್ರವ್ಯವನ್ನು ಅಪಹರಿಸಿರುವನೆಂದು ಶತ್ರುಗಳು ಅಪದೂರು ಹೇಳಿರುವರು. ಅದು ದೊಡ್ಡ ಸುಳ್ಳೆಂದು ತೋರಿಸುತ್ತಾನೆ.

3. ಇದು ಪೌಲನ ಕೋರಿಕೆಯ ಪ್ರಕಾರ ಆ ಸಮಯದಲ್ಲಿ ತೀತನು ಮಾಡಿದ ಪ್ರಯಾಣವೆಂದು ತೋರುತ್ತದೆ. (೭. ೬.)

4. ಈ ಸಹೋದರನು ಯಾರೆಂದು ನಮಗೆ ತಿಳಿಯದು; ಆದರೆ ಕೊರಿಂಥ್ಯರಿಗೆ ಚನ್ನಾಗಿ ತಿಳಿಯುವದು. ಅವರೆಲ್ಲರು ಕ್ರಿಸ್ತನ ಹೆಜ್ಜೆ ಜಾಡುಗಳಲ್ಲಿ ಪೌಲನ ಹಾಗೆ ಯಥಾರ್ಥವಾಗಿಯೂ ಯೋಗ್ಯವಾಗಿಯೂ ನಡೆದು ಕೊಂಡರು.

5. ಸಭೆಯವರ ಭಕ್ತಿವೃದ್ಧಿಗಾಗಿ ಇವುಗಳನ್ನು ಹೇಳಿದ ಪೌಲನ ಮನಸ್ಸಿನಲ್ಲಿ ಎರಡು ವಿಷಯಗಳನ್ನು ಕುರಿತು ಚಿಂತೆಯುಂಟಾಗಿತ್ತು. ನಾನಾ ಕಕ್ಷಿಗಳಿಗೂ ವಾಗ್ವಾದಗಳಿಗೂ ದುರ್ಮಾರ್ಗಗಳಿಗೂ ಸ್ಥಳ ಕೊಟ್ಟಿದ್ದ ಅನೇಕರು, ತಾವು ಮಾಡಿದ ಪಾಪಗಳನ್ನು ಕುರಿತು ಪಶ್ಚಾತ್ತಾಪ ಪಡದೆ ಇರುವರೇನೋ ಎಂಬುವದು ಒಂದು. ತಾನು ಅಪೊಸ್ತಲ ಅಧಿಕಾರದಿಂದ ಅವರ ಮಧ್ಯದಲ್ಲಿ ಬಂದು ಅವರನ್ನು ಶಿಕ್ಷಿಸ ಬೇಕಾದ ಅವಶ್ಯವಿರುವದೇನೋ ಎಂಬುವದು ಒಂದು. ಹೆತ್ತವರಿಗೆ ಮಕ್ಕಳ ವಿಷಯ ಇರುವ ಚಿಂತೆಗಿಂತ, ಉತ್ತಮ ಬೋಧಕರಿಗೆ ಸಭೆಗಳ ವಿಷಯ ಅಧಿಕವಾದ ಚಿಂತೆ ಉಂಟೆಂದು ತಿಳಿಯ ಬೇಕು.

6. ಅಪರಾಧಿಗಳು ಪಶ್ಚಾತ್ತಾಪ ಪಟ್ಟು ಗುಣ ಪಡದ ಪಕ್ಷದಲ್ಲಿ ಮೋಶೆಯ ನ್ಯಾಯಪ್ರಮಾಣದ ಪ್ರಕಾರವಾಗಿಯೂ, (ದ್ವಿತೀಯ ನ್ಯಾ. ೧೯. ೧೫.) ಕ್ರಿಸ್ತನ ಕಟ್ಟಳೆಯ ಪ್ರಕಾರವಾಗಿಯೂ, (ಮತ್ತಾ. ೧೮. ೧೬.) ಇಬ್ಬರು ಮೂವರು ಸಾಕ್ಷಿಗಳ ವಾಂಗ್ಮೂಲದಿಂದ ಅವರನ್ನು ಖಂಡಿಸ ಬೇಕಾಗಿರುತ್ತದೆ ಎಂಬುವದೇ ಇದರ ತಾತ್ಪರ್ಯವು.

ಬಲಹೀನನಾಗಿರದೆ, [1]ನಿಮ್ಮಲ್ಲಿ ಬಲವಾಗಿರುವ ಕ್ರಿಸ್ತನು ನನ್ನಲ್ಲಿ ಮಾತಾಡುತ್ತಾನೆಂಬದರ ಪರೀಕ್ಷೆಯನ್ನು
೪ ಹುಡುಕುತ್ತೀರಲ್ಲ? ಹ್ಯಾಗಂದರೆ ಅವನು ಬಲಹೀನತ್ವದಿಂದ ಶಿಲುಬೆಗೆ ಹಾಕಲ್ಪಟ್ಟಾಗ್ಯೂ, ದೇವರ ಬಲ
ದಿಂದ ಬದುಕುತ್ತಾನೆ. ಹಾಗೆ ನಾವೂ ಅವನಲ್ಲಿ ಬಲಹೀನರಾಗಿದ್ದರೂ, ದೇವರ ಬಲದಿಂದ ಅವನ ಸಂಗಡ
ನಿಮಗಾಗಿ ಬದುಕುವೆವು.
೫ ವಿಶ್ವಾಸದಲ್ಲಿದ್ದೀರೇನೋ, ನಿಮ್ಮನ್ನು [2]ಶೋಧಿಸಿ ಕೊಳ್ಳಿರಿ; ನಿಮ್ಮನ್ನು ಪರೀಕ್ಷಿಸಿ ಕೊಳ್ಳಿರಿ. ನೀವು ಆಗದವ
೬ ರಲ್ಲದಿದ್ದರೆ, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂದು, ನಿಮ್ಮನ್ನು ನೀವೇ ತಿಳುಕೊಳ್ಳುವದಿಲ್ಲವೋ? ಆದರೆ
೭ ನಾವು ಆಗದವರಲ್ಲವೆಂದು, ನೀವು ತಿಳುಕೊಳ್ಳುವಿರೆಂಬದಾಗಿ ನಂಬುತ್ತೇನೆ. ಆದರೆ ನಾವು ಪರೀಕ್ಷಿತರೆಂದು
ಕಾಣುವದಕ್ಕಲ್ಲ, ನಾವು ಆಗದವರಂತೆ ಇದ್ದರೂ, ನೀವೇ ಒಳ್ಳೇದನ್ನು ಮಾಡುವದಕ್ಕೆ ನೀವು [3]ಕೆಟ್ಟದ್ದೇನೂ
೮ ಮಾಡದ ಹಾಗೆ, ದೇವರನ್ನು ಬೇಡುತ್ತೇನೆ. ಯಾಕಂದರೆ ಸತ್ಯಕ್ಕೆ ವಿರೋಧವಾಗಿ ಅಲ್ಲ, ಸತ್ಯಕ್ಕೋಸ್ಕರ
೯ ವೇ ಏನಾದರೂ ಮಾಡ ಬಲ್ಲೆವು. ನಾವು ಬಲಹೀನರಾಗಿಯೂ, ನೀವು ಬಲವುಳ್ಳವರಾಗಿಯೂ, ಇರು
ವಾಗ, ಸಂತೋಷ ಪಡುತ್ತೇವೆ. ಇದಲ್ಲದೆ ನೀವು ಸಂಪೂರ್ಣರಾಗ ಬೇಕೆಂಬುವದನ್ನೇ ಬೇಡುತ್ತೇವೆ.
೧೦ ಕೆಡವಿ ಹಾಕುವದಕ್ಕಲ್ಲ, ಕಟ್ಟುವದಕ್ಕೆ ದೇವರು ನನಗೆ ಕೊಟ್ಟ ಅಧಿಕಾರದ ಪ್ರಕಾರ, ನಾನು ಸಮಿಾಪದಲ್ಲಿ
ದ್ದು ಕಠಿಣವಾಗಿ ನಡಿಸದ ಹಾಗೆ, ದೂರದಲ್ಲಿದ್ದು ಇವುಗಳನ್ನು ಬರೆಯುತ್ತೇನೆ.
೧೧ ಕಡೆಯಲ್ಲಿ, ಸಹೋದರರೇ, [4]ಸಂತೋಷ ಪಡಿರಿ; ಸಂಪೂರ್ಣರಾಗಿರಿ; ಆದರಣೆ ಪಡಿರಿ; ಒಂದೇ ಮನಸ್ಸಾಗಿ
೧೨ ರ್ರಿ; ಸಮಾಧಾನವಾಗಿರ್ರಿ; ಆಗ ಪ್ರೀತಿ ಸಮಾಧಾನಗಳ ದೇವರು ನಿಮ್ಮ ಸಂಗಡ ಇರುವನು. ಒಬ್ಬರನ್ನೊ
೧೩ ಬ್ಬರು ಪರಿಶುದ್ಧ ಮುದ್ದಿನಿಂದ ವಂದಿಸಿರಿ. ಪರಿಶುದ್ಧರೆಲ್ಲರು ನಿಮ್ಮನ್ನು ವಂದಿಸುತ್ತಾರೆ.
೧೪ ಕರ್ತನಾದ [5]ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮದ ಅನ್ಯೋನ್ಯವೂ, ನಿಮ್ಮೆ
ಲ್ಲರ ಸಂಗಡ ಇರಲಿ. ಆಮೆನ್.

1. ಅಪರಾಧಿಗಳನ್ನು ದಂಡಿಸುವದರಿಂದ ಪೌಲನು ತಾನು ಕ್ರಿಸ್ತನ ಸಂಗಡ ಸಮ್ಮಂಧ ಪಟ್ಟವನೆಂದು ಪ್ರತ್ಯಕ್ಷವಾಗಿ ತೋರಬಂತು. ಕ್ರಿಸ್ತನು ಬಲಹೀನನಾಗಿ ಶಿಲುಬೆಯ ಮೇಲೆ ಪ್ರಾಣ ಬಿಟ್ಟಾಗ್ಯೂ, ಮಹಾ ಬಲವುಳ್ಳವನಾಗಿ ಎದ್ದನು. ಆತನಿಂದ ಜೀವವನ್ನೂ ಬಲವನ್ನೂ ಹೊಂದಿದ ಪೌಲನು ಸಭೆಯನ್ನು ತಿದ್ದುಪಾಟು ಮಾಡುವದರಲ್ಲಿ ಈ ಅಧಿಕಾರವನ್ನು ಸಲ್ಲಿಸುವವನಾಗಿದ್ದನು.

2. ನಾನು ಅಪೊಸ್ತಲ ಅಧಿಕಾರ ಹೊಂದಿದವನೋ ಎಂದು ನನ್ನನ್ನು ಶೋಧಿಸಿ ತಿಳುಕೊಳ್ಳ ಮನಸ್ಸಾಗಿರುವ ನೀವು (೫. ವ.) ವಿಶ್ವಾಸಭಕ್ತಿಗಳಿಂದ ಕ್ರಿಸ್ತನ ಸಮ್ಮಂಧಿಕರಾಗಿದ್ದೀರೋ? ಎಂದು ಮೊದಲು ನಿಮ್ಮನ್ನು ಶೋಧಿಸಿ ತಿಳುಕೊಳ್ಳಿರಿ. ಹೀಗೆ ಶೋಧಿಸುವದರಿಂದ ನೀವು ಆತನ ಉತ್ತಮ ಶಿಷ್ಯರೆಂಬು ನಿಶ್ಚಯವಾಗಿ ತೋರಿದರೆ, ನಾನು ಅಪೊಸ್ತಲ ಅಧಿಕಾರ ಹೊಂದಿದ ಆತನ ಉತ್ತಮ ದಾಸನೆಂದು ತಿಳಿದು ಕೊಳ್ಳ ಬಹುದು, ಅನ್ನುತ್ತಾನೆ.

3. ಕೆಟ್ಟದ್ದು ಮಾಡಿದವರನ್ನು ದಂಡಿಸುವದರಿಂದ ಅವನು ತನಗುಂಟಾಗಿರುವ ಅಪೊಸ್ತಲ ಅಧಿಕಾರವನ್ನು ತೋರಿಸುವದಕ್ಕಿಂತ, ಅವರು ಮೇಲು ಹೊಂದ ತಕ್ಕ ವಿಷಯದಲ್ಲಿ ಆ ಅಧಿಕಾರವನ್ನು ರುಜು ಪಡಿಸ ಶಕ್ತಿ ಇಲ್ಲದವನಂತೆ ಇರ ಅಪೇಕ್ಷಿಸುತ್ತಾನೆ. ಭಕ್ತಿ ವಿಷಯದಲ್ಲಿ ಅವರು ಸ್ಥಿರ ಉಳ್ಳವರಾಗಿದ್ದರೆ, ತಾನು ಬಲಹೀನನ ಹಾಗೆ ಕಾಣಲ್ಪಟ್ಟರೂ ದೊಡ್ಡದಲ್ಲ, ಅನ್ನುತ್ತಾನೆ. ಅವರು ಸಂಪೂರ್ಣರಾಗ ಬೇಕೆಂಬುವದೇ ಅವನ ಖಂಡಿತವಾದ ಕಟ್ಟಳೆಗಳ ಮುಖ್ಯ ಗುರಿಯಾಗಿತ್ತು.

4. ಕಲಹಗುಣವೂ ವಾಗ್ವಾದವೂ ಉಳ್ಳ ಕೊರಿಂಥದ ಸಭೆಯವರಿಗೆ ಈ ವಚನಗಳಲ್ಲಿರುವ ಬುದ್ಧಿಯು ಬಹು ತಕ್ಕದ್ದಾಗಿರುವದು.

5. ಯೆಹೂದ್ಯ ಸಭೆಗೆ ತ್ರಿವಿಧ ಆಶೀರ್ವಾದವು ಹೇಳಲ್ಪಟ್ಟ ಪ್ರಕಾರ (ಅಂಕೆ. ೬. ೨೩—೨೭.) ಕ್ರೈಸ್ತಸಭೆಗೂ ತ್ರಯೇಕ ದೇವರ ಶ್ರೇಷ್ಠ ಆಶೀರ್ವಾದವು ಹೇಳಲ್ಪಟ್ಟಿತು. ಈ ಆಶೀರ್ವಾದವು ಸದ್ವಿಶ್ವಾಸದಿಂದ ಆತನ ಸಂಗಡ ಐಕ್ಯವಾಗಿರುವ ಭಕ್ತರಿಗೂ ಸಭೆಗಳಿಗೂ ಸಂಪೂರ್ಣವಾಗಿ ಉಂಟಾಗುತ್ತದೆ. ಮತ್ತೊಬ್ಬರಿಗೆ ಇದರಲ್ಲಿ ಭಾಗವೇನೂ ಇರದು.

# THE EPISTLE OF PAUL THE APOSTLE TO THE GALATIANS.

## ಅಪೊಸ್ತಲನಾದ ಪೌಲನು ಗಲಾತ್ಯರಿಗೆ ಬರೆದ ಪತ್ರಿಕೆಯ ಪೀಠಿಕೆ.

ಗಲಾತ್ಯ ನಾಡು ಚಿಕ್ಕ ಆಸ್ಯದ ಮಧ್ಯದಲ್ಲಿತ್ತು. ಕ್ರಿಸ್ತನಿಗೆ ಮುಂಚೆ ೨೮೦ನೇ ವರುಷದಲ್ಲಿ ಫ್ರಾನ್ಸ್ ದೇಶದಲ್ಲಿ ಇದ್ದ ಗಾಲರು ಎಂದು ಕರೆಯಲ್ಪಟ್ಟ ಜನರು ಆ ನಾಡನ್ನು ಹಿಡಿದು ಕೊಂಡು ಅದರಲ್ಲಿ ಒಕ್ಕಲಿದ್ದದರಿಂದ, ಆ ನಾಡಿಗೆ ಗಲಾತ್ಯ ಎಂದು ಹೆಸರಾಯಿತು. ಗ್ರೀಕ ದೇಶದಿಂದಲೂ ಅನೇಕ ಜನರು ಅಲ್ಲಿಗೆ ಹೋಗಿ ಒಕ್ಕಲಿದ್ದರು. ಯೆಹೂದ್ಯರಲ್ಲಿಯೂ ಅನೇಕರು ವ್ಯಾಪಾರದ ನಿಮಿತ್ತ ಅಲ್ಲಿಗೆ ಹೋಗಿ ಒಕ್ಕಲಿದ್ದರು. ಕ್ರಿಸ್ತನಿಗೆ ಮುಂಚೆ ೧೮೯ನೇ ವರುಷದಲ್ಲಿ ಅದು ರೋಮಾಯರ ಧೊರೆತನಕ್ಕೆ ಒಳಪಟ್ಟು, ೨೬ನೇ ವರುಷದಲ್ಲಿ ಪೂರ್ಣವಾಗಿ ಅವರ ಸ್ವಾಧೀನವಾಯಿತು.

ಅಪೊಸ್ತಲನಾದ ಪೌಲನು ಸುವಾರ್ತೆ ಪ್ರಸಂಗಿಸುವದಕ್ಕಾಗಿ ಲುಕವೋನ್ಯ ದೇಶದ ಸುತ್ತಲಿನ ಶೀಮೆಗಳಿಗೆ ಹೋದ ಸಮಯದಲ್ಲಿ ಗಲಾತ್ಯ ನಾಡಿಗೂ ಹೋಗಿರ ಬಹುದು. (ಅಪೊ. ಕ್ರಿ. ೧೪. ೬, ೭.) ಅವನು ಎರಡನೇ ಸಾರಿ ಪ್ರಯಾಣ ಮಾಡಿದಾಗ ಸೀಲನ ಸಂಗಡ ಅಲ್ಲಿಗೆ ಹೋದದ್ದು ನಿಶ್ಚಯ. (ಅಪೊ. ಕ್ರಿ. ೧೬. ೬.) ಇದಕ್ಕೆ ಮುಂಚೆ ಅವನು ಅಲ್ಲಿ ಸಭೆಗಳನ್ನು ಸ್ಥಾಪಿಸದೆ ಇದ್ದಾಗ್ಯೂ, ಈ ಸಾರಿ ಅವುಗಳನ್ನು ಸ್ಥಾಪಿಸಿರುವನೆಂಬುವದಕ್ಕೆ ಸಂಶಯವಿಲ್ಲ. ಮೂರು ವರುಷಗಳ ತರುವಾಯ ಆ ಸಭೆಗಳನ್ನು ನೋಡುವದಕ್ಕೆ ಹೋದನು. (ಅಪೊ. ಕ್ರಿ. ೧೮. ೨೩.)

ಈ ಸಭೆಗಳಿಗೆ ಶೇರಿದವರಲ್ಲಿ ಕೆಲವು ಮಂದಿ ಯೆಹೂದ್ಯರೂ, ಬಹು ಮಂದಿ ಜನಾಂಗಗಳವರೂ ಇದ್ದರು. (ಗಲಾ. ೪. ೮.) ಜನಾಂಗಗಳವರಾದ ಕ್ರೈಸ್ತರು ಹಳೇ ಒಡಂಬಡಿಕೆಯ ಗ್ರಂಥಗಳನ್ನು ಚನ್ನಾಗಿ ಕಲಿತವರಾಗಿದ್ದರೆಂದು ತೋರುತ್ತದೆ. (೪. ೨೧—೩೧.) ಅವರು ಕ್ರಿಸ್ತನ ಮಾರ್ಗವನ್ನು ಸಂತೋಷವಾಗಿ ಅಂಗೀಕರಿಸಿದರು. ಮತ್ತು ಅದನ್ನು ಪ್ರಸಂಗಿಸಿದ ಪೌಲನ ಮೇಲೆ ಬಹು ಪಕ್ಷವುಳ್ಳವರಾಗಿದ್ದರು. (೪. ೧೪, ೧೫; ೫. ೭.) ಕೆಲವು ದಿವಸಗಳ ತರುವಾಯ ಯೆಹೂದ್ಯ ಬೋಧಕರು ಅಲ್ಲಿಗೆ ಹೋದರು. ಆ ಕಾಲದಲ್ಲಿ ಪೌಲನಿಗೆ ಕೊರಿಂಥ ಪಟ್ಟಣದಲ್ಲಿ ಬಹಳ ಎಡತಡೆಯಾಗಿದ್ದ ಯೆರೂಸಲೇಮಿನ ಕಕ್ಷಿಗಾರರೇ ಹೀಗೆ ಗಲಾತ್ಯ ಶೀಮೆಗೆ ಹೋಗಿರುವರೆಂದು ತೋರುತ್ತದೆ. (ಅಪೊ. ಕ್ರಿ. ೧೫. ೧, ೨.) ಈ ಕಳ್ಳಬೋಧಕರು ಗಲಾತ್ಯ ಸಭೆಗಳಲ್ಲಿ ಒಳನುಗ್ಗಿ, ರಕ್ಷಣೆಯ ವಿಷಯದಲ್ಲಿ ಜನಾಂಗಗಳವರಾದ ಕ್ರೈಸ್ತರು ಪರಿಛೇದನೆ ಹೊಂದಿ ಮೋಶೆಯ ನ್ಯಾಯಪ್ರಮಾಣವನ್ನು ಅವಶ್ಯವಾಗಿ ಕೈಕೊಳ್ಳ ಬೇಕೆಂದು ಬೋಧಿಸಿದರು. ಮತ್ತು ಪೌಲನು, ಪೇತ್ರನು ಮುಂತಾದ ಹನ್ನೆರಡು ಮಂದಿ ಅಪೊಸ್ತಲರಿಗೆ ಕಡಿಮೆಯಾದವನೆಂದೂ, (೧, ೨. ಸಂಧಿ.) ಯೆಹೂದ್ಯರ ಅಭಿಮಾನವನ್ನಪೇಕ್ಷಿಸಿ, ನ್ಯಾಯಪ್ರಮಾಣವನ್ನು ಅನುಸರಿಸಿದಂಥ ಅವನು, ಜನಾಂಗಗಳವರು ಅದನ್ನು ಅನುಸರಿಸುವದು ಅವಶ್ಯವಲ್ಲವೆಂದು ಬೋಧಿಸಿದ್ದರಿಂದ ಅವನು ಯಥಾರ್ಥವಂತನಲ್ಲವೆಂದೂ ಹೇಳಿದರು. (೫. ೧೧.)

ಅವರು ಇಂಥ ಬೋಧನೆಯಿಂದ ಸಭೆಯಲ್ಲಿ ಭೇದವನ್ನುಂಟು ಮಾಡಿ, (೫. ೧೫.) ಅನೇಕರು ಸತ್ಯಮಾರ್ಗವನ್ನು ಬಿಟ್ಟು ತಪ್ಪು ದಾರಿಯಲ್ಲಿ ನಡಿಯುವಂತೆ ಮಾಡಿದರು. (೧. ೬; ೩. ೧; ೪. ೯.) ಹೀಗೆ ಮಾರ್ಗ ತಪ್ಪಿದವರು ಸುವಾರ್ತೆಯ ಸತ್ಯಗಳನ್ನು ಮುಂಚೆ ಭಕ್ತಿವೈರಾಗ್ಯದಿಂದ ಅಂಗೀಕರಿಸಿದ ಪ್ರಕಾರವೇ, ಕಳ್ಳ ಬೋಧಕರ ಸುಳ್ಳು ಉಪದೇಶಗಳನ್ನು ಸಹ ಅಂಗೀಕರಿಸಿದರು.

ಈ ಉಪದೇಶಗಳೆಲ್ಲಾ ಸತ್ಯವಲ್ಲವೆಂದು ಪೌಲನು ಅವರಿಗೆ ಮುಖಾಮುಖಿಯಾಗಿ ಹೇಳಿ ಇದ್ದನು. (೧. ೯; ೪. ೧೬.) ಆದಾಗ್ಯೂ ಆ ಸುಳ್ಳು ಬೋಧನೆಗಳು ಬರಬರ ಹೆಚ್ಚಾದದರಿಂದ ಅವುಗಳನ್ನು ಖಂಡಿಸುವದಕ್ಕೆ ೫೪ನೇ ವರುಷದಲ್ಲಿ ಪೌಲನು ಈ ಪತ್ರಿಕೆಯನ್ನು ಕೊರಿಂಥ ಪಟ್ಟಣದಿಂದಲಾದರೂ, (ಅಪೊ. ಕ್ರಿ. ೧೮. ೧—೩; ೨೦. ೧—೩.) ಎಫೆಸ ಪಟ್ಟಣದಿಂದಲಾದರೂ, (ಅಪೊ. ಕ್ರಿ. ೧೯. ೧೦.) ಬರೆದಿರುವನೆಂದು ತೋರುತ್ತದೆ. ಈ ಪತ್ರಿಕೆಯ ಆರಂಭದಲ್ಲಿರುವ ಖಂಡಿತವಾದ ಮಾತುಗಳನ್ನೂ, ಈ ಪತ್ರಿಕೆಯಲ್ಲಿ ಹೇಳಿರುವ ನ್ಯಾಯಗಳನ್ನೂ ಕುರಿತು ಯೋಚಿಸುವಾಗ, ಆಗ ಸಭೆಗೆ ಸಂಭವಿಸಿದ್ದ ಅಪಾಯವು ದೊಡ್ಡದೆಂದು ತೋರುತ್ತದೆ. ಈ ಪತ್ರಿಕೆಯ ಮುಖ್ಯ ತಾತ್ಪರ್ಯವು, ಯೆಹೂದ್ಯ ಬೋಧಕರ ಉಪದೇಶಗಳು ಕ್ರಿಸ್ತನ ಮಾರ್ಗದ ಸ್ವಭಾವವನ್ನೂ ಶ್ರೇಷ್ಠತ್ವವನ್ನೂ ಕೆಡಿಸ ತಕ್ಕವುಗಳೆಂದು ನಿರೂಪಿಸುವದೇ. ತನ್ನನ್ನು ಕುರಿತೂ, ತನ್ನ ಅಪೊಸ್ತಲ ಅಧಿಕಾರವನ್ನು ಕುರಿತೂ ಶತ್ರುಗಳು ಕಲಿಸಿದ ಉಪದೇಶಗಳೆಲ್ಲಾ ಸತ್ಯವಲ್ಲವೆಂದು ಪೌಲನು ಮೊದಲು ತೋರಿಸಿ, ತರುವಾಯ ತನ್ನ ಅಭಿಪ್ರಾಯವನ್ನು ತಿಳಿಯ ಮಾಡುತ್ತಾನೆ.

ರೋಮಾಯರ ಪತ್ರಿಕೆಯ ಹಾಗೆಯೇ ಈ ಪತ್ರಿಕೆಯಲ್ಲಿಯೂ, ಪಾಪಿಷ್ಠರಾದ ಮನುಷ್ಯರು ನೀತಿವಂತರಾಗುವ ಮುಖ್ಯ ವಿಷಯವನ್ನು ಕುರಿತು ಹೇಳಿ ಇದೆ. ರೋಮಾಯರ ಪತ್ರಿಕೆಯಲ್ಲಿ ಇದನ್ನೇ ಮುಖ್ಯ ವಿಷಯವಾಗಿಯೂ, ಈ ಪತ್ರಿಕೆಯಲ್ಲಿ ಇದನ್ನು ಯೆಹೂದ್ಯ ಬೋಧಕರ ಸಂಗಡ ಮಾಡುವ ತರ್ಕ ಸಮ್ಮಂಧವಾಗಿಯೂ ತೋರಿಸಿ ಇದೆ.